# ಬೆಂಗಳೂರು ನಗರ ವಿಶ್ವವಿದ್ಯಾಲಯ

ಅಂಬೇಡ್ಕರ್ ವೀಧಿ, ಬೆಂಗಳೂರು–೧

# ಕನ್ನಡ ಭಾಷಾ ಪಠ್ಯ

## ಬಿಬಿಎ

## (ನಾಲ್ಕನೇ ಸೆಮಿಸ್ಟರ್)

**ಪ್ರಧಾನ ಸಂಪಾದಕರು**

ಡಾ. ಡಿ. ಡೊಮಿನಿಕ್

**ಕಾರ್ಯನಿರ್ವಾಹಕ ಸಂಪಾದಕರು**

ಡಾ. ಕೆ ವೈ ನಾರಾಯಣ ಸ್ವಾಮಿ

**ಪರಿಶೀಲಕರು**

ಡಾ. ಬೆಳಕೆರೆ ಲಿಂಗರಾಜಯ್ಯ

**ಸಂಪಾದಕರು**

ಡಾ. ಎಸ್ ಎಲ್ ಮಂಜುನಾಥ

ಡಾ. ಎನ್ ರವಿ

ಡಾ. ಜಗದೀಶ್‌ಬಾಬು ಬಿ ವಿ

## ಪ್ರಸಾರಾಂಗ

## ಬೆಂಗಳೂರು ನಗರ ವಿಶ್ವವಿದ್ಯಾನಿಲಯ

# ಬಿಬಿಎ 4 ನೇ ಸೆಮಿಸ್ಟರ್ ಕನ್ನಡ ಪಠ್ಯ

ಪರಿವಿಡಿ

## ಘಟಕ 1. ಬದುಕು


| | | | |
|---|---|---|---|
| 1.1 | ಬದುಕು ಚಿಗುರುವುದೆಂದರೆ | ನಾಗರೇಖಾ ಗಾವಂಕರ | 04 |
| 1.2 | ತಾಯಿ | ಬೆಸಗರಹಳ್ಳಿ ರಾಮಣ್ಣ | 05 |
| 1.3 | ಜೀವನ ಅಮರ; ಹುಟ್ಟು ಸಾವು ತಾತ್ಕಾಲಿಕ | ಡಾ. ಕೆ. ಶಿವರಾಮ ಕಾರಂತ | 19 |
| 1.4 | ಯಾತಕ್ಕೆ ಮಳೆ ಹೋದವೊ | ಜನಪದಗೀತೆ | 26 |


## ಘಟಕ 2. ಧರ್ಮ


| | | | |
|---|---|---|---|
| 2.1 | ಬಜಾರಿನಲ್ಲಿ ಬುದ್ಧ..... | ಸವಿತಾ ನಾಗಭೂಷಣ | 28 |
| 2.2 | ಕಲ್ಲಂಗಡಿಯ ಇಪ್ಪತ್ತು ರೂಪಾಯಿ | ಡಾ. ಡಿ.ಕೆ. ಚೌಟ | 31 |
| 2.3 | ಧರ್ಮ ಮತ್ತು ಭಕ್ತಿ | ರಹಮತ್ ತರೀಕೆರೆ | 36 |
| 2.4 | ಮುಸ್ಲಿಂ ಮದುವೆಯೊಂದರಲ್ಲಿ | ನಾಗತೀಹಳ್ಳಿ ಚಂದ್ರಶೇಖರ | 44 |


## ಘಟಕ 3. ದೇಶೀಯತೆ


| | | | |
|---|---|---|---|
| 3.1 | ಮುಂಜಾವು | ಮೂಡ್ನಾಕೂಡು ಚಿನ್ನಸ್ವಾಮಿ | 48 |
| 3.2 | ಅಗಸರ ಅಣ್ಣೆಮ್ಮ | ಚೆನ್ನಣ್ಣ ವಾಲೀಕಾರ | 51 |
| 3.3 | ನಮ್ಮ ಕಾರವಾರ | ಗಿರಡ್ಡಿ ಗೋವಿಂದರಾಜ | 62 |
| 3.4 | ದಂತವೈದ್ಯರೇ ನಮಸ್ಕಾರ! | ಭುವನೇಶ್ವರಿ ಹೆಗಡೆ | 70 |


## ಘಟಕ 4. ಜಾಗತೀಕರಣ


| | | | |
|---|---|---|---|
| 4.1 | ಸೆಟ್ಟಿಯ ಅಂಗಡಿ | ಸಿದ್ಧಲಿಂಗ ಪಟ್ಟಣಶೆಟ್ಟಿ | 77 |
| 4.2 | ಅಕ್ಷರ, ಅನ್ನ, ಅನ್ಯಾಯ | ಡಾ. ಮೊಗಳ್ಳಿ ಗಣೇಶ್ | 82 |
| 4.3 | ಜನಪದ ಕರಕುಶಲ ಕಲೆಗಳು – ಜಾಗತೀಕರಣ | ಬಿ.ಎಸ್. ತಲವಾಡಿ | 89 |
| 4.4 | ಅನ್ನ ಹಳಸುವುದಿಲ್ಲ ಮಣ್ಣಿನ ಬುತ್ತಿಯಲ್ಲಿ | ಸುಬ್ಬು ಹೊಲೆಯಾರ್ | 99 |

# ಘಟಕ 1. ಬದುಕು

**ಆಶಯ:**

"ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು!
ಕೊಂದಿಹರೆಂಬುದನರಿಯದೆ
ಬೆಂದೊಡಲ ಹೊರೆವುತ್ತಲಿದೆ?
ಅದಂದೆ ಹುಟ್ಟಿತ್ತು ಅದಂದೇ ಹೊಂದಿತ್ತು!!
ಕೊಂದವರುಳಿವರೆ ಕೂಡಲ ಸಂಗಮದೇವ"

~ * ~ * ~ * ~

## 1.1 ಬದುಕು ಚಿಗುರುವುದೆಂದರೆ

**– ನಾಗರೇಖಾ ಗಾವಂಕರ**

ನನ್ನ ನಾ ನಿನ್ನ ನೀ
ತಿಳಿದುಕೊಳ್ಳುವುದು.
ನನ್ನೊಳಗೆ ನೀ ನಿನ್ನೊಳಗೆ ನಾ
ಬೆಳಕಾಗುವುದು
ಒಳಮೈ ಹೊರಮೈ ಕಾಯಿಸಿಕೊಳ್ಳುವುದು
ಕಿರಣಕ್ಕೊಡ್ಡಿ ಮನಸ್ಸನ್ನು
ದುಡಿಸಿಕೊಳ್ಳುವುದು
ಹಸಿರ ಮತ್ತೆ ಮತ್ತೆ
ಮೆದ್ದು ಮುದಗೊಳ್ಳುವುದು

ಬೆಳಕ ಆಸರೆಗಾಗಿ ಕನಸ ಕಟ್ಟುವುದು
ನೀರ ಮೇಲಿನ ನಡೆಗೂ
ಗುರಿಯ ಇಡುವುದು

ಬೇಲಿ ಗೂಟಕ್ಕೆ ಹಬ್ಬಿದ ಬಳ್ಳಿ
ಗೂಟ ಗೂಟವ ದಾಟಿ ಬೇಲಿಯನ್ನೆ
ಹಸಿರ ಕೋಣೆಯಾಗಿಸಿ ಅಲಂಕರಿಸುವುದು
ಆಳಕ್ಕೆ ಇಳಿದಿಳಿದು ದೃಢವಾಗುವುದು

ಮನೆ ಹಣತೆಯ ಬೆಳಗಿಸಿಕೊಳ್ಳುವುದು.
ಬತ್ತಿಯ ಮತ್ತೆ ಮತ್ತೆ ಹೊಸೆದು
ಹೊರಗಣ ಹಣತೆಗೂ ತೈಲನ್ನೆರೆಯುವುದು.
ಬೆಳಕನ್ನೆ ಹೊದ್ದುಕೊಳ್ಳುವುದು

~ * ~ * ~ * ~

## 1.2 ತಾಯಿ

**– ಬೆಸಗರಹಳ್ಳಿ ರಾಮಣ್ಣ**

ಆಗಲೇ ಹೊತ್ತು ನೆತ್ತಿಯಲ್ಲಿತ್ತು.

ಹೊಟ್ಟೆಯಿಂದ ದಿಢೀರನೆ ನೆತ್ತಿಯವರೆಗೆ ನುಗ್ಗಿದ ನೋವಿಗೆ ಉರುಗಮ್ಮ ಹಲ್ಲುಮುಡಿ ಕಚ್ಚಿ: 'ಶಿವನೇ– ರಾಮನೇ' ಕಾಪಾಡ್ರಪ್ಪ, ಬ್ಯಾಗೆ ನನ್ನ ನಿಮ್ ಪಾದಕ್ಕೆ ಸೇರ್ಸ್‌ಕೊಳ್ರೋ ನಿಮ್ಮನೆ ಹಾಳಾಗೋಗ... ನನ್ಗಯಾಕೆ ಇಂಗೆ ಇಮ್ಸೆ ಕೊಟ್ಟಿರೋ ನಿಮ್ ಮಕ್ಕಳ ತಿನ್ನೋಳ' ಎಂದು ತಾನು ನಂಬಿದ ದೈವಗಳನ್ನೇ ಬೈಯುತ್ತ ತರಾಟೆಗೆ ತೆಗೆದುಕೊಂಡು; ಸ್ವಲ್ಪ ನೋವು ಕಡಿಮೆಯಾದಂತೆನ್ನಿಸಲು ನಿರಾಳವಾಗಿ ಉಸಿರುಬಿಟ್ಟು ಯೋಚನೆ ಮಾಡತೊಡಗಿದಳು. 'ನನ್ ವಂಸದೇಲಿ ಯಾರೂ ಈ ತರದ ಕ್ಯಾನ್ಸರ್ ಕಾಯ್ಲೆ ಇರನಿಲ್ಲ... ನನ್ ತಲೇಲೆ' ಅದೂ ನಂಗೇ ಕಾಣಿಸಿಕೋ ಬೇಕು ಅಂದ್ರೆ.... ಅಡಡೀ, ಅದೇನ್ ಇರಬೋದು! ತಿಂದಿಟ್ಟು ಅರಗೂದಿಲ್ಲ... ಕಲ್ ತಿಂದ್ ಕಲ್‌ಅರಗಿಸ್ಕೋತಿದ್ದೆ; ಅರ್ಧಪಲ್ಲದ ಮೂಟೆ ತಗ್ಗು ಒಳ್ಳೆ ಗಕ್ಕನೆ ಎಸ್ದು ಬುಡೂವೆ! ನಂಗೆ ಸುತ್ಕಂಡಿದ್ದ ಕರ್ಮ ನೋಡು, ಹೂ! ಮನ್ಸನಿಗೆ ಇಂಥ ನಳ್ಲೂ ಕಾಯ್ಲೆ ಬರಬಾರ್ದು. ಏನಿದ್ರೂ ಒಂದೇ ಚಣದೇಲಿ ಗೊಟಕ್ ಅಂತಾ ಒಂಟೋಗಬೇಕು. ಈ ನೋವು, ಈ ಸಂಕಟ ನಮ್ ಕಂಡ್ರೆ ಆಗದೋರ್ಗೂ ಬ್ಯಾಡ' ಎಂದುಕೊಳ್ಳುತ್ತಿದ್ದಂತೆಯೇ ಪಕ್ಕದ ಮನೆಯ ಬೋರಮ್ಮ ಬಂದವಳು ಅದೂ ಇದೂ ಮಾತಾಡ್ತಾ "ನೀನು ಏನೇ ಯೋಳು ಉರಗವ್ವ ಪ್ರರ್ಪಂಚದ ಮ್ಯಾಲೆ ಸತ್ಯೇವು ನೆಗ್ಗುಬಿದ್ದೋಯ್ತು. ಅಲ್ಲಾ ಇಂಗೂ ಮಾಡಾರಾ! ನಮ್ಮೂರ ಸೆಟ್ಟೆ, ಚಂದ್ರುಸೆಟ್ಟಿ ಅಂಗಡಿ ಮಡಗವ್ನಲ್ಲ, ಅವ್ನ ಗದ್ದೇತಾವೇ ಕಾಳೇಗೌಡನೋರ ಚನ್ನಮ್ಮ ಅನ್ನೋಳ ಭೂಮಿಯೂ ಅದೆ. ಒಳ್ಳೆ ಐನಾತಿಗದ್ದೆ ಎರ್ಡೂವರೆಕರೆ... ಹೊನ್ನಾಪುರದ ಬಯಲೇಲಿ ಎರ್ಡೂವರೆಕರೆ ಅಂದ್ರೆ ಧಮರಂಗ್ ಅಂತಿರಬೋದು. ಅವ್ಳು ಇದ್ಕು ಐದುವರ್ಸ್‌ದೇಲಿ ಗಂಡನ್ನ ತಿನ್ನಕೊಂಡ್ಲು... ಎಲ್ಲ ಪುಡೀ ಹೈಕ್ಳು ಗಂಡೈದನಿಗೆ ಹದ್‌ನಾಲ್ಕು.... ಕೊನೇವಂಗೆ ಆರೊರಸ....'

"ಆ ಹಾಳ್ ಜವರಾಯನಿಗೆ ಕಣ್ಣಿಲ್ಲ... ಸೆಟ್ಟಿ ರಾತ್ರಿ ಒತ್ತೇಲೇನಾರ ಚನ್ನಮ್ಮನ ಮನೆ ಬಾಗ್ಲು ತಟ್ಟಿಗಿಟ್ಟುದ್ನಂತಾ?"

ಅಂಗ್‌ಮಾಡೋಕೆ ಓದ್ರೆ ಮಾರೀಕಂಬಕ್ಕೆ ಕಟ್ಟಾಕಿ, ಉಟ್ಟದು ನಿರ್ವಾಣದ ಮೇಲೆ ದೊಣ್ಣೆ ಚಬ್ಬೆ ತಕೊಂಡು ನೇದು... ತಲೆಬೋಳ್ಸಿ ಬೂದಿ ಸುರ್ದು ಕತ್ತೆಮ್ಯಾಲೆ ಕುಣ್ಸಿ ಊರು ಸುತ್ತ ಮೆರವಣ್ಗೆ ಮಾಡುಬುಡ್ತಾರೆ."

"ಮಂತೆ ಅವು ಇನ್ನೇನು ಮಾಡ್ತ? ಅದೇನ್ ಒಸಿ ಒಡ್ದೇಳು...."

"ಸೆಟ್ಟೇದು ಚನ್ನಮ್ಮನ ಗದ್ದೆ ತಾವು ಆರೂ ಚಿಲ್ರೆ ಎಕ್ರೆ ಗದ್ದೆ ಅದೆ. ಚನ್ನಮ್ಮನ ಗದ್ದೆ ಮ್ಯಾಲೆ ಆಸೆ ಆಗಿ, ಬೌಂಡೇರೀನೇ ತಾನು ಮಾಡ್ಕೋ ಬೇಕೂ ಅಂತ ಆಡಬಾರದ ಆಟ ಆಡ್ದ. ಇವ್ನು ಜಗ್ಗನಿಲ್ಲ. ಇಲ್ಲಿಗಂಟ ಅಟಕಾಯ್ಸ್ಕೊಂಡೇ ಬಂದ್ಲು, ಈಗ ಅದ್ಯಾವುದು 'ತೆನೆನ್ಸೀ ಆಟು' (ಟಿನೆನ್ಸಿ ಆಕ್ಟ್) ಅಂತ ಬಂದಿದ್ದದಂತಲ್ಲವ್ವ, ಅದಕ್ಕೆ ಇವಳ ಸಿಗುಸುಕೊಂಡು ಅವರಿವರ ಬಾಯಿಗೆ ಚೆನ್ನಾಗಿ ತನ್ನೆಡತೀದ ಊದುಬುಟ್ಟು ನಾನೇ ಭೂಮಿ ಮಾಡ್ತಿದ್ದೆ, ತೆನೆನ್ಸೀ ಆಟು ಪರ್ಕಾರ ಉಳುವುನ್ದೇನೇ ಭೂಮಿ ಅಂತೀರಲ್ಲ, ನಂಗೆ ಕೊಡಿ! ಬೇಕಾದ್ರೆ ಜಮೀನ ಉತ್ತು ಬಿತ್ತು ಬ್ಯಾಸಾಯ ಮಾಡ್ತಿದ್ದೋರು ಯಾರು ಅಂತ ಆಜುಬಾಜು ಗದ್ದೆಯೋರ ಸಾಕ್ಷ ಕೇಳಿ, ಅಂತ ದುಪ್ಪೀಕಮೀಸ್ರು ಅಸಿಟ್ಟು ಕಮೀಸ್ರುಗೆಲ್ಲ ಅರ್ಜಿ ಎಟ್ಟವನಂತೆ"

"ಆಜುಬಾಜು ದಾರ್‍ ಎಂಗೋ..."

"ಆಟ್‌ಗಳ್ಳ ನನ್ ಮಕ್ಳು.... ಸುಟ್ಟಕ್ಕಿ ಪುರ್ರನೆ ಆರಿಸ್ ತಾರೆ?"

"ಅವ್ರ ಮನೆ ಹಾಳಾಗ.... ಅವ್ರುಗೆ ಆಪತ್ತು ಬರ"

"ಸೆಟ್ಟಿ ತಾಲ್ಲೂಕು ಅಪೀಸೇಲಿ, ಸೇಕ್‌ದಾರ ಆಫೀಸೇಲೆಲ್ಲ ಭೂಮಿ ನಂದು ಅಂತ ಓಡಾಡ್ಕೊಂಡು 'ಪಾಣೀ' ಬರಸ್ತಾ ಅವ್ನಂತೆ. ಯಾರಾರು ಈ ಸೆಟ್ಟಿನನ್ ಮಗನೆ ಅವನ ತಾವು ತಿಂದು ರಿಕಾರೊಟ್ಟೆಲ್ಲ ಬದಲಾಯ್ಸ್ ತಾರೋ ಅವರೆಲ್ಲ ನಾನು ಇದ್ದದ್ದು ಇದ್ದಂಗೆ ಯೋಳೀನಿ ಉರುಗಕ್ಕ. ಅವು ವಂಸ ನಿರೋಂಸ ಆಗೋಯ್ತದೆ. ರಿಕಾರೊಟ್ಟು ತಿದ್ದುದೋರ ಕೈ ಸೇದೋಯ್ತದೆ. ಸಾಯೋಕಾಲ್ಕೆ ಬಾಯೀಲಿ ತಲೇಲೆಲ್ಲ ಉಳ, ಉಳಬೀಳ್ತಾವೆ!"

"ಅವ್ರುಗೆ ಮೊಲ್ಲಾಗರ ಬರ....."

"ಚನ್ನಮ್ಮ ನನ್ನತಾವ್ ಬಂದು ಗೊಳೋ ಅಂತ, ಅಕ್ಕ ನನ್ನತಾವು ಏಳ್ಕೊಂಡು ಅಷ್ಟಿಷ್ಟಲ್ಲ ಒಂದು ಅಂಡೆ ಕಣ್ಣೀರು ಸುರಿಸಿದ್ಲು. ಆಮ್ಲಾಯೆ ಹೇಳದ್ಲು ಅಕ್ಕಾ ಒಸಿ ಉರುಗಕ್ಕನಿಗೆ ಯೇಳು ಅವ್ರ ಮಗ ಪುಟ್ಟರಾಜಪ್ಪನೇ ಪಾಣಿ ಬರೀಬೇಕು. ಅವಯ್ಯ 'ನಯೀ' ಅಂದುಬುಟ್ರೆ, ಸೆಟ್ಟಿ ನನ್ನದೊಂದು ರೋಮಾನೂ ಅಲ್ಲಾಡೂಕಾಗೂದಿಲ್ಲ. ಈ ನಮ್ಮ ಹೋಬ್ಳಿ ಸೇಕ್ದಾರ ಉಟ್ಟು ಕಳ್ಳ, ನಾನು ಉಳ್ಕೋ ಬೇಕಾದ್ರೆ ಇಳೇಜ್ ಅಕೌಂಟೆಂಟ್ರೆ ಮನ್ಸುಮಾಡಿ ಸತ್ಯಸತ್ಯೇವೆ; ನಾನು ಬಿಲ್‌ಕುಲ್ ಸುಳ್ಳು ಬರೀದಿಲ್ಲ ಅಂದು ಬುಟ್ರೆ ನನ್ ಹೈಕಳ್ ಬಾಯಿಗೆ ಮಣ್ಣು ಬೀಳೂದಿಲ್ಲ ಅಂತ ಗೋಗರಕಂಡ್ಲೂ ಆದ್ರೂ ಒಂದು ಗುಮಾನಿ ಕುಣೀತಾ ಅದೆ...."

"ಏನದು ಗುಮಾನಿ......

"ಏನೂ ಇಲ್ಲ. ನಿನ್ ಮಗನೂ ಎಲ್ಡು ಸಾವಿರ ಲಂಚ ತಿಂದುಬುಟ್ಟವನೆ... ಸೆಟ್ಟಿಕಡೆಯೆ ಅವನೆ ಅಂತ, ಇಂಗಂದೇ ಅಂತ ಬೇಜಾರ್ ಮಾಡ್ಕೊಬ್ಯಾಡ... ಒಂದು ಮನೆ ಉಳಿಸೋ ಶಕ್ತಿ ನಿಂಗದೆ, ನೋಡು ದೊಡ್ಡ ಮನ್ಸು ಮಾಡು... ಜನ್ಮಕೊಟ್ಟೋಳ ಮಾತುಗಿಂತ ಕಾಸು, ಕರೀಮಣಿ ನಿನ್ ಮಗನಿಗೆ ದೊಡ್ಡೆ. ಕೈಲಾಗದೋರ ಕಣ್ಣೀಲಿ ನೀರು ಕೆಡಗುದ್ರೆ... ಆ ಪಾಪ ಏಳೇಳು ಜುಲ್ಮಾನೂ ಬುಡ್ದೆ ಕಾಡ್ತದೆ..." ಎಂದು

ಕುಸುಪಿಸನೆ ಕಿವಿಯಲ್ಲಿ ಹೇಳಿದರೂ ಈ ಸಂಭಾಷಣೆಯ ಕೆಲವು ಸೂಕ್ಷ್ಮ ತುಣುಕುಗಳು ಉರುಗಮ್ಮನ ಸೊಸೆ ಯಶೋದಮ್ಮನ ಕಿವಿಗೆ ಬಿದ್ದು, ಅವಳು ಕೋಣೆಯಿಂದ ಭರ್ರನೆ ಉರಿಯುವ ಕೊಳ್ಳಿಯಂತೆ ಬಂದು; "ಇವ್ರು ಬೋ ಸತ್ಯವಂತೆ, ಊಳಿದೋರೆಲ್ಲ ಕಳ್ಳರು: ಏಳಮ್ಮಮ್ಯಾಲೆ, ನೀನ್ ಬರೋದು ಎರಡು ವೀಳೆದೆಲೆ, ಒಂದು ತುಂಡು ಹೊಗೆಸೊಪ್ಪು, ಮೂರು ಗೋಟು ಅಡಕೆಗೆ! ಅಷ್ಟು ಈಸ್ಕೊಂಡೋಗು, ಉಳಿದ ಮಾತಾಡೋಕೆ ನೀನು ಯಾವೂರ ಸೆಟ್ಟಿ, 'ನಡೀ ಮನಿಯಿಂದ ಆಚೆ' ಎಂದು ಆಜ್ಞೆ ಮಾಡಿದಳು. ಬೋರಮ್ಮ ಉರುಗಮ್ಮನನ್ನೇ ಪಿಳಪಿಳನೆ ಕಣ್ಣಾಡಿಸಿ ನೋಡಿ, ಸೊಸೆಯ ಆರ್ಭಟದ ಮುಂದೆ ಅತ್ತೆ 'ಸೊನ್ನೆ' ಎಂದುಕೊಂಡು ಅವಮಾನದಿಂದ ನೊಂದ ಭಾರದ ಎದೆಯನ್ನು ಹೊತ್ತುಕೊಂಡು, ಮೌನವಾಗಿ ಹೊರಟು ಹೋದಳು. ಬೋರಮ್ಮನಿಗೂ ತನ್ನ ಸೊಸೆಗೂ ಮಾತಿಗೆ ಮಾತು ಬೆಳೆದು ರಣಾಂಗಣ ನಡೆಯಬಹುದೆಂದು ಊಹಿಸಿಯೇ ಡವಗುಡಲಾಂರಭಿಸಿದ್ದ ಉರುಗಮ್ಮನ ಎದೆಯಲ್ಲಿ ಕೆಲವು ಕ್ಷಣಗಳು ಕ್ರಿಯೆಯೇ ನಿಂತಂತಾಗಿ; 'ಅಸ್' ಎಂದು ಒಂದು ಉದ್ದನೆಯ ನಿಟ್ಟುಸಿರು ಕುಲುಮೆಯ ತಿದಿಯಿಂದ ಬಂದಂತೆ ಬಂದುದನ್ನು ಕೇಳಿ, ಯಶೋದ "ಹಾದೀಲಿ ಬೀದೀಲಿ ಹೋಗೋರೆಲ್ಲ ಅದ್ಯಾಕೆ ಮನೇಗೆ ಸೇರ್ಸುಕೊಂಡಿರಿ. ಅದೆಷ್ಟು ಸಲ ನಿಮ್ಗೆ ಹೇಳೂದು. ನೀವೇನು ಮನ್ಸಜಾತೀಗೆ ಹುಟ್ಟುಲಿಲ್ವೆ?"

ಸೊಸೆಯ ನಾಲಗೆಯ ಬಿಲ್ಲಿನಿಂದ ಚಿಮ್ಮಿದ ಕೂರಂಬುಗಳು ಮಾಡಿದ ನೋವಿಗೆ ಬಂದ ಕಣ್ಣೀರನ್ನು ಬಹುಕಷ್ಟದಿಂದ ಉರುಗಮ್ಮ ತಡೆಹಿಡಿಯಲು ಯತ್ನಿಸಿದರೂ, ಕಣ್ಣಂಚನ್ನು ಮೀರಿ ಕೆನ್ನೆಯನ್ನೆಲ್ಲ ತೋಯ್ದಿದುವು.

ರಾತ್ರಿ ಉರುಗಮ್ಮನಿಗೆ ನಿದ್ರೆ ಬರಲಿಲ್ಲ. ಎದೆಯಲ್ಲಿ ಕೊಳ್ಳಿ ಉರಿಯುತ್ತಿತ್ತು. ತನ್ ಮಗನಿಗೆ ಬರುವುದು ಕೇವಲ 750 ರೂಪಾಯಿ ಸಂಬಳದಲ್ಲಿ ಇವನು ನಡೆಸುವ ದರ್ಬಾರು ನೋಡಿದರೆ ಮೇಲ್ ಸಂಪಾದನೆ ಸಂಬಳದ ಎರಡು ಮೂರರಷ್ಟಿರಬಹುದು ಎಂದು ಲೆಕ್ಕಾಚಾರ ಹಾಕಿದಳು. ತನ್ನ ಸೊಸೆಯ ಮೈಮೇಲೆ ಏನೂ ಇಲ್ಲ ಅಂದರೆ 15 ಸಾವಿರ ರೂ.ಗಳ ಬಂಗಾರದ ಒಡವೆಗಳು, ಒಂದಲ್ಲ ಎರಡು ರೇಡಿಯೋಗಳು, ಮನೆಯಲ್ಲಿ ಮಂಚಗಳು, ಕುರ್ಚಿ ಇತ್ಯಾದಿ. ಜೊತೆಗೆ ತನ್ನ ಕುಮಾರಕಂಠೀರವನ ಬಲಗೈಯಲ್ಲಿ ಹೊಗೆಯಾಡುವ ಸಿಗರೇಟು, ಮಿರಿಮಿರಿ ಎಂದು ಮಿಂಚುವ ಬಟ್ಟೆಗಳು; ಇಷ್ಟೆಲ್ಲ ಬರಬೇಕಾದರೆ ಹುಡುಗಾಟದ ಮಾತಲ್ಲ, ಚೆನ್ನಾಗಿ ಜನರ ತಾವು ನುಂಗುತಾ ಅವನೇ ಎಂದುಕೊಂಡು ಉರುಗಮ್ಮ ನಿಟ್ಟುಸಿರು ಬಿಟ್ಟಳು. ತಾನೂ ತನ್ನ ಮಗನ ಈ ಪಾಪದ ಸಂಪಾದನೆಯನ್ನು ತಿಂದೂ ತಿಂದು ತನ್ನ ಪುತ್ರನ ಕೈಯಲ್ಲಿ ನೋವು ಅನುಭವಿಸಿದವರ ನಿಟ್ಟುಸಿರ ಬಿಸಿ ತಗಲಿ, ಆ ಪಾಪದ ಮೊತ್ತವಲ್ಲ ತನ್ನ ಹೊಟ್ಟೆಯಲ್ಲಿ ಕೇಂದ್ರೀಕೃತವಾಗಿ ಕ್ಯಾನ್ಸರ್ ಹುಣ್ಣು ಉತ್ಪತ್ತಿಯಾಗಿದೆ ಎಂದು ಪಾಪಭೀತವಾದ ಅವಳ ಸರಳ ಮನಸ್ಸು ವಾದಿಸತೊಡಗಿತ್ತು. ಮಗನನ್ನು ಕರೆದು, ಈ ಚನ್ನಮ್ಮನ ಕೇಸಿನಲ್ಲಾದರೂ ಧರ್ಮ ಕರ್ಮ ತೂಕ ಮಾಡಿ ನಡೆದುಕೋ ಎಂದು ಮುಲಾಜಿಲ್ಲದೆ ಹೇಳಬೇಕೆಂದು ನಿರ್ಧರಿಸಿದಳು. ಮಗ ರಾಜ ರಾತರಿ ಸುಮಾರು

ಒಂಭತ್ತು ಗಂಟೆಗೆ ಬಂದ. ಊರುಗಮ್ಮ ಪ್ರೀತಿಯಿಂದ ಕರೆದು ಕೂರಿಸಿಕೊಂಡು, ಅವನ ಬಲಹಸ್ತವನ್ನು ಪ್ರೀತಿಯಿಂದ ಹಿಡಿದುಕೊಂಡು ಹೇಳಿದಳು.

"ಮಗ, ನಾನು ಕೂಲಿನಾಲಿ ಮಾಡ್ಕೊಂಡು ತಿನ್ತಿದ್ದಾಗಲೇ ಗುಂಡುಕಲ್ಲು ಇದ್ದಂಗಿದ್ದೆ."

"ಈಗ ನಿನಗೇನಾಗಿದ್ದಾದವ್ವ, ಕಾಯ್ಲೆ ಬಂತು. ಈ ಹಾಳು ಕಾಯ್ಲೆ ನಿಂಗೇ ಬರಬೇಕಾ? ಎಲ್ಲಾ ಕಡೇನೂ ತೋರಿಸಿದನಲ್ಲ, ಗೆಡ್ಡೆ ತೆಗೆದುಹಾಕತೀವಿ ಅಂದಾಗ ಬ್ಯಾಡ ಅಂದೇ. ಬರೀ ಕರೆಂಟು ಕೊಡ್ಸದನಲ್ಲ... ನಿನಗೇನು ಕೊರೆ ಮಾಡೀವ್ನೀ"

"ಅದ್ರೂ ಯಾಕೋ ಇವತ್ತು ಒಂದು ವಿಷಯ ಕೇಳಿದ್ಮ್ಯಾಲೆ... ನನ್ನ ಎದೇಲಿ ಕಬ್ಬಿನ ಗಾಣ ಕಟ್ಟಿದಂಗೆ ಆಗದೆ...."

"ಅದೇನು ಅದು ವಿಷ್ಯ ನಿನ್ ತಲೆ ಕೆಡಿಸಿರೋದು?"

"ಕೈಯ ಮ್ಯಾಲೆ ಕೈ ಹಾಕಿ ಭಾಷೆ ಕೊಟ್ಟರೆ ಹೇಳೀನಿ!"

"ಎಳೆ ಮಗೀನಂಗಾಡಬ್ಯಾಡ ಅದೇನೇಳವ್ವ!"

ಅದೇ ಚನ್ನಮ್ಮನ, ಸೆಟ್ಟಿ ಜಮೀನು ವ್ಯವಹಾರದೇಲಿ ನೀನು ಪಾಣಿ ತಿದ್ದಿ ಅವಳ ಮನೆಹಾಳು ಮಾಡೋಕೆ ನಿಂತಿದ್ದೀಯಂತಲ್ಲ ಹಂಗ್ ಮಾಡಬ್ಯಾಡ!"

"ಯಾರ್ ಇದ ನಿಂಗೆ ಬೊಗಳದೋರು... ಇದಕ್ಕೆಲ್ಲ ನೀನು ಯಾಕೆ ತಲೆ ಹಾಕಿ "

"ನಿನಗೆ ಕೂಲನಾಲಿ ಮಾಡಿ, ನಿಮ್ಮಪ್ಪ ಸತ್ತ ಮ್ಯಾಲೆ ಒಬ್ಬರ ಕೈಲಿ ಬೆಟ್ಟು ತೋರದಂಗೆ ಓದಿಸಿದ್ದು ಒಬ್ಬರ ಮನೆ ಹಾಳು ಮಾಡಕಲ್ಲಕಣ್ಣ ಮಗ, ನಮ್ಮಿಂದ ನಾಕ್ ಜನ್ಕ ಉಪಕಾರ ಆಗಬೇಕು. ಸುಳ್ಳು ಬರದೋರ ಕೈಗೆ ಕ್ವಾಷ್ಠ ಬತ್ತದೆ ಅಂತಾರೆ..."

"ಸರ್ಕಾರದ ವ್ಯವಹಾರದೇಲಿ ನೀನು ತಲೆ ಹಾಕಬ್ಯಾಡ, ಹಾಕಿದ್ದ ತಿಂದ್ಕಂಡು ಬಿದ್ದಿರೋದು ನೋಡವ್ವ."

"ಧರ್ಮಕರ್ಮ ನೋಡಪ್ಪ.. ನಿಂಗೂ ಒಂದು ಗಂಡು ಮಗ ಅದೆ. ಮುಂದೆ ಅದೂ ಬಾಳಿ ಬದುಕ ಬೇಕು, ನಿರಪರಾಧಿಗೊಳ ಅಯ್ಯೋ ಅನ್ನಿಸಬಾರ್ದು...."

"ನೀ ಬೋ ಕಂಡಿರೋಳು... ಬಾಯಿಮುಚ್ಕಂಡು ಬಿದ್ಕೊ, ನ್ಯಾಯ, ಕಾನೂನು ಹೆಂಗದೆ ಹಂಗೆ ನಾವು ಬರೀಕತಿವಿ" ಎಂದು ಸಿಡಿಯುತ್ತ ಮೇಲೆದ್ದ.

ಉರುಗಮ್ಮ "..... ಅಯ್ಯೋ ದೇವ್ರ ಈ ಅಲಾಲ್ಕೋರನಿಗೆ ಒಳ್ಳೆ ಬುದ್ದಿ ಕೊಡು. ಧರ್ಮ ಇದ್ದ ಕಡೆ ಜಯ ಕೊಡಪ್ಪ' ಎಂದು ನಿಟ್ಟುಸಿರುಬಿಟ್ಟು ಕಣ್ಮುಚ್ಚುತ್ತ, ಹುಟ್ಟಿದಾಗಲೇ ಗಂಗೆ ಒಡಲಿಗೆ ಎಸೆದು ಬುಟ್ಟ ಕುಂತಮ್ಮ ಯುದ್ಧ ಸುರುವಾಗೋಕೆ ಮುಂಚೆ ಬಂದು ತೊಟ್ಟ ಬಾಣತೊಡಬೇಡ ಅಂತ ಭಾಷೆ ಕೊಡು ಅಂತ ಕೇಳಿದಾಗ; "ಜನನೀ ನಿನ್ನ ಈ ಒಂದು ಸಣ್ಣ ಮಾತನ್ನು ನಡೆಸಿಕೊಡಲಾರೆನೆ! ಸಂತಸದಿಂದ

ನಡೆಸಿಕೊಡುತ್ತೇನೆ," ಎಂದು ದಾನ ಶೂರ ಕರ್ಣನ ನಾಟಕದಲ್ಲಿ ಧರ್ಮಸಂಕಟಕ್ಕೆ ಸಿಕ್ಕಿ ವಿಲಿವಿಲಿ ಒದ್ದಾಡುತ್ತಾ ಕಣ್ಣೀರು ಹಾಕುವ ಕರ್ಣನ ನೆನಪಾಗಿ ಹುಟ್ಟಿದರೆ ಕರ್ಣನಂತ ಮಕ್ಕಳುಟ್ಟಬೇಕು ! ಅವರವರ ಕರ್ಮ ಅವರ ಪಾಲಿಗೆ ನನಗೇನು? ಸತ್ಯಕ್ಕೆ ಸಾವು ಕೊಡಬೇಡ ಕನಪ್ಪ! ಭಗವಂತ' ಎಂದು ಕಣ್ಮುಚ್ಚಿದಳು.

ಬೋರಮ್ಮ ಉರುಗಮ್ಮನ ಜೊತೆಯಲ್ಲಿ ಪುಟ್ಟರಾಜಪ್ಪ 'ಪಾಣಿ'ಯನ್ನು ಬರೆಯದಿದ್ದರೆ, ಸೆಟ್ಟಿ ಚನ್ನಮ್ಮನ ಒಂದು ರೋಮವನ್ನೂ ಅಲ್ಲಾಡಿಸಲು ಸಾಧ್ಯವಿಲ್ಲ, ನೀನು ಹೇಳಿ ಅದನ್ನು ತಡೆಗಟ್ಟಿಸಿ ನಡೆಯಬಹುದಾದ ಅನ್ಯಾಯ ತಡೆಯಬೇಕೆಂದು ಮಾಡಿಕೊಂಡ ಮನವಿ ನಿಷ್ಪ್ರಯೋಜಕವಾಗಿತ್ತು. ಪುಟ್ಟರಾಜಪ್ಪ, ಚಂದ್ರಪ್ಪಶೆಟ್ಟಿಯಿಂದ ಒಂದೂವರೆ ಸಾವಿರ ರೂಪಾಯಿ ಲಂಚ ತಿಂದು, ಸೇಕದಾರರಿಗೂ ಎರಡೂವರೆ ಕೊಡಿಸಿ, ಇನ್ನೂ ಸಂಬಂಧಪಟ್ಟವರಿಗೆ ಅವರ ಯೋಗ್ಯತಾನುಸಾರ–ಹಣ ನುಂಗುವವರಿಗೆ ಹಣ ತೀರ್ಥ ಸಮಾರಾಧನೆಯಿಂದ ತೃಪ್ತರಾಗುವವರಿಗೆ ತೀರ್ಥ ಮುಂತಾದುವನ್ನು ಸಮರ್ಪಿಸಿ, ಇದೇ ತಾಲ್ಲೂಕಿನ ಭೂನ್ಯಾಯ ಮಂಡಲಿಯನ್ನೇ ತನ್ನ ವಶೀಕರಣ ವಿದ್ಯೆಯ ಪ್ರಯೋಗದಿಂದ ತನ್ನ ಹತೋಟಿಗೆ ತೆಗೆದುಕೊಂಡು ಪಾಣಿಯನ್ನು ಎಂಟುವರ್ಷಗಳಿಂದ ಈಗಿನವರೆವಿಗೂ ಚನ್ನಮ್ಮನ ಭೂಮಿಯನ್ನು ವ್ಯವಸಾಯ ಮಾಡಿಸುತ್ತಿರುವವನು ಚಂದ್ರಶೆಟ್ಟಿ ಎಂದೂ, ಚನ್ನಮ್ಮನು ಸೆಟ್ಟಿಯಿಂದ ಕೇವಲ ಗುತ್ತಿಗೆಯನ್ನು ಮಾತ್ರ ಪಡೆಯುತ್ತಿರುವಳೆಂದೂ ಬಾಜುದಾರರಾದ ಕೆಂಪಲಿಂಗೇಗೌಡ ಮತ್ತು ಅಬ್ದುಲ್ ವಹಾಬಾರಿಂದ ಹೇಳಿಕೆಯನ್ನು ಪಡೆದು ಲಗತ್ತಿಸಿ, ಚನ್ನಮ್ಮನ ಸಂಸಾರದ ಇತಿಶ್ರೀ ಮಾಡಲು ಸರ್ವವನ್ನೂ ಆಗಲೇ ಸಿದ್ಧಪಡಿಸಿದ್ದ.

ಹೀಗೆ ಪಟ್ಟರಾಜಪ್ಪ ತನ್ನ ಕರಕೌಶಲ್ಯವನ್ನು ತೋರಿಸುತ್ತಿರುವಾಗಲೇ, ಮುದಿಯೂರ ತಾಲ್ಲೂಕಿನ ಭೂನ್ಯಾಯ ಮಂಡಲಿಯ ಅಧ್ಯಕ್ಷರಾದ ಶ್ರೀರಂಗಪುರದ ಅಸಿಸ್ಟೆಂಟ್ ಕಮೀಷನರಾದ ಕೃಷ್ಣಕುಮಾರ್‌ರವರಿಗೆ; ವಿ.ಎ, ಪುಟ್ಟರಾಜಪ್ಪ ಮತ್ತು ಸೆಕ್‌ದಾರ್ ಹಗ್ಗಪ್ಪನವರು ಹೇಗೆ ಸೆಟ್ಟಿ ತಾವು ಹಣದ ಗಂಟನ್ನು ನುಂಗಿ ಬಾಜುದಾರರು ಮತ್ತು ಕೆಲವು ಭೂನ್ಯಾಯಮಂಡಲಿಯ ಸದಸ್ಯರುಗಳಿಗೂ ರುಚಿ ತೋರಿಸಿ, ತಾವು ಮಾಡಿರುವುದೆಲ್ಲ ನ್ಯಾಯಸಮ್ಮತವಾದುದು ಎಂಬುವ ಹಾಗೆ ನಂಬಿಕೆ ಬರುವ ಹಾಗೆ ತಹಶೀಲ್ದಾರರನ್ನು ತಮ್ಮ ವಶೀಕರಣ ವಿದ್ಯೆಗೆ ಬಲಿ ಬೀಳುವ ಹಾಗೆ ಮಾಡಿದ್ದಾರೆ. ಅಂತಹ ಅಕ್ರಮ ತಮ್ಮಂಥ ಯುವಕ ಹಾಗೂ ದಕ್ಷ ಐ.ಎ.ಎಸ್. ಅಧಿಕಾರಿ ಶ್ರೀರಂಗಪುರದ ಭೂನ್ಯಾಯ ಮಂಡಲಿಯ ಅಧ್ಯಕ್ಷರಾಗಿರುವಾಗ ನಡೆದರೆ, ತಾವೂ ಸಹ ಇಂಥ ಅಲಾಲ್ಕೋರ ಹಾಗೂ ಅಸತ್ಯ ಕಾರ್ಯ ನಡೆಯಲು ನಿಮ್ಮ ಮೂಗಿನಡಿಯೇ ಅವಕಾಶ ಮಾಡಿಕೊಟ್ಟಂತಾಗುತ್ತದೆಂದೂ; ಇನ್ನೂ ಮುಂದುವರಿದು ಇಂಥ ಅನ್ಯಾಯವನ್ನು ತಾವು ಕೂಲಂಕಶವಾಗಿ ಸ್ಥಳ ಪರಿಶೀಲನೆ ಮಾಡಿ, ಸತ್ಯಾಸತ್ಯವನ್ನು ವಿಮರ್ಶೆ ಮಾಡದೆ, ಕೇವಲ ಭೂ ನ್ಯಾಯ ಮಂಡಲಿಯ ಸದಸ್ಯರು, ಚನ್ನಮ್ಮನ ಜಮೀನ ಸುತ್ತ ಇರುವ ಭೂಮಿಯ ಬಾಜುದಾರರು ಎನ್ನಿಸಿಕೊಂಡವರ ಹೇಳಿಕೆ ಮೇಲೆಯೇ ಮಾಡಿದರೆ ನಿಮಗೂ ನಿಮ್ಮ ಮಕ್ಕಳಿಗೂ ಮುಂದೆ

ರೌರವನರಕ ಪ್ರಾಪ್ತಿ ಆಗುವುದೆಂದೂ ಮತ್ತು ತಮ್ಮನ್ನು ಹಡೆದವರೇನಾದರೂ ನಿಧನರಾಗಿದ್ದರೆ ಅವರಿಗೆ ಖಡಾ ಖಂಡಿತವಾಗಿ ಸದ್ಗತಿ ದೊರೆಯುವುದಿಲ್ಲವೆಂದೂ ಆರೋಪಿಸಿ ಅನೇಕ ಅರ್ಜಿಗಳು ಅವರನ್ನು ತಲುಪಿದ್ದುವು. ಇದೇ ಅರ್ಜಿಯ ನಕಲುಗಳನ್ನು ತಹಶೀಲ್ದಾರರಿಗೂ ಮತ್ತು ಡಿ.ಸಿ.ಯವರಿಗೂ ರವಾನಿಸಿದ್ದರು.

ತಹಶೀಲ್ದಾರರಿಗೆ ಈ ಕೇಸಿನ ಹೂರಣವೆಲ್ಲ ತಿಳಿಸಿದ್ದರೂ; ಸ್ಥಳೀಯ ಪ್ರಭಾವೀ ಪುಢಾರಿಗಳಾದ ಭೂನ್ಯಾಯ ಮಂಡಲಿ ಸದಸ್ಯರುಗಳನ್ನು ಎದುರು ಹಾಕಿಕೊಳ್ಳುವುದೇಕೆ. ಈ ಕೇಸು ಭೂನ್ಯಾಯಮಂಡಲಿ ಅಸಿಸ್ಟೆಂಟ್ ಕಮೀಷನರ್ ಸಾಹೇಬರ ಅಧ್ಯಕ್ಷತೆಯಲ್ಲಿ ವಿಚಾರಣೆಗೆ ಬಂದಾಗ, ತಮಗೆ ಬಂದಿರುವ ಅರ್ಜಿಗಳನ್ನು ಅವರ ಮುಂದಿಟ್ಟರಾಯಿತು. ಎಂದು ತೆಪ್ಪಗಿದ್ದ. ಇಷ್ಟಕ್ಕೆಲ್ಲ ಕಾರಣರಾದ ಪುಟ್ಟರಾಜ ಮತ್ತು ಹಗ್ಗಪ್ಪ ಯಾವುದಕ್ಕೂ ಹೇಸದವರೆಂದು ತಹಶೀಲ್ದಾರರಿಗೆ ಚೆನ್ನಾಗಿ ಮನವರಿಕೆಯಾಗಿದ್ದುದರಿಂದ ಚೆನ್ನಮ್ಮ ತನ್ನ ಮಕ್ಕಳ ಸಮೇತ ತಮ್ಮ ಆಫೀಸಿಗೆ ಬಂದು ತನಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಬೇಕೆಂದೂ ಇದಕ್ಕಾಗಿ ಸ್ಥಳ ಪರಿಶೀಲನೆಗೆ ಬರಬೇಕೆಂದೂ ಪರಿಪರಿಯಾಗಿ ಬೇಡಿಕೊಂಡಾಗ ಅವರ ಹೃದಯದ ಒಳದನಿ ಇವಳು ಸತ್ಯ ನುಡಿಯುತ್ತಿದ್ದಾಳೆಂದು ಪಿಸುಗುಟ್ಟಿದರೂ ಕ್ರಮ ತೆಗೆದುಕೊಳ್ಳಲು ಧೈರ್ಯಸಾಲದೆ. ಈ ವಿಷಯವನ್ನು ಎ.ಸಿ. ಸಾಹೇಬರೊಡನೆ ಚರ್ಚಿಸುವುದಾಗಿಯೂ, ನಿನ್ನ ಕೇಸು ಭೂ ಪಂಚಾಯಿತಿ ಮುಂದೆ ಬಂದಾಗ ನೀನು ಕೊಟ್ಟಿರುವ ಅರ್ಜಿಗಳನ್ನು ಪಂಚಾಯಿತಿಯ ಅಧ್ಯಕ್ಷರಾದ ಎ. ಸಿ. ಸಾಹೇಬರಿಗೆ ಖಂಡಿತ ಗಮನಕ್ಕೆ ತರುವುದಾಗಿಯೂ, ಜೊತೆಗೆ ಅವರೇನಾದರೂ ಸ್ಥಳ ಪರಿಶೀಲನೆಗೆ ಹೊನ್ನಾಪುರದ ಏರಿ ಕೆಳಗಿರುವ ಜಮೀನಿನ ಬಳಿಗೆ ಹೋಗುವ ಅವಶ್ಯಕತೆ ಇದೆಯೇ ಎಂದರೆ, ತಾವು ಖಂಡಿತ ಸ್ಥಳ ಪರಿಶೀಲನೆ ನಡೆಸಿಯೇ ಈ ಕೇಸಿನ ಬಗ್ಗೆ ತೀರ್ಪು ನೀಡಬೇಕೆಂದು ತಿಳಿಸುವುದಾಗಿ ಆಶ್ವಾಸನೆ ನೀಡಿ; ನೀನು ಆದಷ್ಟು ಜಾಗ್ರತ ಶ್ರೀರಂಗಪುರಕ್ಕೆ ಹೋಗಿ ಎ.ಸಿ. ಸಾಹೇಬರನ್ನು ನೋಡಿ ಅವರನ್ನು ಬೇಡಿಕೋ ಎಂದು ಮಾರ್ಗದರ್ಶನವನ್ನು ನೀಡಿದರು.

ಮಾರನೆ ದಿನ, ಚೆನ್ನಮ್ಮ ತನ್ನ ಹಿರಿಯ ಮಗನನ್ನು ಕರೆದುಕೊಂಡು 'ಗೂಳೋ' ಎಂದು ಅಳುತ್ತ ಶ್ರೀರಂಗಪುರಕ್ಕೆ ಹೋದಾಗ ಎ.ಸಿ. ಸಾಹೇಬರು 'ಟೂರು' ಹೊರಡುವ ತರಾತುರಿಯಲ್ಲಿದ್ದರು. ಎಲ್ಲೋ ಒಂದೆರಡು ನಿಮಿಷಗಳು ಮಾತ್ರ ಚೆನ್ನಮ್ಮನ ಅಹವಾಲನ್ನು ಕೇಳಿದರು. ಮೊದಲೇ ಇವುಗಳನ್ನು ಕೂಲಂಕಷವಾಗಿ ಓದಿದ್ದರಿಂದ, ಈ ಕೇಸಿನ ವಿಷಯದಲ್ಲಿ ತಾವು ಆದಷ್ಟು ಗಮನಕೊಡುವುದಾಗಿಯೂ ಸರ್ಕಾರ ಕಾನೂನಿನ ಪ್ರಕಾರ ಅನುಸರಿಸಬೇಕಾದ ಎಲ್ಲ ವಿಧಿ ವಿಧಾನಗಳನ್ನು ನಿರ್ದಾಕ್ಷಿಣ್ಯವಾಗಿ ಅನುಸರಿಸಿ ಆ ಪ್ರಕಾರ ಯಾರಿಗೆ ನ್ಯಾಯ ದೊರೆಯಬೇಕೋ ಅವರಿಗೆ ಖಂಡಿತ ದೊರಕಿಸುವುದಾಗಿಯೂ, ಇದಕ್ಕೋಸ್ಕರ ಚನ್ನಮ್ಮ ಅವರನ್ನು ಕಾಣಲು ತನ್ನೂರಿಂದ ಬರಬೇಕಾದ ಅವಶ್ಯಕತೆ ಇರಲಿಲ್ಲವೆಂದೂ ಜೀಪು ಹತ್ತಲು ಹೊರಟಾಗ, ಚನ್ನಮ್ಮ, "ಸ್ವಾಮೀ, ನಾನು ನಿನ್ನೊಡುಟ್ಟು ಅಂತ ತಿಳ್ಕೊಳಪ್ಪ, ಈ ನನ್ನ ಮಕ್ಕಳ

ಬಾಯಿಗೆ ಮಣ್ಣು ಬೀಳದಂಗೆ ನೋಡಪ್ಪ, ನಿಮ್ಮ ಹೆತ್ತೋರ ಒಡಲು ಉದ್ಧಾರವಾಗಲಿ" ಎಂದು ಕಾಲು ಹಿಡಕೊಳ್ಳಲು ಬಂದಾಗ "ಛೇ! "ಛೇ!, ಹಾಗೆ ಮಾಡಬಾರದಮ್ಮ ನನಗೂ ಅಕ್ಕತಂಗಿಯರವರೆ, ಸತ್ಯವಾಗಲೂ ಅನ್ಯಾಯ ಆಗೋಕೆ ಅವಕಾಶ ಆಗದಾಗೆ ನಾನು ಪ್ರಯತ್ನಪಡ್ತೀನಿ. ಇನ್ನು ದೇವರ ಇಚ್ಛೆ, ನೀನೂ ಅವನ್ನ ಬೇಡಿಕೋ, ಅಳಬ್ಯಾಡ ಹೋಗು" ಎಂದು ಹಿಂದಕ್ಕೆ ಸರಿದು, ಅವಳ ಕೈಗಳಿಂದ ತಮ್ಮ ಪಾದಗಳನ್ನು ಬಿಡಿಸಿಕೊಂಡು ಖಿನ್ನಮನಸ್ಕರಾಗಿ ಜೀಪಿನಲ್ಲಿ ಹೊರಟುಹೋದರು.

**4**

ಆವತ್ತು ಶನಿವಾರ.

ಮುದಿಯೂರಿನಲ್ಲಿ ಸಂತೆ, ಮೊದಲೇ ಈ ಶನಿವಾರ ಸಂತೆಯ ದಿನ ಚನ್ನಮ್ಮ ಮತ್ತು ಚಂದ್ರಶೆಟ್ಟಿಯರ ಭೂವಿವಾದ, ಭೂನ್ಯಾಯಮಂಡಲಿಯ ಮುಂದೆ ಬರುವುದೆಂದೂ, ಈ ದಿನ ನ್ಯಾಯಕ್ಕೆ ವಿಜಯವೋ, ಅಥವಾ ಅನ್ಯಾಯಕ್ಕೆ ವಿಜಯವೋ ಎಂಬುದು ತೀರ್ಮಾನವಾಗಿ, ಈ ಭೂನ್ಯಾಯ ಮಂಡಲಿಗಳು ನ್ಯಾಯ ಮಂಡಲಿಗಳೊ? ಅನ್ಯಾಯ ಮಂಡಲಿಗಳೋ? ಎಂಬ ನಗ್ನಸತ್ಯ ಬಯಲಾಗುವುದೆಂದು! ಜನರು ಅಲ್ಲಲ್ಲಿ ಪಿಸುಗುಟ್ಟುಕೊಳ್ಳುತ್ತಿದ್ದಾಗ, ಚಂದ್ರಶೆಟ್ಟಿ ಬೋ ಖುಷಿಯಾಗಿದ್ದ. ಅವನು ನ್ಯಾಯವನ್ನು ಆಗಲೇ ತನಗೆ ಪುಟ್ಟರಾಜ ಮತ್ತು ಹಗ್ಗಪ್ಪ ತನಗೆ ತಲೆಹಿಡಿದು ಬಿಟ್ಟಿದ್ದುದರಿಂದ, ಇನ್ನು ಅದನ್ನು ಕೇವಲ ತನಗೆ 'ಖಾಯಂ' ಗೊಳಿಸುವ ಮುದ್ರೆ ಮಾತ್ರ ಭೂನ್ಯಾಯ ಮಂಡಲಿ ನೆಪ ಮಾತ್ರಕ್ಕೆ ಮಾಡಬೇಕಾಗಿದೆ, ಮಾಡೇ ಮಾಡುತ್ತದೆ. ತನ್ನೂರಿನ ಏರಿ ಕೆಳಗೆ ಒಂದೇ ಜಾಗದಲ್ಲಿ ಎಂಟೂವರೆ ಎಕರೆ ಬಯಲು ಅಂದರೆ 'ಹಾ! ಹಾ! ಅರರೆ ಎನ್ನಯ ಸಮಾನರಾರು' ಎಂದು ನರೆತ ತನ್ನ ಮುದಿ ಮೀಸೆಯ ಕೊಂಪೆಗಳ ಮೇಲೆ ಹಮ್ಮಿನಿಂದ ಕೈಯನ್ನು ಹಾಕಿದ್ದ.

ಹನ್ನೊಂದು ಗಂಟೆಯ ಸಮಯ, ತಹಶೀಲ್ದಾರರ ಕೋರ್ಟ್ ಹಾಲಿನಲ್ಲಿ ಎ.ಸಿ. ಕೃಷ್ಣಕುಮಾರ್ ರವರ ಅಧ್ಯಕ್ಷತೆಯಲ್ಲಿ ಭೂನ್ಯಾಯ ಮಂಡಲಿಯ ಸಭೆ ಸೇರಿತು. ಚನ್ನಮ್ಮ ಚಂದ್ರಸೆಟ್ಟಿಯರ ವಿವಾದವನ್ನೇ ಮೊದಲು ತೆಗೆದುಕೊಂಡರು. ನಾಲ್ಕು ಜನ ಖಾಸಗಿ ಭೂನ್ಯಾಯ ಮಂಡಲಿಯ ಸದಸ್ಯರು; ಈ ವಿವಾದದ ಹಿನ್ನೆಲೆಯನ್ನು ತಾವು ಚನ್ನಾಗಿ ವಿಚಾರಿಸಿ ತಿಳಿಸಿರುವುದಾಗಿಯೂ ಚಂದ್ರಶೆಟ್ಟಿ, ಚೆನ್ನಮ್ಮನಿಂದ ಭೂಮಿಯನ್ನು ಬಲವಂತದಿಂದ ಕಸಿದುಕೊಳ್ಳದೆ ಗಂಡಿಲ್ಲದ 'ಮುಂಡೆ' ಹಾಗೂ 'ಬಡವೆ' ಎನ್ನುವ ಕಾರಣಗಳಿಂದ ಜನ ಹಾಗೂ ಧನಬಲ ಎರಡಿದ್ದರೂ, ನ್ಯಾಯವನ್ನು ಬಲವಂತವಾಗಿ ದಬಾವಣೆ ಮಾಡಿ ವಶಪಡಿಸಿಕೊಳ್ಳದೆ ಭೂ ನ್ಯಾಯ ಮಂಡಲಿಯ ಮೊರೆ ಹೊಕ್ಕಿರುವುದಾಗಿಯೂ; ಚನ್ನಮ್ಮ ಬಡವೆ, ವಿಧವೆ ಎನ್ನುವ ಕಾರಣಗಳಿಗಾಗಿ ನ್ಯಾಯದ ಕತ್ತನ್ನು ಹಿಸುಕುವುದು ತಪ್ಪಾಗುವುದೆಂದೂ, ಚಂದ್ರಸೆಟ್ಟಿಯಂಥ ಯೋಗ್ಯ ಮತ್ತು ಸಹನಶೀಲ ವ್ಯಕ್ತಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾದ್ದು ತಮ್ಮೆಲ್ಲರ ಏಕೈಕ ಪವಿತ್ರ ಕರ್ತವ್ಯ ಎಂದೂ ಸಮರ್ಥಿಸಿಕೊಂಡರು.

ಈ ವಾದವನ್ನು ಕೇಳಿದ ತಹಶೀಲ್ದಾರರು ತಮಗೆ ಕೆಲವು ಮೂಗರ್ಜಿಗಳ ಹಾಗೂ ಚನ್ನಮ್ಮನಿಂದ, ಈ ವಿವಾದದ ಬಗ್ಗೆ ಅರ್ಜಿಯೂ ಬಂದಿರುವುದಾಗಿ ಒಂದು ಸಣ್ಣ: ಅರ್ಜಿಗಳ ಕಂತೆಯನ್ನೇ ಎ.ಸಿ. ಸಾಹೇಬರ ಟೇಬಲ್ಲಿನ ಮೇಲೆ ಮಡಗಿದರು. ಎ.ಸಿ.ಯವರೂ ಸಹ ಕೂಡಲೇ ತಮ್ಮ ಬಳಿ ಇದ್ದ ಹಾಗೂ ಡಿಸಿ, ಸಾಹೇಬರಿಂದ ಬಂದಿದ್ದ ಅರ್ಜಿಗಳ ಕಂತೆಯನ್ನು ತೆಗೆದು ಮಾನ್ಯ ಸದಸ್ಯರುಗಳಿಗೆ ತೋರಿಸಿ ಹೇಳಿದರು. "ಮಾನ್ಯ ಭೂ ನ್ಯಾಯ ಮಂಡಲಿಯ ಸದಸ್ಯರು ಮತ್ತು ಈ ಮಂಡಲಿಯ ಅಧ್ಯಕ್ಷನಾದ ನನ್ನ ಮೇಲೆ ಕಾರ್ಯದರ್ಶಿಯಾದ ತಹಶೀಲ್ದಾರರ ಮೇಲೆ ದೊಡ್ಡ ಜವಾಬ್ದಾರಿ ಇದೆ. 'ಭೂಮಿ' ಹಳ್ಳಿಗಾಡಿನ ಜನರ ಬದುಕಿನಲ್ಲಿ ಹೊಟ್ಟೆಗೆ ಅನ್ನ ಒದಗಿಸುವ ಏಕೈಕ ಸಾಧನವಾದ್ದರಿಂದ ಈ ವಿವಾದದಲ್ಲಿ ತನಗೆ ಭಾರೀ ಅನ್ಯಾಯವಾಗುತ್ತಿರುವುದಾಗಿಯೂ, ತಾನು ಬಡವೆ ಹಾಗೂ ವಿಧವೆಯಾದ್ದರಿಂದ ನನಗೆ ಅನ್ಯಾಯವಾಗುತ್ತಿದ್ದರೂ ಮುಂದೆ; ಧೈರ್ಯವಾಗಿ ಬಂದು ಸಾಕಷ್ಟು ಜನರು ಸಾಕ್ಷ್ಯ ಹೇಳಲು ಹೆದರುತ್ತಿರುವುದಾಗಿಯೂ, ಬಾಜುದಾರರಾದ ಕೆಂಪಲಿಂಗೇಗೌಡ ಮತ್ತು ಅಬ್ದುಲ್ ವಹಾಬ್ ಸಾಹೇಬರಿಗೆ ಚಂದ್ರಶೆಟ್ಟಿ ಸಾಕಷ್ಟು ಕೈ ಬೆಚ್ಚಗೆ ಮಾಡಿರುವುದರಿಂದ, ಅವರು ಆತನ ಕಡೆ ಸಾಕ್ಷಿ ಹೇಳುತ್ತಿರುವುದಾಗಿಯೂ ಅರ್ಜಿ ಬರೆದು, ಸ್ಥಳ ಪರಿಶೀಲನೆ ನಡೆದು, ಪಬ್ಲಿಕ್ ಆಗಿ ಬಾಜುದಾರರು, ಚಂದ್ರಸೆಟ್ಟಿ ಭೂಮಿಯನ್ನು ಪ್ರತಿವರ್ಷವೂ ಯಾರು ಆಬಾದ ಮಾಡುತ್ತಿದ್ದರೆಂಬುದನ್ನು ಹೇಳಿದರೆ, ಚಂದ್ರಸೆಟ್ಟಿಗೇ ಜಮೀನ ನೀಡಬಹುದೆಂದೂ ಪ್ರಾರ್ಥಿಸಿ, ಕತ್ತಿನಗಂಟ ಲಂಚ ತಿಂದು ವಿಲೇಜ್ ಅಕೌಂಟೆಂಟ್ ಮತ್ತು ಸೇಕ್ ದಾರರು ಚಂದ್ರಸೆಟ್ಟಿಯ ಪರವಾಗಿ ಕಳೆದ ಎಂಟು ವರ್ಷಗಳ ಪಾಣಿ ಬರೆದಿರುವುದಾಗಿಯೂ ದೂರಿ ಇಂಥ ಅನ್ಯಾಯದ ದಾಖಲೆಗಳನ್ನು ಸತ್ಯದ ಒರೆಗೆ ಹಚ್ಚದೆ ಅವುಗಳ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಬಾರದೆಂದು ಪರಿಪರಿಯಾಗಿ ಬೇಡಿರುವುದರಿಂದ ಈ ವಿವಾದದಲ್ಲಿ ಬಹಳ ಜಾಗರೂಕತೆಯಿಂದ ಸತ್ಯವನ್ನು ಒರೆಹಚ್ಚಬೇಕಾದುದು ಭೂನ್ಯಾಯ ಮಂಡಲಿಯ ಅದರಲ್ಲೂ ಅಧ್ಯಕ್ಷನಾದ ನನ್ನ ಕರ್ತವ್ಯವೆಂದು ಭಾವಿಸುವುದಾಗಿ ಸ್ವಲ್ಪ ಗಡುಸಾಗಿಯೇ ಹೇಳಿದರು. ಈ ಮಾತುಗಳನ್ನು ಕೇಳಿದ ಭೂ ನ್ಯಾಯಮಂಡಲಿಯ ಒಂದಿಬ್ಬರು ಸದಸ್ಯರು "ಬಾಜುದಾರರು ಮತ್ತು ವಿ.ವಿ. ಹಾಗೂ ಸೇಕ್‌ದಾರರ ಮೇಲೆ ಮಾತ್ರ ದೂರುಗಳು ಬಂದಿವೆಯೋ ಅಥವಾ..." ಎಂದು ನಿಲ್ಲಿಸಿದಾಗ, ಎ.ಸಿ.ಯವರು "ಮಾನ್ಯ ಸದಸ್ಯರೆ; ಇಡೀ ಭೂನ್ಯಾಯ ಮಂಡಲಿಯ ಸದ್ಯಸರು ಹಾಗೂ ಅಧ್ಯಕ್ಷರೂ ಲಂಚದ ಆಪಾದನೆಗೆ ಗುರಿಯಾಗಿದ್ದಾರೆ ಎಂಬ ಗೂಡಾರ್ಥವನ್ನು ಈ ಅರ್ಜಿಗಳು ಧ್ವನಿಸುತ್ತವೆ. ಆದ್ದರಿಂದ ಸ್ಥಳದ ಪರಿಶೀಲನೆ ಮಾಡದೆ, ಜಮೀನಿನ ಬಳಿ ಹತ್ತಾರು ಜನ ಸಾರ್ವಜನಿಕರ ಎದುರಿಗೆ ಬಾಜುದಾರರನ್ನು ಪರೀಕ್ಷಿಸದೆ, ನನಗೆ, ಎ.ಸಿ, ಸಾಹೇಬರಿಗೆ, ತಹಶೀಲ್ದಾರರಿಗೆ ಬಂದಿರುವ ಅರ್ಜಿಗಳ ಆಧಾರದ ಮೇಲೆ ಈ ಕೇಸನ್ನು ತೀರ್ಮಾನಿಸಲು ನನ್ನ ಸಂಪೂರ್ಣ ವಿರೋಧವಿದೆ, ಜೊತೆಗೆ ಭೂ ನ್ಯಾಯಮಂಡಲಿಗಳ ಮೂಲ ಉದ್ದೇಶ ಬಡ ಜಮೀನ್ದಾರರಿಗೆ ನ್ಯಾಯ ದೊರಕಿಸಿ ಕೊಡುವುದು' ಎಂದು ಸ್ಥಳ ಪರಿಶೀಲನೆಯನ್ನು ನಾಳೆ ಹತ್ತು ಗಂಟೆಗೆ ಹೊನ್ನಾಪುರದ

ಏರಿ ಬಯಲಲ್ಲಿ ಇಟ್ಟುಕೊಂಡಿರುವುದಾಗಿ ಬರೆದು; ನ್ಯಾಯ ಮಂಡಲಿಯ ಮುಂದೆ ಈ ದಿನ' ಬಂದಿರುವ ಉಳಿದ ಕೇಸುಗಳ ವಿಚಾರಣೆಯನ್ನು ಪ್ರಾರಂಭಿಸಬಹುದೆಂದು ಆಜ್ಞೆ ಮಾಡಿ ತಹಶೀಲ್ದಾರರ ಕಡೆಗೆ ತೀಕ್ಷ್ಣವಾಗಿ ನೋಡಿ ತಹಶೀಲ್ದಾರರ: ಗೋ ಟು ದಿ ನೆಕ್ಸ್ಟ್ ಪಾರ್ಟ್ ಆಫ್ ದಿ ಅಜೆಂಡಾ' ಎಂದೇಬಿಟ್ಟರು.

ಎ.ಸಿ. ಸಾಹೇಬರು ಭೂನ್ಯಾಯ ಮಂಡಲಿಯ ಸದಸ್ಯರಿಗೆ ಮುಖಕ್ಕೆ ಹೊಡೆದಂತೆ ಹೇಳಿ, ನೀರು ಇಳಿಸಿಬಿಟ್ಟರೆಂದೂ, ಪಿ.ಎ. ಹಾಗೂ ಸೇಕ್‌ದಾರರಿಗೆ ಚಡ್ಡಿಯಲ್ಲೇ ತೀರ್ಥಪ್ರಸಾದಗಳು ಇಟ್ಟಾಡುವ ಸ್ಥಿತಿಗೆ ತಂದಿರುವುದಾಗಿಯೂ, ಬಾಜುದಾರರಾದ ಕೆಂಪಲಿಂಗೇಗೌಡ ಹಾಗೂ ವಹಾಬ್‌ಗೆ ಊರಿನ ಜನರೆದುರು ಸಾಕ್ಷಿ ನುಡಿಯ ಬೇಕಾದ ಅಗ್ನಿಪರೀಕ್ಷೆಗೆ ಗುರಿಪಡಿಸಿರುವುದಾಗಿ ಜನ ತಮತಮಗೆ ತೋಚಿದ ರೀತಿಯಲ್ಲಿ ಎ.ಸಿ. ಸಾಹೇಬರು ಸ್ಥಳಪರಿಶೀಲನೆಗೆ ಬರುವ ವಿಚಾರವನ್ನು ಬಣ್ಣಿಸತೊಡಗಿದರು.

ಜನರು ಈ ವಿಷಯವನ್ನು ವಿಜಯೋತ್ಸಾಹದಿಂದ ಮಾತನಾಡುವ ವೈಖರಿ ಹಾಗೂ ತನ್ನ ಪುತ್ರ ಪುಟ್ಟರಾಜನ ಮುಖದ ಮೇಲೆ ಮೂಡಿದ್ದ ಆತಂಕ ಎಲ್ಲವನ್ನೂ ಕೇಳಿ, ನೋಡಿ ಉರುಗಮ್ಮ "ದೇವ್ರ ಚೆನ್ನಮ್ಮನಿಗೆ ನ್ಯಾಯ ದೊರಕಿಸಿ ಕೊಡಪ್ಪ' ಎಂದು ಆಕಾಶದ ಕಡೆಗೆ ಕೈ ಜೋಡಿಸಿ : ""ಚನ್ನಮ್ಮನಿಗೆ ಭೂಮಿ ದಕ್ಕಿದರೆ..... ಮುಂದಿನ ವರ್ಷದ ಗಂಟ ನಾನು ಸಾಯದೇ ಬದುಕಿದ್ದರೆ ನೀಲಸಂದ್ರದ ಮಾಯಮ್ಮ ನಿಂಗೆ ಬಂದು ನನ್ನ ತಲೆ ಮುಡಿ ಕೊಡ್ತೀನಿ ಕನವ್ವ" ಎಂದು ಹರಕೆ ಕಟ್ಟಿಕೊಂಡಳು.

ಏನೇ ಹರಕೆ ಕಟ್ಟಿಕೊಂಡರೂ, ಚನ್ನಮ್ಮನಿಗೆ ಜಯ ದೊರಕಲೆಂದು ಹಾರೈಸಿದರೂ, ಉರುಗಮ್ಮನ ಎದೆಗೂಡಿನಲ್ಲಿ ಒಂದು ಸಂಶಯ ಹೆಡೆಯಾಡುತ್ತಾ ಬುಸುಗುಡುತ್ತಲೇ ಇತ್ತು. "ನೀನು ಪಾಣಿ ತಿದ್ದಿ ಅನ್ಯಾಯಮಾಡಿದ್ದೀ. ಅದನ್ನ ಕೂಡಲೇ ಸರಿಮಾಡಿ ಸತ್ಯಬರ್ದು ಒಂದು ಮನೆ ಉದ್ಧಾರ ಮಾಡು, ಲಂಚದ ದುಡ್ಡಿನ ಅನ್ನತಿಂದು ನನ್ಹೊಟ್ಟೆ ಒಳಗೆ ಕ್ಯಾನ್ಸರ್‌ಗೆಡ್ಡೆ ಬೆಳಕೋತು. ನನ್ನದೊಂದೀ ಮಾತ ನಡೀಸ್ಕೊಡು" ಅಂತ ತನ್ನ ಕುಲಪುತ್ರನನ್ನು ಪರಿಪರಿಯಲ್ಲಿ ಬೇಡಿಕೊಂಡು "ಬೇಕಾದ್ರೆ ನಿನ್ನ ಕಾಲಿಡುಕೋತೀನಿ ಕಲ ಮಗ, ಇಂಥ ಅನ್ಯಾಯ ಮಾಡಿ ನಮ್ಮೊಂಶಕ್ಕೆ ಕೆಟ್ಟ ಹೆಸರು ತರಬ್ಯಾಡ" ಎಂದು ಅವನ ಕೈಗಳೆರಡನ್ನೂ ಹಿಡಿದುಕೊಂಡು ಹಣೆಗೆ ಒತ್ತಿಕೊಂಡರೂ, ಕಲ್ಲು ಗುಂಡಿನಂಗೆ ಈ ಸರ್ಕಾರಿ ವ್ಯವಹಾರವೆಲ್ಲ ನಿಂಗ್ಯಾಕೆ; ಅದಷ್ಟು ತಿಂದುಕೊಂಡು ಮೂಲೇಲಿ ಸಾಯಗಂಟ ಬಿದ್ದಿರೋದು ನೋಡ್ಕೋ' ಎಂದು ಕೈಕೊಸರಿಕೊಂಡು ಹೊರಟು ಹೋದುದನ್ನು ನೆನೆದು ತನ್ನ ಮಗನೇ ಹೀಗೆಂದ ಮ್ಯಾಲೆ ಇನ್ನು ಉಳಿದೋರು, "ಸತ್ಯೇವು ನುಡಿದಾರೆ. ಇವ್ರು ನಾಲಗೆಗೆ ಉಳಬೀಳ್ತಾವಾಕು, ಸುಳ್ಳುವಾಕ್ಯ ಆಡಿದರೆ!" ಎಂದುಕೊಂಡು ಹೆಚ್ಚಿಗಟ್ಟುತ್ತಿರುವ ನೋವಿನ ಸಾಂದ್ರತೆ ಒತ್ತಡದಿಂದ ಉರುಗಮ್ಮ ನರಳುತ್ತಾ ಯೋಚಿಸಿದಳು. ಈ ಕೇಸಿನಲ್ಲಿ ತನ್ನದೇನಾದರೂ ಪಾತ್ರವಿದೆಯೇ ? ಇದ್ದರೆ ಅದನ್ನು ನಿರ್ವಹಿಸುವ ಬಗೆ ಹೇಗೆ? ತನ್ನೆದೆಯಲ್ಲಿ ಈ ಹೋರಾಟ ನಡೆಯುತ್ತಿದ್ದಾಗ, ಹೊಟ್ಟೆಯ ನೋವು ಅತಿಯಾಗಿ 'ರಾಮನೆ, ಶಿವನೆ

ಎಂದು ನರಳಲಾರಂಭಿಸಿದಳು, ಉಣ್ಣುವ ಹೊತ್ತಾಗಿತ್ತು. ಸೊಸೆ ಮಹಾರಾಣಿಯಂತೆ ಬೀಗುತ್ತ ಬಂದು "ಗಂಜಿ ಕುಡಿದೀಯೋ, ಅನ್ನ ಉಂಡೀಯಮಾ' ಎಂದು ಕೇಳಿದಳು.

"ನನಗೆ ಅನ್ನೊಬ್ಯಾಡ, ಗಂಜೂಬ್ಯಾಡ"

"ಇನ್ನೇನು ಚಿನ್ನ ತಿಂದೀಯಾ?"

"ಇಲ್ಲ ಒಂದು ಸೀಸ ಇಸ ಇದ್ರುಕೊಡು'

"ಅದ ನಿನ್ ಮಗನ್ನ ಕೇಳು. ತೀಟೆ ಇದ್ರೆ ತಂದ್ಕೊಡ್ತಾನೆ. ಬಿಟ್ಟಿ ಸಿಕ್ಕಿದ್ರೆ ತಂದ್ಕೊಡೂವೆ!"

"ಲೋ, ಮುತ್ಯಾಳ ನನ್ನ ಮಗನೆ ಕೇಳಿಸ್ಕಂಡ?! ಒಂದು ಸೀಸ ಇಸ ತಂದ್ಕೋಡೋ ನಾಮರ್ದ ನನ್ ಮಗ್ನೆ..... ಈ ಕೋಟಲೆ ನಾನು ತಡೀಲಾರೆ...." ಎಂದ ಅವ್ವನ ಮಾತನ್ನು ಕೇಳಿ "ನಿಮಿಬ್ಬರ ಎಡೇಲಿ ನಾನು ಬದುಕಿರದಕ್ಕಿಂತ ನೇಣಾಕ್ಕೊಂಡು ಸಾಯಬೇಕು. ನಾಳಾಕೆ ಎ.ಸಿ. ಸಾಹೇಬರು ಬತ್ತಾರೆ; ರಿಕಾರ್ಡ್‌ಗಳೆಲ್ಲಾನೂ ಸರಿಯಾಗವಾ ಅಂತ ನಾನು ನೋಡ್ತಾ ಕುಂತಿದ್ರೆ, ನನ್ನ ಕಷ್ಟ ನನಗೆ ನಿಮ್ಮ ಸುಮಾನ ನಿಮ್ಗೆ..." ಎಂದು ತಲೆ ಚಚ್ಚಿಕೊಂಡ, ಯಶೋದ ಗಂಡನ ನೋವಿನಲ್ಲಿ ಭಾಗಿಯಾಗುವ ಈ ಸಮಯವನ್ನು ಬಿಡಬಾರದೆಂದು "ಏನು ಮಾಡಾಳು ಕಷ್ಟವೋ ಸುಖವೋ ತಂದಾಕೀರಿ. ಇವಳ ಔಷಧಿಗೇ ಅಂತೆ 4–5 ಸಾವಿರ ಆಯ್ತು. ಇಲ್ಲೇ ಇರೋಷ್ಟೆಲ್ಲ ಕೆದಕ್ಕೊಂಡು ಕ್ಯಾತೆ ತಗೀತಾಳೆ.... ಮೊದಲೇ ಗಾದೇ ಇಲ್ಲೇ ಎಮ್ಮೆಗೆ ಈಯೋ ದುಃಖ ಆದ್ರೆ, ಕೋಣನಿಗೆ ಕೊಸಿಯೋ ದುಃಖವಂತೆ. ನಿಮ್ಮ ಕಷ್ಟ ನಿಮ್ಗೆ ಅವ್ಳ ಸುಮಾನ ಅವಳ್ಗೆ."

"ಅವರವರ ಕರ್ಮ ಅವರು ಅನುಭವಿಸ್ತಾರೆ ಹೋಗು" ಎಂದು ಕಠಿಣವಾಗಿ ನುಡಿದಳು ಉರುಗಮ್ಮ

"ಅದೇ ಬರ್‌ಬಾರ್ದು ಬಂದು ನಳ್ತಾ ಇರೂದು. ನಿನ್‌ಕರ್ಮ ನಿನ್ನ ಕಿತ್ಕಂಡ್ ತಿಂನ್ತಾ ಅದೆ".

ಸೊಸೆಯ ಈ ಮಾತುಗಳನ್ನು ಕೇಳಿ ಉರುಗಮ್ಮ ಹಾಳ್ ದೇವ್ರ, ಆದಷ್ಟು ಬ್ಯಾಗ ಸಾವು ಕೊಡೋ... ನಿನ್ನ ಮನೆ ಹಾಳಾಗೋಗ" ಎಂದು ಬಿಕ್ಕಳಿಸತೊಡಗಿದಳು.

ಮೊಮ್ಮಗ ಸುರೇಶ ಓಡೋಡಿ ಬಂದು "ಸುಮ್ಮನಿರಮ್ಮ" ಎಂದು ತಲೆದಸಿಯಲ್ಲಿ ಕುಳಿತು ಕಣ್ಣೀರು ಸೀಟತೊಡಗಿದ. ಯಶೋದ "ನಡೀ ಮಿಲಾಂಚೋರ್..... ಓದ್ಕೋನಡಿ' ಎಂದು ಬೆನ್ನಿನ ಮೇಲೆ ಎರಡು ಗುದ್ದಿ ಎಳೆದುಕೊಂಡು ಹೋದಳು. ಪುಟ್ಟರಾಜ ತಾನು ಬರೆದ ಸುಳ್ಳು ಪಾಣಿ ತಾನಿಚ್ಛಿಸಿದ ಸತ್ಯವನ್ನು ಸರಿಯಾಗಿ ನುಡಿಯಬಲ್ಲುದೇ ಎಂಬುದನ್ನು ಪರಿಶೀಲನೆ ನಡೆಸುತ್ತ ಖಾತ್ರಿ ಮಾಡಿಕೊಳ್ಳುವುದರಲ್ಲಿ ಮಗ್ನನಾದ... ಅವನ ತಲೆಯಲ್ಲಿ ಒಂದು ಸಂತೆ ನಡೆಯುತ್ತಿತ್ತು! ಆದರೆ ಉರುಗಮ್ಮ ಕಣ್ಮುಚ್ಚಿ ತನ್ನ ಮನೆ ದೇವರನ್ನು ಪ್ರಾರ್ಥಿಸಿಕೊಳ್ಳತೊಡಗಿದಳು. "ತಾಯಿ ನನ್ನ ಮಗ ಚನ್ನಮ್ಮನ ಜಮೀನಿನ ವಿಷಯದೇಲಿ ಬರೆದಿರುವ ಸುಳ್ಳು ಪಾಣಿಯೆಲ್ಲ ಸುಳ್ಳಾಗಲಿ, ಆದರೇಲಿ ಬರೆದಿರೋದೆಲ್ಲ ನೀನು ಬೆಳಗಾಗುವುದರೊಳಗೆ ತಿದ್ದುಬಿಟ್ರೆ ನಿನ್ನ ಆಗ ನಾನು ಸತ್ಯವಂತೆ ಅಂತ ತಿಳ್ಕೊತೀನಿ; ಇಲ್ದೇ ಹೋದ್ರೆ ನೀನು ಒಂದು ಗುಂಡುಕಲ್ಲು ಅಂತ ತಿಳ್ಕೊತೀನಿ. ನಂಗೆ ಸ್ವರ್ಗ ಸಿಕ್ಕೋ ಅಂಗ ಮಾಡು ನನ್ನವ್ವ" ಎಂದು ಕತ್ತಲೆಯಲ್ಲಿ ಕೈಗಳೆರಡನ್ನು

ಜೋಡಿಸಿ ಮೇಲಕ್ಕೆ ಎತ್ತಿ ಮುಗಿದು, ಹಿಂದೆಂದೂ ತನಗೆ ದೊರಕಿಲ್ಲದ ಶಾಂತಿಯನ್ನು ಪಡೆದುಕೊಂಡು ನಿರ್ಮಲ ಚಿತ್ತದಿಂದ ಕಣ್ಮುಚ್ಚಿದಳು.

ಮಾರನೆಯ ದಿನ ಬೆಳಗಾಗುತ್ತಿದ್ದಂತೆಯೇ……...

ಊರಿನ ತುಂಬ ಎ.ಸಿ. ಸಾಹೇಬರು ಬರುವ ಸುದ್ದಿ ಒಂದನ್ನು ಬಿಟ್ಟರೆ ಇನ್ನಾವ ಸುದ್ದಿಯೂ ಜನರ ನಾಲಿಗೆ ಮೇಲೆ ಸುಳಿಯುತ್ತಲೇ ಇಲ್ಲ. ಏನೋ ಒಂದು ಅಪೂರ್ವ ಘಟನೆ ಊರಿನ ಚರಿತ್ರೆಯಲ್ಲಿ ಹಿಂದೆ ನಡೆಯದ್ದು, ಮುಂದೆ ಆಗದ್ದು, ಘಟಿಸುತ್ತಿದೆ ಎನ್ನುವಂತೆ ಊರಿನ ಜನರೆಲ್ಲ ನಿರೀಕ್ಷೆಯಲ್ಲಿ ಆತಂಕದಿಂದ ಕಾಯತೊಡಗಿದರು. ಅವರ ದೃಷ್ಟಿಯಲ್ಲಿ ಸತ್ಯ ಮತ್ತು ಧರ್ಮಗಳಿಗೆ ಪ್ರಪಂಚದಲ್ಲಿ, ಅದರಲ್ಲೂ ಕಲಿಯುಗದ ಈ ಸಂದಿಗ್ಧ ಸಮಯದಲ್ಲಿ ಬೆಲೆ ಇದೆಯೋ ಅಥವಾ ಸುಳ್ಳು, ಅಧರ್ಮಗಳೇ ಜಯಭೇರಿ ಬಾರಿಸುತ್ತವೋ– ಈ ವಿಷಯಗಳನ್ನು ತೀರ್ಮಾನಮಾಡುವ ಐತಿಹಾಸಿಕ ಘಟನೆಯಾಗಿ ಇದನ್ನು ತೀವ್ರವಾಗಿ ಪರಿಗಣಿಸಿದ್ದರು. ಸುಮಾರು ಹತ್ತು ಗಂಟೆಯ ಸಮಯ ಎ.ಸಿ. ಸಾಹೇಬರು, ತಹಶೀಲ್ದಾರರು ಮತ್ತು ಭೂನ್ಯಾಯಮಂಡಲಿ ಸದಸ್ಯರು ಎರಡು ಜೀಪುಗಳಲ್ಲಿ ಬಂದು ಇಳಿದರು. ಊರಿನವರು ಹಾಕಲೋದ ಹೂವಿನಹಾರ, ಕೈಗೆ ನೀಡಲೋದ ನಿಂಬೆಹಣ್ಣುಗಳನ್ನು ನಿರಾಕರಿಸಿದರು. ನಾವು ಇಲ್ಲಿ ಬಂದಿರುವುದು ಅತ್ಯಂತ ಪ್ರಮುಖವಾದ ವಿವಾದ ಸ್ಥಳ ಪರಿಶೀಲನೆಗೆ ಹೊರತಾಗಿ, ಮಾಮೂಲಿ ಭೇಟಿಗಾಗಲ್ಲವೆಂದು ಹೇಳಿ; ವಿವಾದಕ್ಕೊಳಗಾಗಿರುವ ಭೂಮಿ ಎಲ್ಲಿದೆ ಅಲ್ಲಿಗೆ ಕರೆದುಕೊಂಡು ನಡೆಯಿರಿ ಎಂದರು. ಇಲ್ಲಿಯೇ ಒಂದು ನೂರು ದಾಪು ಹಾಕಿದರೆ ಸಾಕು ಎಂದೆನ್ನಲು ನಡೆಯಿರಿ ಹೋಗೋಣ" ಎಂದು ಹೊರಟೇಬಿಟ್ಟರು.

ವಿವಾದಗ್ರಸ್ಥ ಸ್ಥಳವನ್ನು ತಲುಪಿದರು. ಸಂಬಂಧಪಟ್ಟ ಮ್ಯಾಪು ಮತ್ತು ದಾಖಲೆಗಳನ್ನು ತಹಶೀಲ್ದಾರರು, ಸೇಕ್ದಾರರು ಮತ್ತು ವಿ.ಎ.ರವರ ಸಹಾಯದಿಂದ ಪರಿಶೀಲಿಸಿದ ನಂತರ ಬಾಜುದಾರರು ದಾಖಲೆಯಲ್ಲಿರುವಂತೆ ಕೆಂಪಲಿಂಗೇಗೌಡ ಮತ್ತು ಅಬ್ದುಲ್ ವಹಾಬ್' ಎನ್ನುವುದನ್ನು ಖಾತ್ರಿ ಮಾಡಿಕೊಂಡರು. ಜೊತೆಗೆ ಜನರಿಂದ ಅವರಿಬ್ಬರ ಗುರುತನ್ನೂ ಮಾಡಿಸಿ ಬರೆದುಕೊಂಡರು.

ಬಾಜುದಾರರ ವಿಚಾರಣೆ ಪ್ರಾರಂಭವಾಯಿತು. ಎ.ಸಿ.ಯವರು ಕೆಂಪಲಿಂಗೇಗೌಡನನ್ನು ಪ್ರತ್ಯೇಕವಾಗಿ ಕರೆದು ಭೂನ್ಯಾಯ ಮಂಡಲಿಯ ಸದಸ್ಯರು, ಚನ್ನಮ್ಮ ಹಾಗೂ ಚಂದ್ರಸೆಟ್ಟಿಯ ಎದುರಿನಲ್ಲಿ ಅವನಿಗೆ ತಾನು ಸತ್ಯವನ್ನಲ್ಲದೆ ಏನನ್ನೂ ಹೇಳುವುದಿಲ್ಲವೆಂಬ ಪ್ರಮಾಣ ವಚನವನ್ನು ಬೋಧಿಸಿದರು. ನಂತರ ವಿಚಾರಣೆ ಮಾಡಲಾಗಿ ಕೆಂಪಲಿಂಗೇಗೌಡ, ಇದು ಸತ್ಯವಾಗ್ಲೂ ಚನ್ನಮ್ಮನ ಭೂಮಿ ಎಂದೂ ಆದರೆ ಕಳೆದ ಎಂಟು ವರ್ಷಗಳಿಂದ ಇದನ್ನು ಚಂದ್ರಸೆಟ್ಟಿಯೇ ವ್ಯವಸಾಯ ಮಾಡುತ್ತಿರುವುದಾಗಿ ತಡವರಿಸದೆ ಹೇಳಿದ. ನಂತರ ವಹಾಬ್ ಸಾಹೇಬನೂ ಕೆಂಪಲಿಂಗೇಗೌಡ ಹೇಳಿದುದನ್ನೇ ಗಿಣಿ ಪಾಠ ಒಪ್ಪಿಸಿದ. ಪುಟ್ಟರಾಜ ಮತ್ತು ಸೇಕ್‌ದಾರ್ ಹಗ್ಗಪ್ಪ "ಸದ್ಯ ನಾವು ಬದುಕಿದೆವು" ಎಂದು ನಿಟ್ಟುಸಿರು ಬಿಡುತ್ತಿದ್ದಂತೆಯೇ; ಜನರ ದೃಷ್ಟಿ ಎಲ್ಲ ತಮ್ಮ ಕಡೆಯೇ ರಭಸದಿಂದ ನುಗ್ಗಿ ಬರುತ್ತಿರುವ ಒಂದು ಸ್ತ್ರೀಯ ಕಡೆಗೆ ತಿರುಗಿತು. ನೋಡುತ್ತಾರೆ;

ಕಾಯಿಲೆಯಿಂದ ನರಳಿ ಕಡ್ಡಿ ಆಗಿಹೋಗಿದ್ದ ಉರುಗಮ್ಮ ಮಿಂಚಿನಂತೆ ಬರುತ್ತಿದ್ದಾಳೆ! ಪುಟ್ಟರಾಜನಿಗೆ ತನ್ನ ಅವ್ವನನ್ನು ಕಂಡು ಎದೆ ನಡುಗಲಾರಂಭಿಸಿತು. ಎಷ್ಟೇ ಧೈರ್ಯ ತಂದುಕೊಳ್ಳಲು ಪ್ರಯತ್ನಿಸಿದರೂ ಒಳಗೊಳಗೇ ಅವನ ಸತ್ವ ಕಸಗಲಾರಂಭಿಸಿ, ಬೆವರು ಕಿತ್ತುಕೊಂಡಿತು.

ಉರುಗಮ್ಮ ಓಡೋಡಿ ಬಂದು ಎ.ಸಿ. ಸಾಹೇಬರ ಬೂಟುಗಳ ಮೇಲೆ ರಪ್ಪನೆ ಬಿದ್ದು, ಎರಡು ಹಸ್ತಗಳಿಂದಲೂ ಹಿಡಿದುಕೊಂಡು "ಅಪ್ಪಾ, ನೀನು ದೇವರ ಸಮ ನನಗೆ ನರಕ ಸಿಕ್ಕದಂಗೆ ನೋಡಕಪ್ಪಾ" ಎಂದಳು. ಎ.ಸಿ. ಯವರಿಗೆ ತಲೆ, ಬುಡ ಗೊತ್ತಾಗಲಿಲ್ಲ. ಉರುಗಮ್ಮನ ಭುಜ ಹಿಡಿದು ಮೇಲೆತ್ತಿ ನೀವು ಯಾರು? ಈ ಕೇಸಿಗೂ ನಿಮಗೂ ಏನೂ ಸಂಬಂಧ" ಎಂದರು. ಉರುಗಮ್ಮನ ಕಣ್ಣುಗಳಲ್ಲಿ ಕೋಪ ಸಿಡಿಯುತ್ತಿತ್ತು. ಜೊತೆಗೆ ಹೆಪ್ಪುಗಟ್ಟಿದ್ದ ದುಃಖ ಮತ್ತು ನೋವುಗಳೆಲ್ಲಾ ಒಮ್ಮೆಯೇ ಸಿಡಿದು ಕಣ್ಣೀರು ಧಾರಾಕಾರವಾಗಿ ಸುರಿಯಲಾರಂಭಿಸಿ ಮಗನ ಕಡೆ ತಿರುಗಿ, "ಈ ಪಾಪಿ ನನ್ನ ಮಗನ ತಾಯಿ ಕನಪ್ಪ ನಾನು, ಇವನು ಮಾಡಬಾರದ್ದೆಲ್ಲ ಮಾಡಿ ನಂಗೆ, ಇವ್ನ ಎತ್ತ ನಂಗೆ, ಆ ಪಾಪ ಎಲ್ಲ ಸುತ್ತುಕೊಂಡು ಹೊಟ್ಟೆಗೆ ಕ್ಯಾನ್ಸರ್ ಕಾಯ್ಲೆ ಬಂದು ಸಾಯ್ತಾ ಇವ್ನಿ ಅಪ್ಪಾ ನೀನು ದೇವರು ಬಂದಂಗೆ ಬಂದಿದ್ದೀಯೇ, ಇವು ಪಾಣೇಲಿ ಚಂದ್ರಪ್ಪಶೆಟ್ಟಿಯೇ ಚನ್ನಮ್ಮನ ಭೂಮಿಯ ಆಬಾದು ಮಾಡ್ತಾ ಅವ್ನ ಅಂತ ಬರೆದಿರೋದು ಸುಳ್ಳು : ಸುಳ್ಳು; ಸುಳ್ಳು, ಅಪ್ಪಟ ಸುಳ್ಳು, ನಾನು ಬಡಕೊಂಡೆ ಸತ್ಯ ಬರೀ; ಆಗೇ ಬರದಿದ್ರೆ ನಾನು ಬರ್ದೀರೂದು ಸುಳ್ಳು ಅಂತ ಒಪ್ಕೊಂಡು ಒಂದು ಮನೆ ದೀಪ ಉಳಿಸು ಅಂತ. ಕೇಳಲಿಲ್ಲ. ಹೆತ್ತೋಳಿಗಿಂತ ಇವನಿಗೆ ಸೆಟ್ಟಿ ನೋಟಿನ ಕಂತೆಯೇ ಜಾಸ್ತಿ ಆಯ್ತು. ! ಇಂಥ ಮಕ್ಕಳು ಬದುಕಿರೋದಕ್ಕಿಂತ ಸಾಯೋದು ಲೇಸು. ಈಗ ಇವನಿಗೆ ಇದಕ್ಕಿದ್ದಂಗೆಯೇ ನೆಲಪಟ್ಟು ಕಾಯಿಲೇ ಬಡ್ದು ಸತ್ರೆ ನಂಗೆ ಬೋ ಸಂತೋಷ ಆಯ್ತದೆ' ಎಂದು ಎದೆಯನ್ನು ರಪರಪನೆ ಕೆಚ್ಚಿಕೊಂಡು, ಗಕ್ಕನೆ ಕುಳಿತು ಬಿಕ್ಕಳಿಸಿ ಅಳಲಾರಂಭಿಸಿದಳು.

ಭೂನ್ಯಾಯ ಮಂಡಲಿ ಸದಸ್ಯರು ಥರಗುಡಲಾರಂಭಿಸಿದರು. ಕೆಂಪಲಿಂಗೇಗೌಡ ಮತ್ತು ಅಬ್ದುಲ್ ವಹಾಬ್‌ರಿಗೆ ತಾವು ನಿಂತ ಭೂಮಿ ನಡುಗಲಾರಂಭಿಸಿ ಬಾಯಿ ಬಿಡುತ್ತಿರುವಂತೆನಿಸತೊಡಗಿತು. ಪುಟ್ಟರಾಜನ ಹೃದಯ ಕಂಪಿಸತೊಡಗಿತು. ಆದರೂ ತನ್ನನ್ನು ಹೆತ್ತವಳು ನೀಡಿದ ಅನಿರೀಕ್ಷಿತ ಪೆಟ್ಟಿನಿಂದ ಚೇತರಿಸಿಕೊಂಡ ಪಾಪಗಳನ್ನು ಮಾಡಿ ಮಾಡಿ ಅವನು ಹೃದಯವನ್ನೇ ಕಳೆದುಕೊಂಡಿದ್ದುದರಿಂದ, ಈಗ ಪರಿಸ್ಥಿತಿಯನ್ನು ಎದುರಿಸಲು ಮನಸ್ಸನ್ನು ಹುರಿದುಂಬಿಸಿ ನಿಂತ. ಎ.ಸಿ.ಯವರು "ಏನಯ್ಯಾ ಪುಟ್ಟರಾಜು ಇದೆಲ್ಲ ಸತ್ಯವೋ?" ಎಂದರು.

"ಸುಳ್ಳು ಸಾರ್.... ಅವಳಿಗೆ ಕಾಯ್ಲೆ ಬಿದ್ದು, ಅದೂ ಕ್ಯಾನ್ಸರ್ ಕಾಯ್ಲೇಲಿ ನರಳಿ ನರಳಿ ತಲೆ ಕೆಟ್ಹೋಗದೆ, ಬಾಯಿಗೆ ಬಂದದ್ದು ಮಾತಾಡ್ತಾಳೆ, ಹಿಂಗೆಯೇ ಸಾರ್.. ಎಷ್ಟು ಹಿಡ್ದು ಮಲಗಿಸಿದ್ರೂ ಒಳ್ಳೆ ಗಾಳೀ ತಿರುಗಿದಂಗೆ ತಿರಗ್ತಾಳೆ....!"

ಈ ಮಾತು ಕೇಳಿದ ಉರುಗಮ್ಮ ಇನ್ನೂ ಎದೆ ಎದೆ ಕೆಚ್ಚಿಕೊಂಡು ನಿನ್ನಂಥ ಪಾಪಿ ನನ್ನ ಮಗನ್ನ ಹೆರೋ ಬದ್ಲು ಒಂದು ಕಲ್ಲುಗುಂಡೋ ಒಂದು ಕೊಳಕ ಮಂಡಲದ ಹಾವೋ ಹೆರಬೇಕಾಗಿತ್ತು. ನಾನೇನೋ ಸುಳ್ಳು ಬೊಗಳ್ತಾ ಇರೋಳು. ನಿನ್ ನಾಲಗೆಗೆ ಉಳಬೀಳ!" ಎಂದು ಬಯಲು ನಡುಗುವಂತೆ ಕಿರುಚಿದಳು.

ಎ.ಸಿ. ಯವರು ಉರುಗಮ್ಮನಿಗೆ ಸುಮ್ಮನಿರುವಂತೆ ಹೇಳಿ, ಪಟ್ಟರಾಜುವಿನ ಕಡೆ ತಿರುಗಿ, ಅವನನ್ನೇ ನುಂಗುವವನಂತೆ ತೀಕ್ಷ್ಣವಾಗಿ ನೋಡುತ್ತ ಕೇಳಿದರು: ಇವರುಯಾರಯ್ಯಾ?"

"ನನ್ನ ತಾಯಿ ಸಾರ್!

"ಅಂದ್ರೆ ಹೆತ್ತ ತಾಯಿಯೋ, ಮಲ ತಾಯಿಯೋ?"

"ಹೆತ್ತ ತಾಯಿ ಸಾರ್!

"ನೋಡು, ನಾನು ತಿಳಿದ ಮಟ್ಟಿಗೆ ಯಾವ ತಾಯೀನೂ ಮಗನಿಗೆ ಕೇಡು ಬಯಸೂದಿಲ್ಲ.... ಒಪ್ಕೋತಿಯಾ?"

"………..."

"ಹೇ ನೋಡಯ್ಯಾ ಇಲ್ಲಿ.. ನಿನ್ನ ಎದುರಿಗೆ ಕುಳಿತಿರೋ, ಬಿಕ್ಕಳಿಸಿ ಅಳ್ತಾ ಇರೋ ಈ ಕೃಶವಾದ ಶರೀರದ ಈ ಜೀವವೇ ನಿನಗೆ ಪ್ರತ್ಯಕ್ಷ ದೈವ; ಗೊತ್ತಾಯ್ತೇ? ಇದರ ಮುಖನೋಡು.... ಸತ್ಯ ಹೇಳು...." ಪುಟ್ಟರಾಜ ತಾಯಿಯ ಕಡೆ ನೋಡಿದ, ನೀರ್ದುಂಬ ಕಣ್ಣುಗಳಿಂದ, ತನ್ನ ತಾಯಿಯ ಕಣ್ಣುಗಳಲ್ಲಿ ಉಕ್ಕುತ್ತಿರುವ ನೋವು, ನೀನು ನನ್ನ ಮಗನೆಯೇ?' ಎನ್ನುವ ರೀತಿಯಲ್ಲಿ ಕೇಳುತ್ತಿರುವ ನೋಟ ಕಂಡು ಅವನ ಭಂಡ ಧೈರ್ಯವಲ್ಲ ಕರಗಿ ಹೋಯಿತು. ನಾಚಿಕೆಯಿಂದ ತಲೆ ತಗ್ಗಿಸಿ ನಿಂತ. ಎ.ಸಿ.ಯವರು ಮುಂದಕ್ಕೆ ನಾಲ್ಕು ಹೆಜ್ಜೆ ಬಂದು, ಪುಟ್ಟರಾಜನ ಭುಜದ ಮೇಲೆ ಕೈ ಇಟ್ಟು ಕೇಳಿದರು, ನನಗೂ ತಾಯಿ ಇದ್ರು ಅನ್ನೋದ ನಾನು ಮರೆಯೋಕಾಗಲ್ಲ. ಯಾವ ತಾಯಿಯೂ ತನ್ನ ಮಗ ಒಬ್ಬರ ಮನೆ ಹಾಳು ಮಾಡಲಿ ಅಂತ ಹಾರೈಸೊಲ್ಲ! ಅದಕ್ಕಾಗಿ ನಮ್ಮನ್ನ ಒಂಬತ್ತು ತಿಂಗಳು ಹೊಟ್ಟೇಲಿ ಮಡಕ್ಕೊಂಡು ಹೆರೋಲ್ಲ ಕಣಯ್ಯ! ನನ್ನ ಮಗ ಒಬ್ಬರ ಕಷ್ಟಕ್ಕಾಗಲಿ, ನಾಲ್ಕುಜನ ದುಃಖದಿಂದ ನೋವಿನಿಂದ ನರಳೋರ ಕಣ್ಣೀರು ಒರೆಸಲಿ ಅಂತ ಆಸೆ ಇಡ್ಕೊಂಡಿದ್ದಾರೆ. ಇಲ್ಲಿ ಕೇಳಯ್ಯ, ನನಗೆ ನಿನಗೆ ಒಬ್ಬರಿಗೆ ಉಪಕಾರ ಮಾಡೋ ಶಕ್ತಿ ಇಲ್ಲದೆ ಇರಬೋದು ಆದರೆ ಒಬ್ಬರಿಗೆ ಅಪಕಾರ ಮಾಡೋಕೆ ಅಂತ್ಲೇ ಖಂಡಿತ ನಮ್ಮ ತಾಯಂದಿರು ಹೆತ್ತಿಲ್ಲ.... ನಿಮ್ ತಾಯಿ ನೋಡಿದವರಿಗೆ ಬಹಳ ಸಂತೋಷ, ದುಃಖ ಎರಡೂ ಆಗ್ತಾ ಇವೆ. ನಿರಕ್ಷರಕುಕ್ಷಿಯಾದ ಈ ನಿಷ್ಪಾಪ ವ್ಯಕ್ತಿಯಿಂದ ಇಲ್ಲಿರೋರು, ನಾನು ನೀನು ಎಲ್ಲ ಕಲೀಬೇಕಾದ್ದು ಬಹಳ ಇದೆ" ಎಂದರು. ಪುಟ್ಟರಾಜನ ಕಣ್ಣುಗಳಲ್ಲಿ ನೀರು ಸುರಿಯಲಾರಂಭಿಸಿದವು.

ಎ.ಸಿ. ಮತ್ತೊಮ್ಮೆ ಕೇಳಿದರು: "ನಿಜ ಹೇಳು... ನಿಮ್ಮ ತಾಯಿ ಹೇಳ್ತಾ ಇರೋದು ನಿಜವೇ? ನೀನು ಬರೆದಿರೋ ಪಾಣಿ ಸುಳ್ಳೇ? ಸತ್ಯ ಹೇಳಿದರೆ ನಿನ್ನ ರಕ್ಷಿಸೋ ಭಾರ ನಂದು... ಮಾತಾಡಯ್ಯ."

"ನಮ್ಮವ್ವ ಹೇಳ್ತಾ ಇರೋದು ಸತ್ಯ ಸಾರ್!" ಎಂದು ಹೇಳಿದ. ಪುಟ್ಟರಾಜ ತನ್ನ ಬೊಗಸೆಯಿಂದ ಮುಖ ಮುಚ್ಚಿಕೊಂಡು ಅಳಲಾರಂಭಿಸಿದ.

ಉರುಗಮ್ಮ ಮಗನನ್ನು ತನ್ನ ಕಣ್ಣುಗಳಲ್ಲೇ ತುಂಬಿಕೊಳ್ಳುವಂತೆ ನೋಡಿದಳು. ಆನಂದ ಅವಳ ಹೃದಯಕ್ಕೆ ತೀವ್ರವಾಗಿ ಲಗ್ಗೆ ಹಾಕಿತು; "ಮಗ ಲೋ ಪುಟ್ಟ!" ಎಂದು ಮೇಲೆದ್ದು ಮಗನ ಕಡೆ ಕೈ ಚಾಚುತ್ತ ಬಂದು ತನ್ನ ಸರ್ವಸ್ವವೆಲ್ಲ ನೀನೇ ಎನ್ನುವಂತೆ ತಬ್ಬಿಕೊಂಡಳು. ಒಂದೆರಡು ಕ್ಷಣಗಳಷ್ಟೆ, ದೊಪ್ಪನೆ ಉರುಗಮ್ಮನ ದೇಹ ನೆಲಕ್ಕುರುಳಿತು. ಕೆರೆಯ ಏರಿಯ ಬಯಲೆಲ್ಲ ನಡುಗುವಂತೆ ತನ್ನ ಅವ್ವನ ಎದೆಯ ಮೇಲೆ ತಲೆಯಿಟ್ಟು.... "ಅವ್ವಾ!" ಎಂದು ಕಿರುಚಿದ.

ಎ.ಸಿ. ಸಾಹೇಬರು, ಭೂನ್ಯಾಯ ಮಂಡಲಿ ಸದಸ್ಯರು, ಬಾಜುದಾರರು ಚಂದ್ರಪ್ಪಶೆಟ್ಟಿ ಎಲ್ಲ ತಲೆತಗ್ಗಿಸಿ ನೋಡುತ್ತಿದ್ದಂತೆಯೇ ಚನ್ನಮ್ಮ ಓಡೋಡಿ ಬಂದು "ಇವತ್ತು ನಮವ್ವ ಸತ್ತೋದ್ಲು" ಎಂದು ಉರುಗಮ್ಮನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಕೆನ್ನೆಯನ್ನು ಸವರುತ್ತ ಅಳಲಾರಂಭಿಸಿದಳು!

~ * ~ * ~ * ~

**ಆಕರ: ಬೆಸಗರಹಳ್ಳಿ ರಾಮಣ್ಣನವರ ಆಯ್ದ ಕಥೆಗಳು**

## 1.3 ಜೀವನ ಅಮರ; ಹುಟ್ಟು ಸಾವು ತಾತ್ಕಾಲಿಕ

**– ಡಾ. ಕೆ. ಶಿವರಾಮ ಕಾರಂತ**

**ಸಂತಾನದ ಹಿನ್ನೆಲೆ**

'ಶಿಶುವೇ ಮಾನವನ ತಂದೆ" ಎಂಬ ಇಂಗ್ಲಿಷ್ ನಾಣ್ನುಡಿಯು ಅಕ್ಷರಶಃ ನಿಜವಲ್ಲದೆ ಹೋದರೂ, ಜೀವನ ಮುಂದುವರಿಸುವ ಬಗೆಯನ್ನು ಅದು ತೋರಿಸುತ್ತದೆ. ಯಾವುದಾದರೊಂದು ಬಳಗದ ಒಂದು ಶಿಶುವನ್ನು ಪರಿಶೀಲಿಸಿದಲ್ಲಿ ಆ ಮಗುವಿನ ರೂಪ ಮತ್ತು ಇತರ ಕೆಲವು ಲಕ್ಷಣಗಳು ತಂದೆಯಿಂದಲೋ ತಾಯಿಯಿಂದಲೋ ಬಂದಂತೆ ಕಾಣುತ್ತವೆ. ಆದರೆ ತಂದೆಯ ಇಲ್ಲವೆ ತಾಯಿಯ ಯಾವೊತ್ತು ಆಕಾರ, ಲಕ್ಷಣಗಳು ಆ ಮಗುವಿನಲ್ಲಿ ಪ್ರತಿಬಿಂಬಿಸುವುದಿಲ್ಲ. ತಂದೆಯ ಮುಖ, ತಾಯಿಯ ಬಣ್ಣ, ಅಜ್ಜನದೋ ಮಾವನದೋ ಕಣ್ಣು, ಕಿವಿ, ಮತ್ತು ಒಬ್ಬ ಬಲು ದೂರದ ರಕ್ತ ಸಂಬಂಧಿಕನ ಇನ್ನಾವುದೋ ಒಂದು ಅಂಗಸಾಮ್ಯ ಇವುಗಳೆಲ್ಲ ಮಗುವಿನಲ್ಲಿ ಕಾಣಿಸಬಹುದು. ಮಗುವಿನ ರೂಪಕ್ಕೆ ಕಾರಣರಾದವರು ಅವನ ತಂದೆ ತಾಯಿಗಳೆಷ್ಟು ನಿಜವೋ, ಅವರ ಹಿಂದಿನ ತಲೆಮಾರಿನವರು ಅಷ್ಟೇ ನಿಜ. ರೂಪದ ವಿಚಾರದಲ್ಲಿ ಈ ಮಾತು ಹೇಗೆ ಅನ್ವಯಿಸುತ್ತದೋ ಅದು ಮಗುವಿನ ಗುಣ ಸ್ವಭಾವಗಳ ವಿಚಾರಗಳಲ್ಲಿಯೂ ಇನ್ನಷ್ಟು ಸ್ಥೂಲವಾಗಿ ಅನ್ವಯಿಸುತ್ತದೆ. ಮಗುವಿನಲ್ಲಿ ಅವನ ತಂದೆಯ ಗುಣವೂ ಸೇರುತ್ತದೆ. ತಾಯಿಯ ಗುಣವೂ ಸೇರಿರುತ್ತದೆ. ಅವನ ಹಿರಿಯರಿಂದ ಮೇಧಾವಿತನ ಬಂದಿರಬಹುದು. ಇನ್ನಾವನೋ ಹಿರಿಯನಿಂದ ನರಗಳ ಚಟುವಟಿಕೆ ಬಂದಿರಬಹುದು. ಈ ಎಲ್ಲ ಸಂಪತ್ತಿನ ಮೇಲೆ ಆ ಮಗುವಿನ ಸುತ್ತಲೂ ಬಾಳಿ ಬದುಕುವ ಬಂಧು ಬಳಗದವರು, ಗೆಳೆಯರು, ವಿರೋಧಿಗಳು, ಅನೇಕ ಸನ್ನಿವೇಶಗಳು, ಆ ಮಗುವಿನ ಮನಸ್ಸಿನ ರಚನೆಗೂ, ಬೆಳವಣಿಗೆಗೂ ಪ್ರಭಾವ ಬೀರಬಹುದು.

**ಗುಣದ ಹಿನ್ನೆಲೆ**

ಎಷ್ಟೋ ಬಾರಿ, ಒಂದು ತಲೆಮಾರಿನಲ್ಲಿ ಒಂದು ವ್ಯಕ್ತಿಯಲ್ಲಿ ಕಾಣಿಸಿಕೊಂಡ ರೂಪ ವಿಶೇಷ, ಅವನ ಬಹುಮಂದಿ ಪೀಳಿಗೆಯವರಲ್ಲಿ ಕಾಣಿಸಿಕೊಳ್ಳದೆ, ಹಲವು ವರ್ಷಗಳ ಬಳಿಕ ಆ ಬಳಗದ ಇನ್ನಾವನಾದರೂ ಒಬ್ಬನಲ್ಲಿ ಮರುಕಳಿಸಬಹುದು. ಒಬ್ಬನಿಗೆ ಕೋಸುಗಣ್ಣಿದೆ~ ಎಂದು ತಿಳಿಯುವ. ಅದು ಅವನ ಮಕ್ಕಳು ಮರಿಮಕ್ಕಳಲ್ಲಿ ಕಾಣಿಸದೆ ಹೋಗಿ, ಮುಂದಿನ ಪೀಳಿಗೆಯಲ್ಲಿ ಕಾಣಿಸಬಹುದು. ಅದರಂತೆ ವ್ಯಕ್ತಿಯ ಗುಣಗಳಾದರೂ, ಸಮಾಜದ ಹತ್ತು ಮಂದಿಯಿಂದ ಪರಿಣಾಮಗೊಳ್ಳುವುದರಿಂದ, ದೀರ್ಘ ಕಾಲದವರೆಗೆ ಅದು ಜನಗಳಲ್ಲಿ ಕಾಣಿಸದೆ ಹೋದರೂ, ಬಹಳಕಾಲದ ಬಳಿಕ ಅವನ ಆವರಣದಲ್ಲಿ ನೆಲೆಸಿದ್ದ ಮನೋವೃತ್ತಿಯ ಪರಿಣಾಮವಾಗಿ, ಇನ್ನೊಬ್ಬನಲ್ಲಿ ಮೂಡಿ ತೋರಬಹುದು. ಬುದ್ಧನಲ್ಲಿ ಕಾಣಿಸಿ ಕೊಂಡ

ಅಹಿಂಸಾ ವೃತ್ತಿಯಾಗಲಿ, ಜೀವದಯೆಯಾಗಲಿ, ಅಷ್ಟೇ ತೀವ್ರತೆಯಿಂದ ಅವನ ಮಗ ರಾಹುಲನಲ್ಲಾಗಲಿ ಅವನ ಶಿಷ್ಯ ಕೂಟದ ಭಿಕ್ಷುಗಳಲ್ಲಾಗಲಿ ಕಾಣಿಸಲಿಲ್ಲ. ಆದರೆ ಇಂದು ಎರಡು ಸಾವಿರ ವರ್ಷಗಳ ಬಳಿಕ ಅದೇ ಮನೋವೃತ್ತಿಯ ಬೆಳಕು ಗಾಂಧೀಜಿಯವರಲ್ಲಿ ಇನ್ನಷ್ಟು ತೀವ್ರವಾಗಿ ಪ್ರಕಟವಾದುದನ್ನು ಕಾಣುತ್ತೇವೆ. ಅಂದಿನ ಬುದ್ಧನ ಮನೋವೃತ್ತಿಯ ಬೆಳಕು ಗಾಂಧೀಜಿಯವರಲ್ಲಿ ಇನ್ನಷ್ಟು ತೀವ್ರವಾಗಿ ಪ್ರಕಟವಾದುದನ್ನು ಕಾಣುತ್ತಿದ್ದೇವೆ. ಅಂದಿನ ಬುದ್ಧನ ಮನೋವೃತ್ತಿಯು ಸಮಾಜದ ಬದುಕಾಗಿ ಹಂಚಿಹೋಗಿ, ಈ ಎರಡು ಸಾವಿರ ವರ್ಷಗಳ ತನಕ ಹರಿದು ಬಂದು, ಅನುಕೂಲ ಸನ್ನಿವೇಶಗಳ ದೆಸೆಯಿಂದ ತಿರುಗಿ ಗಾಂಧಿಯವರಲ್ಲಿ ಪ್ರಕಟವಾಯಿತು. ಹೀಗೆ ಪ್ರಕಟವಾದ ಮಾತ್ರಕ್ಕೆ ಗಾಂಧೀಜಿಯವರು ಶಾಕ್ಯವಂಶಸ್ಥರೇ ಆಗಿರಬೇಕಿಲ್ಲ. ಬುದ್ಧನ ಅವತಾರವೂ ಆಗಿರಬೇಕಿಲ್ಲ.

**ಒಟ್ಟು ಜೀವನ**

ನಾವು ಒಟ್ಟು ಜೀವನದ ದೃಷ್ಟಿಯಿಂದ ಸಾವು, ಹುಟ್ಟುಗಳ ಮರ್ಮವನ್ನು ಅಳೆಯಬೇಕಾಗುತ್ತದೆ. ಒಂದೊಂದು ವ್ಯಕ್ತಿಯ ಕಾರ್ಯಕಲಾಪಗಳು ಸಾವು, ಹುಟ್ಟುಗಳ ಮಿತಿಯಲ್ಲಿ ಸಿಲುಕಿದಂತೆ ಕಂಡರೂ, ಅವು ಅಮರವಾದ ಜೀವನ ಪ್ರವಾಹದ ಒಂದು ಅಂಶ. ವ್ಯಕ್ತಿಯ ತೋರಿಕೆಯ ಸಾವು ಸಾವೂ ಅಲ್ಲ, ಹುಟ್ಟು ಹುಟ್ಟೂ ಅಲ್ಲ, ಆಲದ ಮರವೊಂದು ಹುಟ್ಟಿ ಬೆಳೆದು ಮುಪ್ಪು ಬರುವ ಮೊದಲೇ ಬಿಳಲನ್ನು ನೆಲಕ್ಕೂರುತ್ತದೆ. ಅನಂತರ ವಯಸ್ಸಿನಿಂದ ಅದರ ಮೊದಲ ಕಾಂಡ ನಾಶವಾದರೂ ಈ ಹೊಸ ಬೀಳುಗಳೇ ಕಾಂಡಗಳಾಗಿ ಆ ಮರದ ಜೀವನ ಮುಂದೆ ಸಾಗುತ್ತದೆ. ಮೊದಲಿನ ಕಾಂಡ ಸತ್ತುದು ನಿಜವಾದರೂ ಆಲದ ಮರ ಸತ್ತುದು ನಿಜವಲ್ಲ.

**ಅಮರತ್ವದ ದಾರಿ**

ಜೀವನದ ಅಮರತ್ವವನ್ನು ಹೀಗೂ ಬಣ್ಣಿಸಬಹುದು. ಬೆಕ್ಟೀರಿಯದಂಥ ಏಕಕಣ ಜೀವಿಗಳು ಬೆಳೆದು, ಸಾವು ಬರುವ ಮುನ್ನವೇ ಇಬ್ಬಾಗವಾಗುತ್ತವೆ. ತುಣುಕುಗಳು ತಿರುಗಿ ಬೆಳೆದು, ಅವುಗಳಲ್ಲಿ ಒಂದೊಂದೂ ಮುಪ್ಪಿಗಿಂತ ಮೊದಲು, ತಿರುಗಿ ಒಡೆಯುತ್ತ ಹೋಗುತ್ತದೆ. ಅವುಗಳ ಜೀವನ ಹೀಗೆ ಅನವರತ ಮುಂದೆ ಸರಿಯುತ್ತದೆ. ಅಂಥ ಬೆಳವಣಿಗೆ ಹೀಗೆ ಅನಂತವಾಗಿ ಹೋಗುತ್ತದೆಯಾದರೆ, ಇಂದು ಪ್ರಪಂಚವೆಲ್ಲ ಬೆಕ್ಟೀರಿಯಗಳಿಂದ ತುಂಬಿರಬೇಡವೇ? ನಿಜ, ಇಂದು ಹಾಗಾಗಿಲ್ಲ, ಪ್ರವಂಚದಲ್ಲಿ ಬೆಕ್ಟೀರಿಯಗಳಲ್ಲದ, ಲಕ್ಷೋಪಲಕ್ಷ ಜೀವಿಗಳಿವೆ. ಅವುಗಳೂ ಜೀವನಕ್ಕೆ ಅನಿವಾರ್ಯ. ಇಂದುಳಿದ ಬೆಕ್ಟೀರಿಯಗಳು ಹಿಂದಿನ ಬೆಕ್ಟೀರಿಯಗಳ ಎಷ್ಟನೆಯವೋ ಆದ ಕಿರಿಯ ಅಂಶಗಳು. ಅವುಗಳಲ್ಲಿ ಎಷ್ಟೋ ಎಷ್ಟೋ ಅಂಶಗಳು

ಬದುಕಿನಿಂದ ನಷ್ಟವಾಗಿ ಹೋದುವು, ಆದರೂ ಈಗ ಉಳಿದಿರುವ ಬೆಕ್ಟೀರಿಯಗಳಲ್ಲಿ ತೀರ ಪ್ರಾಚೀನ ಕಾಲದ ಬೆಕ್ಟೀರಿಯಗಳ ಜೀವನಯಾತ್ರೆಯ ನಿಡಿದಾದ ಚಹರೆ ಕಾಣಿಸುತ್ತಿದೆ.

**ವ್ಯಕ್ತಿತ್ವ ಅಮರತ್ವದ ಅಂಶ**

ಜೀವನ ಪ್ರವಾಹದ ವ್ಯಕ್ತಿತ್ವ ಈ ತೆರನಾದುದು. ಒಂದು ವ್ಯಕ್ತಿಯಲ್ಲಿ ಪ್ರಕಟವಾದ ಶಕ್ತಿಗಳು ಅಭಿವೃದ್ಧಿಗೊಂಡು ಅದನ್ನು ಅವನು ಬದುಕಿಗೆ ತಂದ ಶರೀರ ಸಾಯುವ ಮೊದಲೇ, ಆ ಶಕ್ತಿಗಳು ಸುತ್ತಲಿನ ಆವರಣದಲ್ಲಿ ಅಂದರೆ ಇತರ ವ್ಯಕ್ತಿಗಳ ಜೀವನದಲ್ಲಿ ಬೆರೆಯುತ್ತವೆ. ಆ ಮೂಲಕ ಅವು ಸಾವನ್ನು ಧಿಕ್ಕರಿಸಿ ಅಮರವಾಗುತ್ತವೆ. ಒಬ್ಬ ವ್ಯಕ್ತಿ ತಾನು ಬದುಕಿನಲ್ಲಿ ಇತರ ಮನುಷ್ಯ ಕುಟುಂಬವನ್ನು ಸಂಧಿಸದೆ ಹೋದರೂ, ಅವನು ತನ್ನ ಅಮರತ್ವವನ್ನು ಸಾಧಿಸಬಲ್ಲ. ಆ ವ್ಯಕ್ತಿ ತನ್ನ ಉದ್ದಾಮ ಜೀವನದಿಂದ, ಇಲ್ಲವೆ ಉಜ್ವಲ ಪ್ರೇರಣೆಯಿಂದ, ಕಾಲವನ್ನು ಧಿಕ್ಕರಿಸಿ ನಿಲ್ಲಲು ಬರುತ್ತದೆ. ಅವನಾಡಿದ ಮಾತುಗಳು ನಾಣ್ಣುಡಿಗಳಾಗಬಹುದು. ಅವನು ಕಂಡುಹಿಡಿದ ತತ್ವಗಳು ಗ್ರಂಥಸ್ಥವಾಗಿ ಸಾವಿರ ವರುಷಗಳ ಮುಂದಿನ ಬದುಕಿಗೆ ನೆರವಾಗಬಹುದು. ಅವನ ಕೃತಿಗಳು, ಅಂದರೆ ಅವನು ಮಾಡಿದ ಯಂತ್ರಗಳು, ಕೆತ್ತಿದ ವಿಗ್ರಹಗಳು, ಆಡಿದ ಮಾತುಗಳು ನೂರಾರು ವರ್ಷಗಳ ಬದುಕಿಗೆ ನೆರವಾಗಿ, ಪರಿಣಾಮ ಉಂಟು ಮಾಡಬಹುದು. ಅದರಿಂದಲೇ ಒಬ್ಬ ಬುದ್ಧನೋ, ಇನ್ನಾವ ಋಷಿಯೋ ಆಡಿದ ಮಾತು ಸುತ್ತಲಿನ, ಸಮಕಾಲೀನ ಜೀವನಕ್ಕೆ ಉಂಟು ಮಾಡಿದ ಪರಿಣಾಮಕ್ಕಿಂತಲೂ ಹೆಚ್ಚಾಗಿ, ಸಾವಿರ ಎರಡು ಸಾವಿರ ವರ್ಷಗಳ ಬಳಿಕ ಬಂದ ಜೀವನಕ್ಕೆ ಬೆಳಕನ್ನು ಕೊಡಲು ಸಾಧ್ಯವಾದೀತು. ಆದರೆ ಆ ಬುದ್ದನ ನಡೆ ನುಡಿ, ಕೃತಿಗಳ ವರ್ಚಸ್ಸು ಇಂದಿನವರ ಎಟುಕಿಗೆ ಸಿಗಲು, ನಮಗೂ ಅವನಿಗೂ ನಡುವೆ ಸಾಗಿದ ಎರಡು ಸಾವಿರ ವರ್ಷಗಳಲ್ಲಿ ಬದುಕಿದ ಜನಜೀವನವೇ ಕಾರಣ, ಜನಜೀವನದ ಪ್ರವಾಹದಿಂದಾಗಿ, ಅಂದಿನ ಬುದ್ಧ ಇಂದಿನ ತನಕವೂ ಬದುಕಿರುವಂತೆ ಆಯಿತು.

ಅಂದಿನ ಬುದ್ದ ತನ್ನ ಜೀವಿತದ ಕಾಲದಲ್ಲಿ ಒಬ್ಬ ವ್ಯಕ್ತಿಯೆನಿಸಿದರೂ ಅವನ ಜೀವನದ ಕ್ರಿಯೆಗಳಿಗೆ ಅವನೊಬ್ಬನೇ ಸರ್ವಾಧಿಕಾರಿಯಲ್ಲ. ಅವನಿಗಿಂತ ಹಿಂದಕ್ಕೆ ಸಾಗಿದ ಜೀವನದ ವರ್ಚಸ್ಸಿಗೆ ಹಿರಿಯ ಸಾಕ್ಷಿ ಅವನು. ಅನೇಕರ ಕರುಣೆ, ಅನೇಕರ ದುಃಖ, ಅನೇಕರ ಅಶಾಂತಿಗಳು ಅವನಲ್ಲಿ ತೀಕ್ಷ್ಣವಾಗಿ ಪ್ರಕಟಗೊಂಡು, ಅವನ ಮೂಲಕ ಸುತ್ತಲಿನ ಜೀವನಕ್ಕೆ ನೆರವಾದ ಪ್ರತ್ಯುತ್ತರವನ್ನು ಪಡೆದುವು.

**ಸಮಷ್ಟಿ ರೂಪ**

ಜೀವನವನ್ನು ಹೀಗೆ ಸಮಷ್ಟಿಯಿಂದ ನಾವು ನೋಡಬೇಕೇ ವಿನಾ, ವ್ಯಕ್ತಿ, ವ್ಯಕ್ತಿಗಳನ್ನು ಬೇರೆ ಬೇರೆಯಾಗಿ ಎಣಿಸಿ ತಿಳಿಯುವುದು ತಪ್ಪು. ಆಗ 'ಸಾವು' ಎಂಬುದು ಅರ್ಥವಿಲ್ಲದ ಒಂದು ಮಾತೆನಿಸೀತು.

'ವ್ಯಕ್ತಿ' ಎಂಬುದು ಜೀವನದ ಶಕ್ತಿಯು ಮೊಳೆತು, ಬೆಳೆದು ವಿಸ್ತರಿಸಲು ಅನುಕೂಲವಾದ ಒಂದು ಘಟಕ. ವ್ಯಕ್ತಿಯ ಶರೀರದಲ್ಲಿ ಈ ಉದ್ದೇಶಗಳನ್ನು ನೆರವೇರಿಸಿ ಸಾಗಿಸುವ ಚೇತನ ಇರುವಷ್ಟು ಕಾಲ ಅದು ಬದುಕುವುದು ಅವಶ್ಯ. ತನ್ನಿಂದಾಗುವ ಕೆಲಸ ಮಾಡಿ ಮುಗಿದರೆ ಆ ಶರೀರದ ಕೆಲಸವಾಯಿತು. ಅಷ್ಟರೊಳಗೇನೆ ವ್ಯಕ್ತಿಯ ಅನೇಕ ತೆರನ ಶಕ್ತಿಗಳು ಸುತ್ತಲಿನ ಅನೇಕ ಜೀವಿಗಳಲ್ಲಿ ಮೂಡಿ, ಮುಂದುವರಿಯುವುದರಿಂದ ಆ 'ವ್ಯಕ್ತಿ'ತ್ವಕ್ಕೆ ಕೊನೆ ಬಂದರೂ, ಜೀವನಕ್ಕೆ ಕೊನೆ ಇಲ್ಲ. ಈ ಮಾತು ಸ್ವಾಭಾವಿಕವಾಗಿ ಆಗುವ ಮರಣಗಳಿಗೆ ಅನ್ವಯಿಸಬಹುದೇ ಹೊರತು, ಎಳೆತನದ ಸಾವುಗಳಿಗೋ, ಕೊಲೆ, ಅವಘಡ, ಪಿಡುಗು ಇವುಗಳಿಂದ ಬರುವ ಅಕಾಲ ಮರಣಕ್ಕೋ ಅನ್ವಯಿಸೀತೇ~ ಎಂದು ನೀವು ಕೇಳಬಹುದು. ಮೃತ್ಯುವಿಗೆ ತುತ್ತಾಗುವ ವ್ಯಕ್ತಿಗಳು ಬದುಕಿರುವಷ್ಟು ಕಾಲ ಇನ್ನೊಬ್ಬರ ಜೀವನದಲ್ಲಿ ಬೆರೆತು ಪಾಲುಗಾರರಾಗುತ್ತಾರೆ. ಆದರೆ ಅವರ ವ್ಯಕ್ತಿತ್ವದ ವಿಸ್ತರಣಕ್ಕೆ ಅವರ ಶರೀರಗಳು ಸಂಪೂರ್ಣ ಸಹಾಯವಾಗಿರುವುದಿಲ್ಲ. ಅಂಥ ವ್ಯಕ್ತಿಗಳ ಬಾಳ್ವೆ ಅಪೂರ್ಣ: ನಿಜ, ಆದರೆ ನಾವು ಈ ತೀರ್ಮಾನವನ್ನು ಕೆಲವೇ ಜೀವಿಗಳನ್ನೂ ಅವುಗಳ ಹಿತಾಹಿತಗಳನ್ನೂ, ಬೇರೆಯಾಗಿಯೇ ಎಣಿಸಿ ಮಾಡಲು ಬರುವಂತಿಲ್ಲ. ಒಟ್ಟು ಜೀವನ ಪ್ರವಾಹದಲ್ಲಿ ಲಕ್ಷೋಪಲಕ್ಷ ಜೀವ ಜಾತಿಗಳು ಸೇರಿವೆ. ಆ ಒಂದೊಂದು ಜೀವ ಜಾತಿಯ ಬೆಳವಣಿಗೆಯೂ ಸಾಗಬೇಕು. ಆಗ ಒಂದು ಜೀವಜಾತಿಯ ಸ್ವಾರ್ಥವು ಇನ್ನೊಂದು ಜೀವಜಾತಿಯ ಸ್ವಾರ್ಥಕ್ಕೆ ಅಡ್ಡವಾಗಿ ಬರಬಹುದು, ಮನುಷ್ಯ ಕುಟುಂಬದಲ್ಲೇ, ಒಂದು ಜೀವಕುಲದ ಸ್ವಾರ್ಥ ಇನ್ನೊಂದಕ್ಕೆ ಅಡ್ಡವಾಗಿ ಬಂದು, ಸಮರಗಳಾಗಿ, ಹಲವಾರು ವ್ಯಕ್ತಿಗಳ ಅಕಾಲ ಮರಣವನ್ನು ಸಾಧಿಸಬಹುದು. ಅಂಟು ರೋಗದ ಕ್ರಿಮಿಗಳಿಗೂ ಮನುಷ್ಯ ಸಮುದಾಯಕ್ಕೂ ಇಂಥ ಕಾಳಗವಾಗಬಹುದು. ಇದರಿಂದ ಮಾನವ ವ್ಯಕ್ತಿಗೆ ಅಹಿತವಾದೀತು. ಜೀವನ ಪ್ರವಾಹಕ್ಕೂ ಅಹಿತವಾಗಬಹುದು, ಆದರೆ, ಇಂಥ ಅನೇಕ ಅಹಿತಗಳು ಜೀವನ ಪ್ರವಾಹಕ್ಕೆ ಎಚ್ಚರ ಹುಟ್ಟಿಸಿ, ಮುಂದೆ ಇದಕ್ಕಿಂತ ಕಡಮೆ ಹಾನಿಯಾಗುವಂತೆ ಮಾಡಬಹುದು. ಬಹು ದೊಡ್ಡ ಜೀವನ ಪ್ರವಾಹದ ಸೆಳವಿನಲ್ಲಿ ಆಗುವ ಎಷ್ಟೋ ಘರ್ಷಣೆಗಳು, ವ್ಯಕ್ತಿಗೆ ಅರ್ಥವಾಗದೆ ಹೋಗುವುದರಲ್ಲಿ ಆಶ್ಚರ್ಯವಿಲ್ಲ. ಜೀವನ ಪ್ರವಾಹದ ಹಿತವನ್ನು ಎಣಿಸುವಲ್ಲಿ ಮಾನವನಿಗೆ ಮೃತ್ಯುವಾಗಿ ಬರುವ ರೋಗಾಣುಗಳು ಮುಖ್ಯವೆನಿಸಬಹುದು.

**ಸಾವು, ವಿಶ್ರಾಂತಿ**

ನಾವು ನಮ್ಮ ಎಟುಕಿಗೆ ಸಿಗುವ ಜೀವನವನ್ನು ತಿಳಿಯಲು ಪ್ರಯತ್ನಿಸಿದರೆ ಸಾಕು, ನಾವು ನಮ್ಮಲ್ಲಿ ಚೇತನ ತುಂಬಿರುವಷ್ಟು ದಿನ, ಸುತ್ತಲಿನ ಬದುಕಿಗೆ ಆದನ್ನು ಕಡಿಮೆ ಹಾನಿಮಾಡಿ, ಜೀವನದ ಅದನ್ನು ಪೂರ್ಣ ಲಾಭವನ್ನು ಹೊಂದಿ, ನಮ್ಮ ಮನಸ್ಸೂ ಕೃತಿಗಳೂ ಎಷ್ಟು ಹಿಗ್ಗಿ ವಿಸ್ತರಿಸಬಹುದೋ ಅಷ್ಟಕ್ಕೆ

ಸಮನಾಗಿ ಬೆಳೆದರಾಯಿತು. ಮುಂದೆ ಶರೀರ ಕಳಚುವುದೆಂಬ ಭೀತಿ ಏತಕ್ಕೆ? ಅದರಿಂದ ಮತ್ತೂ ಹೆಚ್ಚಿನ ಕೆಲಸವಾಗುವುದಿಲ್ಲವೆಂದೇ ಅದು ಕಳಚುತ್ತದೆ. ದುಡಿದ ಜೀವನಕ್ಕೆ ಸಾವು ವಿಶ್ರಾಂತಿ; ಬಹುಮಾನ.

ವ್ಯಕ್ತಿ ತನ್ನನ್ನು ಬೇರೆಯೇ ಸ್ವತಂತ್ರ ಜೀವಿ ಎಂದು ಭ್ರಮಿಸಿ ನಡೆಯುವುದರಿಂದ, ಒಟ್ಟು ಜೀವನಕ್ಕೆ ಆಗುವ ಹಾನಿ ಅಷ್ಟಿಷ್ಟಲ್ಲ. ಆ ತನ್ನತನದ ಕಲ್ಪನೆಯಿಂದಾಗಿ, ಬರಿಯ ಸ್ವಂತ ದುಃಖವನ್ನು ನಿವಾರಿಸಿಕೊಂಡು, ಸುಖವನ್ನು ಹೆಚ್ಚಿಸಿ ಕೊಳ್ಳುವುದರಲ್ಲಿ ಅವನು ಶ್ರಮಪಡುತ್ತಾನೆ. ಈ ದೃಷ್ಟಿಯನ್ನು ಸಾರುವ ತತ್ವಜ್ಞಾನ ಉಚ್ಚ ಧ್ಯೇಯವನ್ನು ಸಾರಿದಂತೆ ಕಂಡರೂ, ಅದು ಮನುಷ್ಯನಲ್ಲಿ ಸಂಕುಚಿತ ಶೀಲಗಳನ್ನು ಬೆಳೆಯಿಸುತ್ತದೆ. ವ್ಯಕ್ತಿ, ಇಂದಿನ ದಿನದಲ್ಲಿ ಬರಿಯ ತನ್ನ ಸುಖಕ್ಕಾಗಿ ಹೆಣಗಾಡುವ ಜೀವಿಯಾಗಿ ಕಾಣಿಸಿದರೂ, ಬದುಕು ಮುಂದುವರಿದಂತೆ, ಜೀವನಪಥ ವಿಸ್ತರಿಸಿದಂತೆ ಈ ವ್ಯಕ್ತಿಪರ ಭಾವನೆ ಕಳಚೀತು. ಅಂಥ ತತ್ವವನ್ನು ಅವಲಂಬಿಸಿ ಕಟ್ಟಿದ ತತ್ವಜ್ಞಾನಗಳೂ ಆಗ ಕುಸಿದಾವು.

**ಬೇರೆ ಆತ್ಮವಿಲ್ಲ**

ವ್ಯಕ್ತಿಗೆ ಬೇರೆಯೆ ಆದ ಆತ್ಮವಿಲ್ಲ, ಆ ಆತ್ಮಕ್ಕೆ ಬೇರೆಯೇ ಆದ ಜನ್ಮವಿಲ್ಲ ಎಂಬುದನ್ನು ನಾವು ತಿಳಿಯಬೇಕು. ಎಲ್ಲ ಜೀವಿಗಳ ಜೀವನವೂ ಅಷ್ಟು ಅನ್ಯೋನ್ಯ ಬೆರೆತದ್ದು. ಎಲ್ಲ ಕಾಲದ ಬದುಗಳೂ, ಅಷ್ಟು ಅನ್ಯೋನ್ಯವಾದ, ಅವಿರತವಾದ ಒಂದು ಪ್ರವಾಹ, ಹರಿಯುವ ನದಿಯೊಂದರಲ್ಲಿ ಬಿಂದಿಗೆಯೊಂದನ್ನು ಮುಳುಗಿಸಿ, ಆ ಪಾತ್ರೆಯೊಳಗಿನ ನೀರು 'ಬೇರೆಯೇ' ಎಂದು ಭ್ರಮಿಸುವಷ್ಟು ಸಾಮ್ಯವಿದೆ. ಆದರೆ ಆ ಪಾತ್ರೆಯನ್ನು ಒಮ್ಮೆ ಹೊರಕ್ಕೆ ತೆಗೆದು, ತಿರುಗಿ ಅದೇ ತಾವಿನಲ್ಲಿ ಸುರಿದರೆ ಹಿಂದಿನ ಮತ್ತು ಈಗಿನ ನೀರುಗಳೆರಡೂ ಒಂದೇಯೇನು? ಮೊದಲಿನ ಪಾತ್ರೆಯೊಳಗಣ ನೀರು, ಪಾತ್ರೆಯನ್ನು ಹೊರತೆಗೆದ ಕ್ಷಣಕ್ಕೆ ಪ್ರವಾಹದ ಪಾಲಾಗಿ, ಅದು ನೂರಾರು ಜಲಕಣಗಳ ಅಂಶವಾಗಿ ಸೇರಿ ಹೋಯಿತು. ಇನ್ನೊಮ್ಮೆ ನಾವು ಪಾತ್ರೆ ಮುಳುಗಿಸಿದಾಗ ಬರುವ ನೀರಿನ ಕಣಗಳೇ ಬೇರೆ.

**ಇಂದಿನ ವ್ಯಕ್ತಿ**

ವ್ಯಕ್ತಿಗೆ ಇಂದು ದೊರೆಯುವ ಬದುಕು ಹಿಂದೆಯೂ ದೊರಕಿಲ್ಲ. ನಾಳೆಯೂ ದೊರಕುವುದಿಲ್ಲ. ಈ ವ್ಯಕ್ತಿ ಇಂದಿಗೆ ಮಾತ್ರ ಉಳಿಯುವವ, ಈ ವ್ಯಕ್ತಿತ್ವವೂ ಇಂದಿನದು, ಅದು ವ್ಯಕ್ತವಾಗುವ ಮನಸ್ಸು ಶರೀರಗಳೂ ಇಂದಿನವು. ಆದುದರಿಂದ ಇಂದು ಸಾಧಿಸುವ, ಪಡೆಯುವ ಜೀವನ ನಮ್ಮ ಇಂದಿನ ಬದುಕಿನಲ್ಲೇ ನಾವು ಸಾಧಿಸಿಕೊಂಡು, ಜೀವನ ಪ್ರವಾಹಕ್ಕೆ ನೆರವಾಗಬೇಕು. ಜೀವಿಗೆ ಬದುಕು ಮುಖ್ಯ. ಅದೇ ಸರ್ವಸ್ವ. ನಾಳೆ ಈ ಜೀವಿಯೂ ಇಲ್ಲ. ಈ ಬದುಕೂ ಇಲ್ಲ. ಆದುದರಿಂದ ವ್ಯಕ್ತಿಗೆ ಜೀವನ

ಮಾಯೆಯೂ ಅಲ್ಲ; ವ್ಯರ್ಥವೂ ಅಲ್ಲ, ಯಾವೆಲ್ಲ ಶಾರೀರಿಕ, ಮಾನಸಿಕ ಚೇತನಗಳೊಡನೆ ವ್ಯಕ್ತಿ ಹುಟ್ಟಿದನೋ, ಅವೆಲ್ಲ ಆ ವ್ಯಕ್ತಿಯ ಬೆಳವಣಿಗೆಗಾಗಿಯೇ ಇವೆ. ಅವೆಲ್ಲವುಗಳ ಉಪಯೋಗವನ್ನೂ ಅವುಗಳು ಕೊಡುವ ಅನುಭವದ ಸೊಗಸನ್ನೂ, ತನಗೂ, ತಾನು ಅಂಗವಾಗಿರುವ ಒಟ್ಟು ಜೀವನಕ್ಕೂ ಉಳಿಸಿಕೊಂಡು, ವಿಶಾಲಗೊಳ್ಳುವುದೇ ಜೀವನದ ಕೆಲಸ. ತನ್ನ ಶಕ್ತಿಗಳನ್ನು ಜಡಗೊಳಿಸಿ, ಜಗತ್ತನ್ನು ನಿರಾಕರಿಸಿ ಜೀವನ ದೊಡ್ಡದಾಗಲಾರದು. ಜೀವಿಯೂ, ದೊಡ್ಡವನಾಗಲಾರನು. ಇಲ್ಲಿ ಬದುಕಲಾರದವರು, ಬದುಕನ್ನು ಒಲ್ಲೆ ಎನ್ನುವವರು, ಒಡೆದು ಬೆಳೆಯಲಾರದೆ ಸಾಯುವ ಬೆಕ್ಟೀರಿಯದಂತೆ, ಜೀವನ ಪ್ರವಾಹಕ್ಕೆ ವ್ಯರ್ಥರಾಗುತ್ತಾರೆ.

### ವ್ಯಕ್ತಿ ಬೆಳೆಯಬೇಕು

ವ್ಯಕ್ತಿ ಬೆಳೆಯ ಬೇಕು, ಜೀವನದ ಸೊಗಸುಗಳನ್ನು ಅನುಭವಿಸ ಬೇಕು. ಅದರಿಂದ ಕಲಿಯುವ ಪಾಠಗಳನ್ನು ಕಲಿತುಕೊಳ್ಳಬೇಕು – ಎಂದೊಡನೆ, 'ಸಾಲ ಮಾಡಿಯಾದರೂ ತುಪ್ಪವನ್ನು ತಿನ್ನು' ಎನ್ನುವ ಚಾರ್ವಾಕ ಮತ ಸ್ಥಾಪನೆಯಾಗುವುದಿಲ್ಲ. ಸಾಲ ಪಡೆಯುವ ಚಾರ್ವಾಕನಿಗೆ ಸಾಲ ಕೊಟ್ಟ ಸಾಲಿಗನ ಸುಖ ದುಃಖಗಳಿಲ್ಲ. ಆತನೂ ಬದುಕಬೇಕೆಂಬ ಸಿದ್ಧಾಂತವಿಲ್ಲ. ಆದರೆ ಯಾವಾತ ಒಟ್ಟು ಜೀವನದ ಅಂಶವಾಗಿಯೇ ತಾನಿದ್ದೇನೆ. ತನ್ನ ಯಾವತ್ತು ಸುಖ ಯಾವತ್ತು ದುಃಖಗಳು ಒಟ್ಟು, ಬದುಕಿನಿಂದ ಬಂದವು, ಒಟ್ಟು ಬದುಕಿನಲ್ಲಿ ಸೇರಿಹೋಗುವವು ಎಂದು ತಿಳಿಯುವಷ್ಟು ಕಾಲ, ಆ ತೆರನ ವರ್ತನೆಗೆ ಅವಕಾಶವಿಲ್ಲ.

### ಹಿಂದಿಗಿಂತ ಮುಂದು ಹಿರಿದು

ವ್ಯಕ್ತಿ ತಾನೇ ತೀರ ಮುಖ್ಯ ಎಂದು ತಿಳಿಯುವ ಕಾರಣವೂ ಇಲ್ಲ. ಪ್ರಪಂಚವೇ ಮರುಳು–ಎಂದು ತಿಳಿಯಬೇಕಾಗಿಯೂ ಇಲ್ಲ. ಒಬ್ಬ ಬುದ್ಧನೋ; ಯೇಸುವೋ, ಎಡಿಸನನೋ–ಇವರೆಲ್ಲರೂ ಬದುಕಿಗೆ ಕಳೆಯನ್ನು ಕೊಟ್ಟವರೇ. ಆದರೆ ತಮ್ಮಿಂದಲೇ ಈ ವಿಶ್ವ ಬೆಳೆದಿದೆ ಎಂದು ಹೇಳುವ ಹೆಮ್ಮೆಯ ಹಕ್ಕು ಯಾರಿಗೂ ಇಲ್ಲ. ಜೀವನ ಪ್ರವಾಹದಲ್ಲಿ ಆವಶ್ಯಕವೂ, ಅನುಕೂಲವೂ ಆದ ಪರಿಸ್ಥಿತಿಗಳ ಫಲವೇ ಇಂಥ ವ್ಯಕ್ತಿಗಳು. ಸ್ವತಂತ್ರವಾಗಿ ಅವರೇ ಅವರ ಸರ್ವಸ್ವದ ನಿರ್ಮಾಣ ಕರ್ತರಲ್ಲ. ಜೀವನದ ಶಕ್ತಿ ಅಷ್ಟು ಅಪಾರವಾಗಿದೆ. ಅದು ಅನಂತ ಹಾನಿಗಳನ್ನು ತಡೆದುಕೊಂಡು ಇಲ್ಲಿಯತನಕ ಹರಿದು ಬಂದಿದೆ. "ಪ್ಲೀಯೊಸೀನ್" ಮೊದಲಾದ ಯುಗಗಳಲ್ಲಿ "ಡಿನೋಸರಸ್" "ಬ್ರೋಂಟೋ ಸರಸ್" ಮೊದಲಾದ ಹೆಜ್ಜೀವಗಳು ಹುಟ್ಟಿ, ""ನಮ್ಮಂಥ ದೊಡ್ಡ ಜೀವಿಗಳು ಇನ್ಯಾರು?" ಎಂದು ಕೇಳಬಹುದಾದ ಒಂದು ಯುಗವಿತ್ತು. ಇಂದಿನ ಯುಗದ ಆನೆಗಳು ಈ ಜೀವಿಗಳ ಮೊಣಗಂಟಿನಷ್ಟೂ ಎತ್ತರವಾಗಿರಲಿಲ್ಲ. ಇವತ್ತಿನ

ಆನೆಯಲ್ಲಿ ವಿಕಸಿತವಾದ ಬುದ್ಧಿಶಕ್ತಿ ಅದರದೇ ಹಿರಿಯನಾದ ಹೆಗ್ಗೌಳಿಗೂ ಇದ್ದಿರಲಿಲ್ಲ. ಹರಿಯುತ್ತಿರುವ ನದಿಯ ಮುಂದು, ಹಿಂದಿಗಿಂತಲೂ ದೊಡ್ಡದು. ಜೀವನ ಪ್ರವಾಹವೂ ಹಾಗೇನೆ, ಅಲ್ಲಿ ನಾಳಿನ ಬದುಕು ನಿನ್ನೆಗಿಂತ ದೊಡ್ಡದೆಂಬುದೇ ಸತ್ಯ. ನಾಡಿದ್ದಿನ ಪಾಲಿಗೆ ನಾಳೆಯೂ ಸಣ್ಣದಾಗಬಹುದು. ಹೀಗಿರುವಲ್ಲಿ, ವ್ಯಕ್ತಿ ತಾನು ಬಲು ದೊಡ್ಡವನೆಂದು ತಿಳಿಯಬೇಕಿಲ್ಲ.

ಒಟ್ಟು ಜೀವನ ವಿಸ್ತರಿಸುತ್ತಿರುವುದರ ಫಲವಾಗಿಯೇ ಅನೇಕ ದೊಡ್ಡ ವ್ಯಕ್ತಿಗಳು ಹುಟ್ಟುತ್ತಾರೆ. ಜೀವ ಸಮುದಾಯದಲ್ಲಿ ಎಷ್ಟೋ ಜೀವಿಗಳು ಹೆಚ್ಚಿನ ಉಪಯೋಗಕ್ಕೆ ಬಾರದೆ ಸಾಯುತ್ತವೆ. ಇನ್ನೆಷ್ಟೋ ಜೀವಿಗಳು ಹೊರೆ ಹೊರುವ ಆಳಿನಂತೆ, ಬರಿ ಜೀವನ ಶಕ್ತಿಯನ್ನಿಷ್ಟೆ ಉಳಿಸಿಕೊಂಡು ಸಾಯುತ್ತವೆ. ಆದರೂ ಆಗಾಗ ಕೆಲವೊಂದು ಅಪೂರ್ವ ವ್ಯಕ್ತಿಗಳು ಹುಟ್ಟಿ, ತಮ್ಮ ಚೈತನ್ಯದಿಂದ ನೆರೆಕರೆಯ ಜೀವಕ್ಕೆ ಹುಮ್ಮಸ ಕೊಡುತ್ತಾರೆ. ಹೆರವರ ಬದುಕು ವಿಕಸಿಸುವುದಕ್ಕೆ ಕಾರಣರಾಗುತ್ತಾರೆ. ಅವರ ವಿಚಾರ ಸರಣಿಯ ಪರಿಣಾಮ ಒಟ್ಟು ಬದುಕಿಗೆ ದೊರೆಯುತ್ತದೆ, ಅದರಂತೆ, ಒಟ್ಟು ಜೀವನಕ್ಕೆ ಹಾನಿಕಾರಕ ಶಕ್ತಿಗಳನ್ನು ಸಲ್ಲಿಸುವ 'ಜಂಗೀಸ್ ಖಾನರು', 'ಹಿಟ್ಲರರು' ಇದ್ದೇ ಇರುತ್ತಾರೆ. ಒಟ್ಟು ಜೀವನದ ಅನೇಕ ಬಗೆಯ ಕೊರತೆಗಳೇ ಪ್ರತಿಬಿಂಬಿಸಿ, ಇಂಥ ವ್ಯಕ್ತಿಗಳ ನಿರ್ಮಾಣವಾಗುತ್ತದೆ. ಬುದ್ಧನಂಥ ವ್ಯಕ್ತಿಗಳು ಜೀವನ ರಥದ ಗಾಲಿಯನ್ನು ನಾಲ್ಕು ಸುತ್ತು ಮುಂದೆ ಎಳೆದರೆ, ಜಂಗೀಸ್‌ಖಾನರು ಒಂದೆರಡು ಸುತ್ತುಗಳನ್ನು ಅದನ್ನು ಹಿಂದೆ ಸೆಳೆಯುತ್ತಾರೆ. ಲಕ್ಷ ವರುಷಗಳ ಹಿಂದಿನ ಗವಿ ಮನುಷ್ಯ ಇಂದಿನ ಮನುಷ್ಯನಲ್ಲಿ ಫಲಗೊಂಡುದನ್ನು ಕಾಣುವಾಗ, ಜೀವನ ಪ್ರವಾಹ ಮುಂದುವರಿದಿದೆ ಎಂದೇ ಹೇಳಬೇಕು.

**ಅನಂತ ಜೀವನದ ವರ್ತಮಾನ ದೃಶ್ಯ**

ಈ ಪ್ರವಾಹದ ಅಂಶವಾದ ವ್ಯಕ್ತಿ ಜೀವನವನ್ನು ನಾವು ಏನೆಂದು ಕರೆಯಬೇಕು? ಅದು ಬೇರೆಯೇ ಶರೀರದಲ್ಲಿ ಪ್ರಕಟವಾಗುತ್ತಿದೆಯಾದರೂ ಅದು ಸ್ವತಂತ್ರವಲ್ಲ. ಅದರಲ್ಲಿ ಸ್ವತಂತ್ರವೆನಿಸಿದ ಮನಸ್ಸು ಕಾಣಿಸಿದರೂ, ಅದು ನಿರಂಕುಶ ಮನಸ್ಸು ಅಲ್ಲ. ಆ ಶರೀರದಲ್ಲಿ ವ್ಯಕ್ತವಾಗುವ ಗುಣ, ಕ್ರಿಯೆಗಳನ್ನು ಅದೇ ಯುಗಕ್ಕೆ ಬಿಗಿಯುವ ಸ್ವಭಾವ (instinct), ವರ್ತನೆ (behaviour) ಇವು ಮಾತ್ರವೂ ಅದಲ್ಲ. ಇವುಗಳಿಂದ ವ್ಯಕ್ತಿ ಬದ್ಧನಾದರೂ ಅವುಗಳಿಂದಲೂ, ಸುತ್ತಲಿನ ಪರಿಸ್ಥಿತಿಯಿಂದಲೂ, ಸ್ವಂತ ಪ್ರೇರಣೆಯಿಂದಲೂ ಕಾಣಿಸುವ ಈ ಜೀವವನ್ನು 'ವ್ಯಕ್ತಿ' ಎನ್ನಿ, 'ಆತ್ಮ' ಎನ್ನಿ, ಇನ್ನಾವುದೇ ಹೆಸರಿನಿಂದ ಕರೆಯಿರಿ ಅದು ಅನಂತ ಜೀವನದ, ವರ್ತಮಾನ ಕಾಲದ, ಒಂದು ಚೇತನಮಯ ಘಟಕವೆನ್ನಬೇಕಷ್ಟೆ.

~ * ~ * ~ * ~

## 1.4 ಯಾತಕ್ಕೆ ಮಳೆ ಹೋದವೊ (ಒದು ಪಠ್ಯ)

**– ಜನಪದಗೀತೆ**

ಯಾತಕ್ಕೆ ಮಳೆ ಹೋದವೋ ಶಿವ ಶಿವ
ಲೋಕ ತಲ್ಲಣಿಸುತಾವೊ
ಬೇಕಿಲ್ಲದಿದ್ದರೆ ಬೆಂಕಿಯ ಮಳೆಸುರಿದು
ಉರಿಸಿ ಕೊಲ್ಲಲು ಬಾರದೆ ॥

ಹೊಟ್ಟೆಗೆ ಅನ್ನ ಇಲ್ಲದಲೆ
ನಡೆದರೆ ಜೋಲಿ ಹೊಡೆಯುತಲೆ
ಪಟ್ಟದಾನೆಯಂಥ ಸ್ತ್ರೀಯರು ಸೊರಗಿ
ಸೀರೆ ನಿಲ್ಲೋದಿಲ್ಲ ಸೊಂಟಾದಲೆ ॥ ಯಾತಕ್ಕೆ ॥

ಹಸುಗೂಸು ಹಸಿವೀಗೆ ತಾಳದಲೆ
ಅಳುತಾವೆ ರೊಟ್ಟಿ ಕೇಳುತಲೆ
ಹಡೆದ ಬಾಣಂತಿಗೆ ಅನ್ನಾವು ಇಲ್ಲದಲೆ
ಏರುತಾವೆ ಮೊಳಕೈಗೆ ಬಳೆ । ಯಾತಕ್ಕೆ ॥

ಒಕ್ಕಲು ಮಕ್ಕಳಂತೆ ಅವರಿನ್ನು
ಮಕ್ಕಳನ್ನು ಮಾರುಂಡರು
ಮಕ್ಕಳನ್ನು ಮಾರುಂಡು ದುಃಖವನ್ನು ಮಾಡುತಾರೆ
ಮುಕ್ಕಣ್ಣ ಮಳೆ ಕರುಣಿಸೋ ॥ ಯಾತಕ್ಕೆ ॥

~ * ~ * ~ * ~

## ಘಟಕ 2. ಧರ್ಮ

ಆಶಯ:

ಧರ್ಮ, ಸ್ವಧರ್ಮ, ಸಮಾಜಧರ್ಮ, ಕಾಲಧರ್ಮ, ದೇಶಧರ್ಮ, ಅಪದ್ಧರ್ಮ, ಆಧ್ಯಾತ್ಮಧರ್ಮ–ಹೀಗೆ ನಾನಾ ಕಲ್ಪನೆಗಳನ್ನೊಳಗೊಂಡಿದೆ. ಧರ್ಮ ಎಂಬ ಪದವನ್ನು ನೈತಿಕ ಮತ್ತು ವ್ಯಾವಹಾರಿಕಾರ್ಥದಲ್ಲಿ, ನೈಸರ್ಗಿಕ ಮತ್ತು ದಾರ್ಶನಿಕಾರ್ಥದಲ್ಲಿ, ಮತೀಯ ಮತ್ತು ಆಧ್ಯಾತ್ಮಿಕಾರ್ಥದಲ್ಲಿ ಅಥವಾ ಪ್ರತ್ಯೇಕವಾಗಿ ಯಾವುದಾದರೊಂದು ಅರ್ಥದಲ್ಲಿ ಬಳಸಬಹುದು. ನೈತಿಕವಾಗಿ ಸದಾಚಾರ ಅಥವಾ ಸನ್ಮಾರ್ಗ ಎಂದೂ, ವ್ಯಾವಹಾರಿಕಾರ್ಥದಲ್ಲಿ ಸಾಮಾಜಿಕ ನ್ಯಾಯವೆಂದೂ ಅರ್ಥವಾಗುತ್ತದೆ. ಭಾರತೀಯರ ಕಲ್ಪನೆಯಲ್ಲಿ ಧರ್ಮ ಎಂದರೆ ಸಾತ್ವಿಕವಾದುದು, ಋಜುವಾದುದ್ದು, ನೈತಿಕವಾದುದ್ದು ಮಾತ್ರವೇ ಅಲ್ಲ ; ನಾವು ಯಾವುದನ್ನವಲಂಬಿಸಿದ್ದೇವೆಯೋ, ಯಾವುದು ನಮ್ಮೆಲ್ಲ ಬಾಹ್ಯಾಂತರ ಕ್ರಿಯೆ ಮತ್ತು ವರ್ತನೆಗಳಿಗೆ ಆಧಾರಭೂತವಾಗಿದೆಯೋ ಅದೇ ಧರ್ಮ ಎಂದಾಗುತ್ತದೆ. ಪ್ರಾಥಮಿಕಾರ್ಥದಲ್ಲಿ ಅದು ನಮ್ಮೆಲ್ಲ ಚಟುವಟಿಕೆಗಳನ್ನು ರಹಸ್ಯವಾಗಿ ನಿಯಂತ್ರಿಸುವ ನಮ್ಮ ಸ್ವಭಾವದ ಮೂಲಭೂತ ತತ್ವವಾಗಿದೆ. ಆ ಅರ್ಥದಲ್ಲಿ ಪ್ರತಿಯೊಂದು ಜೀವಿಗೂ, ಪ್ರತಿಯೊಂದು ಜಾತಿಗೂ, ಪ್ರತಿ ವ್ಯಕ್ತಿಗೂ, ಪ್ರತಿಯೊಂದು ಸಮಾಜಕ್ಕೂ ಅವರದೇ ಆದ ಧರ್ಮವಿದೆ. ಎರಡನೆಯದಾಗಿ ದೈವೀಪ್ರಜ್ಞೆ ನಮ್ಮಲ್ಲಿ ವಿಕಾಸಹೊಂದಿ ವ್ಯಕ್ತವಾಗಬೇಕಾಗಿದೆ. ಈ ಅರ್ಥದಲ್ಲಿ ಅದು ಆಂತರಿಕ ಕ್ರಿಯಾತತ್ವವಾಗಿ, ನಮ್ಮ ವ್ಯಕ್ತಿತ್ವವನ್ನು ರೂಪಿಸುವುದಾಗಿದೆ. ಮೂರನೆಯದಾಗಿ ನಮ್ಮ ಬಾಹ್ಯಾಲೋಚನೆ ಮತ್ತು ಕ್ರಿಯೆಗಳನ್ನು ಪರಸ್ಪರ ಸಂಬಂಧಗಳನ್ನು ನಿಯೋಜಿಸುವ ನಿಯತಿಯಾಗಿದೆ. ದೇವೀಪ್ರಜ್ಞೆಯ ಕಡೆಗೆ ನಮ್ಮನ್ನೂ ಮಾನವಕೋಟಿಯನ್ನೂ ಇದು ಒಯ್ಯುವಂಥದಾಗಿದೆ. ದೈವೇಚ್ಛೆಯ ನಿಯಂತ್ರಣಕ್ಕೊಳಪಟ್ಟು ಮಾನವ ಕುಲದ ಆಧ್ಯಾತ್ಮಿಕ ವಿಕಾಸಕ್ಕೂ, ಜಗತ್ತಿನಲ್ಲಿ ಆಧ್ಯಾತ್ಮಿಕ ಪರಿಸರದ ನಿರ್ಮಾಣಕ್ಕೂ ಸಹಕಾರಿಯಾಗುವ ನಿಯತಿಯೇ ಧರ್ಮ.

– ಕುವೆಂಪು ದರ್ಶನ – ದೇಜಗೌ

## 2.1 ಬಜಾರಿನಲ್ಲಿ ಬುದ್ಧ.....

**– ಸವಿತಾ ನಾಗಭೂಷಣ**

ಬಜಾರಿನಲ್ಲಿ ಇದ್ದ ಬುದ್ಧ
ರಾಮ, ಕೃಷ್ಣ, ಶಿವ, ಗಾಂಧಿ
ಅಂಬೇಡ್ಕರ್ ಅವರ ಜೊತೆಗೆ ಕುಳಿತಿದ್ದ.

ಮೊಂಡು ಕೈ, ಹರಿದ ಅಂಗವಸ್ತ್ರ….
ಬುದ್ದ ಹೌದೋ ಅಲ್ಲವೋ ಎಂದು
ಅನುಮಾನಿಸುವಷ್ಟು ಚಿಂದಿಯಾಗಿದ್ದ.

ಆದರವೇ ಜಾಜ್ವಲ್ಯಮಾನ ಕಣ್ಣುಗಳು
ಸೆಳೆದವು, ಹೊಳೆದವು ಫಳ ಫಳ
ಪುಳಕಿತಳಾಗಿ ಮನೆಗೆ ಕರೆದೆ, ಬಂದ.

ಒಣಗಿದ ಹೂವು, ಆರಿದ ದೀಪ, ಪಿನ್ನು,
ಪುಸ್ತಕ, ಎಂಜಲು ತಟ್ಟೆ, ಒಣಗಿದ ಬಟ್ಟೆ.
ಹಣ್ಣು–ತರಕಾರಿಯ ಒತ್ತರಿಸಿ, ಅಂಗೈಯಲ್ಲಿ
ಗುಡಿಸಿ, ಸಾರಿಸಿ ಜಾಗ ಮಾಡಿಕೊಟ್ಟೆ–
ಮೇಜಿನ ಮೂಲೆಯಲ್ಲಿ ಕೂತ,

ಅವನು ಬುದ್ಧ,
ಮೈತ್ರಿ–ಕರುಣೆಯ ಸಾಕಾರ
ಅವನದೇ ಮಾತು: ಸಂಸಾರ ದುಃಖಸಾಗರ
ಆಸೆಯೇ ದುಃಖಕ್ಕೆ ಮೂಲ, ಜೀವನವು ನಶ್ವರ.

ಮಾರನಿಗೊಲಿದಿದ್ದ ನಾವು ಅವನ ಮುಂದೆಯೆ
ಶುರು ಹಚ್ಚಿಕೊಂಡೆವು ವ್ಯವಹಾರ
ಮನೆ ಮಂದಿಯ ಮೋಹ, ಮದ, ಮತ್ಸರ
ಆತಂಕ, ಆವೇಶ, ದುಃಖ, ಕೋಪ
ಎಲ್ಲವೂ ಈಗವನ ಸಮ್ಮುಖ!

ದೂಷಣೆ, ಶೋಷಣೆ, ಘೋಷಣೆ
ಯುದ್ಧ–ಕದನ ವಿರಾಮಗಳಿಗೆ
ಅವನೇ ಸಾಕ್ಷಿ, ಅವನದೇ ರಾಯಭಾರ.
ರೋಗ ರುಜಿನ, ಮರಣ ಎಲ್ಲವುಗಳಿಗೆ
ಅವನೇ ಕಾರಣ, ಅವನಿಂದಲೇ ಶಮನ!

ಅಷ್ಟಾಂಗ ಮಾರ್ಗಗಳಿಗೆ ನಮಿಸಿದೆವು ನಿಜ,
ಆಚರಿಸಿದೆವೋ ಅನುಮಾನ!
ಏರಿದ ಎತ್ತರ, ಇಳಿದ ಪ್ರಪಾತ,
ಕವಿದ ಕಾರ್ಮೋಡ, ಕರಗಿದ ಕಾವಳ
ಇಲ್ಲದೆಯೂ ಇದ್ದಂತೆ, ಜೊತೆಗಿದ್ದ...

ಇಪ್ಪತ್ತು ವರುಷವಾಯಿತು. ಬುದ್ಧ
ನಮ್ಮಲ್ಲಿಗೆ ಬಂದು
ನಮ್ಮೊಂದಿಗೇ ನಿಂದು, ನೊಂದು, ಬೆಂದು
ಈಗವನು ನಮ್ಮವನು, ನಮ್ಮಲ್ಲೇ ಒಂದು.

ಇನಿತೂ ಬದಲಾಗಿಲ್ಲ....ಅದೇ
ಗುಂಡು ಮುಖ, ತುಂಡು ಬಾಯಿ
ಮೊಂಡು ಕೈ, ಹರಿದ ಅಂಗವಸ್ತ್ರ,
ಅದೇ ಮೌನ, ಸಮಾಧಾನ

ನಾವೂ ಅಷ್ಟೆ, ಇನಿತೂ ಬದಲಾಗಿಲ್ಲ!

ಅದೇ ವೇಗ, ಅದೇ ಯೋಗ,

ಅದೇ ತನ್ಹಾ...ಅದೇ ತಲ್ಲಣ!!

~ * ~ * ~ * ~

**ಆಕರ: ದರುಶನ– ಸವಿತಾ ನಾಗಭೂಷಣ**

## 2.2 ಕಲ್ಲಂಗಡಿಯ ಇಪ್ಪತ್ತು ರೂಪಾಯಿ

**ಡಾ. ಡಿ.ಕೆ. ಚೌಟ**

**ಅನುವಾದ: ಮಹಮ್ಮದ್ ಕುಳಾಯಿ**

ಮಾಗಿ ತಿಂಗಳ ಒಂದು ಬೆಳಿಗ್ಗೆ ಗಟ್ಟದ ಮೇಲಿಂದ ಬರುತ್ತಿದ್ದೆವು. ಸುತ್ತಲೂ ಬೆಳೆದು ನಿಂತ ಹಸಿರು ಕಾಡು, ಅಲ್ಲಲ್ಲಿ ಹರಿದುಹೋಗುತ್ತಿದ್ದ ನೀರಿನ ಜುಳು ಜುಳು ಸದ್ದು. ಇನ್ನೂ ಹಸಿರಾಗಿಯೇ ಕಂಗೊಳಿಸುತ್ತಿದ್ದ ಬೈಲು ಗದ್ದೆಗಳು ಮನಸ್ಸನ್ನು ಮುದಗೊಳಿಸುತ್ತಿತ್ತು. ಕಾಫಿ ತೋಟದ ಮಧ್ಯೆ ಗಟ್ಟದ ಬದಿಯಿಂದ ಹಾಸನದವರೆಗೆ ಬರುವಾಗ ಮೈನವಿರೇಳಿಸುವಂತಹ ಪಚ್ಚೆ ಸುತ್ತಿದ ನಿಸರ್ಗ. ಅಲ್ಲಲ್ಲಿ ಅರಳಿ ನಿಂತ ಬೇಲಿಯ ಹೂ ತೋಟ, ಅರಳಿ ಸುವಾಸನೆ ಬೀರುವ ಕಾಫಿಯ ಹೂವುಗಳು. ಆ ಸುವಾಸನೆಗೆ ಬರುವ ಜೇನುನೊಣಗಳು. ಅವು ಗುಂಯ್‌ಗುಡುತ್ತಾ ಹಾರಾಡುವಾಗ ಇಡೀ ಕಾಡೇ ಭೂತಾಯಿಯ ಪಾಡ್ದನಕ್ಕೆ ಶ್ರುತಿ ಹಾಡಿದಂತೆ ಕೇಳಿಸುತ್ತಿತ್ತು. ಮಲೆನಾಡ ಸ್ವರ್ಗದಂತಿದ್ದ ಆ ತೋಟಗಳ ಸೌಂದರ್ಯವನ್ನು ನೋಡುತ್ತಾ ಅನುಭವಿಸುತ್ತಾ ಅದನ್ನು ದಾಟಿ ಬಯಲು ಸೀಮೆಗೆ ಬಂದರೆ ತಡೆಯಲಾಗದಷ್ಟು ಬಿಸಿಲು. ಬಂದು ಬಂದು ಬೆಂಗಳೂರು ರಸ್ತೆಯಲ್ಲಿ ಬರುವಾಗ ಯಶವಂತಪುರದ ರಸ್ತೆ ಬದಿಯಲ್ಲಿ ರಾಶಿ ಹಾಕಿದ್ದ ಕಲ್ಲಂಗಡಿ ನೋಡಿ ನನ್ನ ಪತ್ನಿಗೆ ಬಾಯಲ್ಲಿ ನೀರೂರಿತು. ನಮ್ಮೊಟ್ಟಿಗೆ ಬಂದಿದ್ದ ಮಾರಪ್ಪಣ್ಣನಿಗೂ ಕಲ್ಲಂಗಡಿ ರಾಶಿ ನೋಡಿ ಆಸೆಯಾಯಿತು. ಕಾರು ನಿಲ್ಲಿಸಿ ಕಲ್ಲಂಗಡಿಗೆ ಬೆಲೆ ಕೇಳಿದೆವು.

60 ದಾಟಿದ ಸಾಬ ಕಲ್ಲಂಗಡಿ ರಾಶಿಯ ಮುಂದೆ ಕುಳಿತ್ತಿದ್ದವ ಕಾರು ನಿಂತದ್ದು ನೋಡಿ ಓಡಿ ಬಂದ. ಸಾಬನ ಗಡ್ಡವೆಲ್ಲಾ ಹಣ್ಣಾಗಿತ್ತು. ಮುಖ ಒಬ್ಬ ಪಾಪದ, ವ್ಯಾಪಾರ ಮಾಡಿ ಜೀವಿಸುವ, ಧರ್ಮಾತ್ಮನ ಮುಖದಂತಿತ್ತು. ನಗುಮುಖದ ಸಾಬ ಕೇಳಿದ

"ಕ್ಯಾಸಾಬ್ ಕಿತ್‌ನಾ ದೇದು?" (ಸ್ವಾಮಿ ಎಷ್ಟು ಕೊಡಬೇಕು?)

ನನ್ನ ಪತ್ನಿ "ಬಾವು ಕ್ಯಾ ಹೈ" (ಬೆಲೆ ಎಷ್ಟು) ಕೇಳಿದಳು.

ಅವಳು ಯಾವುದೇ ವಸ್ತುವನ್ನಾಗಲೀ ಬೆಲೆ ಕೇಳದೆ ಮುಟ್ಟುವುದಿಲ್ಲ. ನನ್ನದು ಅದಕ್ಕೆ ಸರೀ ವಿರುದ್ಧ. ವಸ್ತು ಚೆನ್ನಾಗಿದ್ದರೆ, ಬೇಕೂಂತಾದರೆ ಖರೀದಿಸುವುದೇ. ಮತ್ತೆ ಬೆಲೆ ಎಷ್ಟೂಂತ ಕೇಳುವುದು ನನ್ನ ಅಭ್ಯಾಸ.

"ಕಿಲೋ ಕಾ ಛೇ ರೂಪಾಯಿ ಮಾಯಿ" (ಕಿಲೋಗೆ ಆರು ರೂಪಾಯಿ ಅಮ್ಮ) ಅಂದು, ಒಂದು ತುಂಡು ಕಲ್ಲಂಗಡಿಯನ್ನು ತುಂಡರಿಸಿ ಕೊಟ್ಟ, ಬಣ್ಣ ನೆತ್ತರಿನಂತಿತ್ತು. ಜೇನಿನಂತೆ ಸಿಹಿಯಿತ್ತು. ನನ್ನ ಪತ್ನಿ "ಚೆನ್ನಾಗಿದೇರಿ, ಎರಡು ತೆಗೆದುಕೊಳ್ಳೋಣ. ಆದರೆ ಐದು ರೂಪಾಯಿಗಿಂತ ಜಾಸ್ತಿಗೆ ಬೇಡ. ಬೆಳಿಗ್ಗೆ ರಸೆಲ್ ಮಾರ್ಕೆಟ್‌ಗೆ ಹೋದರೆ ನಾಲ್ಕು ರೂಪಾಯಿಗೆ ಸಿಗಬಹುದು" ಎಂದಳು

"ಹೌದು ಕಾಶಿಗೆ ಹೋದರೆ ಕಾಸಿಗೊಂದು ಕುದುರೆ ಸಿಗುತ್ತೆ" ಈ ಹೆಂಗಸರ ವ್ಯವಹಾರವೇ ಹೀಗೆ. ಬೆಳಿಗ್ಗೆ ಕಾರು ತಕೊಂಡು ಅದಕ್ಕೆ 50–60 ರೂಪಾಯಿ ಪೆಟ್ರೋಲ್‌ಗೇ ಖರ್ಚು ಮಾಡಿ, ಹತ್ತು ರೂಪಾಯಿ ಕಲ್ಲಂಗಡಿಯಲ್ಲಿ ಉಳಿಸುವುದು ಅವಳ ವ್ಯವಹಾರ ಸೂಕ್ಷ್ಮತೆ.

"ಕ್ಯಾ ಬಾಯಿ ಕಿತ್‌ನೇ ಮೇ ದೇಗ? ದೋ ದೇನಾ" (ಏನಣ್ಣಾ ಎಷ್ಟಕ್ಕೆ ಕೊಡ್ತಿ? ಎರಡು ಬೇಕು?) "ಸಾಡೆ ಪಾಂಚ್ಕ ಬಾವ್ ಮೇ ದೋ ದೇತಾ ಹೂಂ ಸಾಬ್, ಕ್ಯಾ ಮೇಮ್ ಸಾಬ್ ಬಡಾ ದೇವು ಚೋಟಾ ದೇವು?" (ಎರಡಾದರೆ 5.50 ಕ್ಕೆ ಕೊಡ್ತೇನೆ ಅಮ್ಮಾ. ದೊಡ್ಡದು ಕೊಡ್ಲಾ ಚಿಕ್ಕದು ಕೊಡ್ಲಾ)

"ಪಾಂಚ್ ಕಾ ಇಸಾಪ್‌ಸೇ ದೋ ದೇವೋ. ಬಡಾದೇದೊ, ನಹಿತೋ, ನಹಿ ಮಾಂಗಾತಾ ಹೈ' ( 5 ರೂಪಾಯಿಯಲ್ಲಾದರೆ ಎರಡು ದೊಡ್ಡದು ಕೊಡು. ಇಲ್ಲಾಂದ್ರೆ ಬೇಡ)

ಆತ ಎರಡು ದೊಡ್ಡ ಕಲ್ಲಂಗಡಿ ಆರಿಸಿಕೊಡುವಾಗ 'ಅಚ್ಚಾ ಹೈನಾ?" (ಚೆನ್ನಾಗಿದೆಯಲ್ಲಾ ನನ್ನ ಪತ್ನಿ ಕೇಳಿದಳು. 'ಖುದಾ ಮಾಫ್ ನಹೀ ಕರೇಗಾ ಆಪ್ಕೋ ಕರಾಬ್ ಮಾಲ್ ದಿಯಾತೋ, ಬಾರಾ ಕಿಲೋ ಹೋಗಯ ಮೇಮ್ ಸಾಬ್" (ಚೆನ್ನಾಗಿಲ್ಲದ್ದು ಕೊಟ್ಟರೆ ದೇವರು ಕ್ಷಮಿಸಲಿಕ್ಕಿಲ್ಲ, 12 ಕಿಲೋ ಆಯಿತು ಆಮ್ಮಾ)

"ಈ ಕಲ್ಲಂಗಡಿಗೂ ಆ ದೇವರು ಬಂದ. ಅವನಿಗೆ ಬೇರೇನು ಕೆಲಸ ಇಲ್ಲವಲ್ಲ. ಅದಕ್ಕೆ ನಾನು ಹೇಳಿದಾಗ ಮಾರಪ್ಪಣ್ಣ ನಕ್ಕರು. ಸಾಬನೂ ನಕ್ಕ, ಏನರ್ಥವಾಯಿತೋ ಅವನಿಗೆ. ಕಿಸೆಯಿಂದ ನೋಟಿನ ಕಟ್ ತೆಗೆದು 50 ರ ನೋಟು ಕೊಟ್ಟೆ ಸಾಬನಿಗೆ. ಸಾಬ ಕೈಯಲ್ಲಿದ್ದ ಹತ್ತು ರೂಪಾಯಿ ಹಿಂದೆ ಕೊಟ್ಟ, ತಕೊಂಡು ಹಿಂದೆ ನೋಡಿದೆ.

"ಎಷ್ಟಾಯಿತು ರೀ" ನನ್ನ ಪತ್ನಿ ಕೇಳಿದಳು.

50 ಕೊಟ್ಟಿದ್ದರಲ್ಲಿ ಹತ್ತು ಹಿಂದೆ ಕೊಟ್ಟ ಎಂದೆ.

"ಹೋಗುವ ಹಾಗಾದರೆ" ಹೇಳಿದರು ಮಾರಪ್ಪಣ್ಣನೂ ನನ್ನ ಪತ್ನಿಯೂ. ಡ್ರೈವರ್ ಕಾರು ಸ್ಟಾರ್ಟ್ ಮಾಡಿ ಮುಂದೆ ಹೋಗುವಾಗ ನಾನು ಕನ್ನಡಿಯಲ್ಲಿ ನೋಡಿದೆ. ಸಾಬ ಕಾರಿನ ಬೆನ್ನಲ್ಲೇ ಓಡಿ ಬರುತ್ತಿರುವುದು ಕಾಣಿಸಿತು.

"ಹೇ... ಹೇ... ಕಾರು ನಿಲ್ಲಿಸು ಮರಾಯಾ, ಸಾಬನಿಗೆ ನಾವೇ ಹತ್ತು ರೂಪಾಯಿ ಕೊಡಬೇಕು. ಅದರ ಬದಲು ಅವನೇ ನಮಗೆ ಹತ್ತು ರೂಪಾಯಿ ಕೊಟ್ಟಿದ್ದಾನೆ ನಾನು ಡ್ರೈವರ್‌ಗೆ ಹೇಳಿದಾಗ, ಮಾರಪ್ಪಣ್ಣನೂ ನನ್ನ ಪತ್ನಿಯೂ ನಗುತ್ತಿದ್ದರು.

"ಹೋಗುವಾ... ಹೋಗುವಾ... ಸಾಕು ಅವನಿಗೆ, ಕಲ್ಲಂಗಡಿಗೆ ಅದೇ ಜಾಸ್ತಿಯಾಯಿತು." ನನ್ನ ಪತ್ನಿ ಹೇಳಿದಳು. ನಾನೂ ಮತ್ತೆ ಮಾತನಾಡಲಿಲ್ಲ. ನನಗೂ 20 ರೂಪಾಯಿ ಲಾಭ ಆಗಿದ್ದು ಖುಷಿಯಾಯಿತು. ಮನೆ ತಲುಪುವವರೆಗೂ ಅವರಿಬ್ಬರು ಅದೇ ವಿಷಯ ಮಾತನಾಡಿ ನಗುತ್ತಿದ್ದರು.

ಮನೆಗೆ ಬಂದು ಕಲ್ಲಂಗಡಿ ತುಂಡು ಮಾಡಿ ನನಗೂ ಮಾರಪ್ಪಣ್ಣನಿಗೂ ಕೊಟ್ಟಳು. ಕಡು ಕೆಂಪು ಕಲ್ಲಂಗಡಿ ಸಿಹಿಯಾಗಿತ್ತು.

"ಬಹಳ ಸಿಹಿಯಾಗಿದೆ" ಎಂದರು ಮಾರಪ್ಪಣ್ಣ.

"ಮೋಸದಲ್ಲಿ ಗಳಿಸಿದ್ದಕ್ಕೆ ಯಾವತ್ತೂ ಸಿಹಿ ಜಾಸ್ತಿ'' ಹೇಳಿದೆ ನಾನು. ಮಾರಪ್ಪಣ್ಣ ಬಿದ್ದು ಬಿದ್ದು ನಕ್ಕರು. "ಯಾಕೆ ಹಾಗೆ ನಗ್ತಿರಾ?" ಕೇಳಿದೆ.

"ಅಲ್ಲ, ಅವ ಹತ್ತು ರೂಪಾಯಿ ಹಿಂದೆ ಕೊಟ್ಟದ್ದು ನೆನೆದು ನಗು ಬಂತು"

"ಪಾಪ ಸಾಬ"

ನನ್ನ ಮನಸ್ಸಿನಲ್ಲಿ ಅವನ 20 ರೂಪಾಯಿ ಚುಚ್ಚಲು ಶುರುವಾಯಿತು. ನಮಗೆ 10–20 ರೂಪಾಯಿ ದೊಡ್ಡ ವಿಷಯವಲ್ಲ. ಆದರೆ ಆ ಬಡಪಾಯಿಗೆ 20 ರೂಪಾಯಿಯೆಂದರೆ ಎಷ್ಟು ದೊಡ್ಡ ಮೊತ್ತವಾಗಿರಬಹುದು.

ರಾತ್ರಿ ಊಟ ಮಾಡಿ ಮಲಗುವಾಗ ಅದನ್ನೇ ನೆನೆದು ಮಲಗಿದುದರಿಂದ ಇರಬೇಕು, ನಿದ್ದೆಯಲ್ಲೂ ಸಾಬ ಕಾರಿನ ಹಿಂದಿನಿಂದ ಓಡಿ ಬರುತ್ತಿರುವ ಕನಸು ಕಂಡಿತು.

ಬೆಳಿಗ್ಗೆ ಎದ್ದು ತಿಂಡಿ ತಿನ್ನುವಾಗಲೂ ಕಲ್ಲಂಗಡಿ ತುಂಡರಿಸಿ ಇಟ್ಟಿದ್ದರು. ಅದನ್ನು ನೋಡುವಾಗಲೂ ಸಾಬನ ಮುಖ ಎದುರು ಬಂದು ನನಗೆ ಕಲ್ಲಂಗಡಿ ತಿನ್ನಲು ಮನಸ್ಸಾಗಲಿಲ್ಲ.

ಮರುದಿನ ಬೆಳಿಗ್ಗೆ ಪೀಣ್ಯದ ಕಾರ್ಖಾನೆಯತ್ತ ಹೋಗುವಾಗ ದೂರದಲ್ಲಿ ಕಲ್ಲಂಗಡಿ ರಾಶಿ ಕಂಡಿತು. ಮನಸ್ಸಲ್ಲಿ ಮತ್ತೆ ಸಾಬ ಎದ್ದು ನಿಂತ. ಸಂಜೆ ತನಕ ಕೆಲಸದಲ್ಲಿದ್ದು ಹಿಂದಿರುಗುವಾಗ ಕಲ್ಲಂಗಡಿಯ ರಾಶಿಯನ್ನೇ ನೋಡುತ್ತಾ ಬಂದೆ. ಸಾಬ ಎಲ್ಲೂ ಕಾಣಲಿಲ್ಲ. ಅಂದು ರಾತ್ರಿ, ಮರುದಿನ ಕಲ್ಲಂಗಡಿ, ಕಲ್ಲಂಗಡಿ ಮಾರುವ ಸಾಬನ 20 ರೂಪಾಯಿ ನನ್ನ ತಲೆಯೊಳಗೆ ತೆಪ್ಪಂಗಾಯಿ ಆಡುತ್ತಿತ್ತು.

ಆನಂತರದ 2–3 ದಿನವೂ ಫ್ಯಾಕ್ಟರಿಯಿಂದ ಬರುವ ದಾರಿಯಲ್ಲಿ ಸಾಬನ ಕಲ್ಲಂಗಡಿ ರಾಶಿ ಕಾಣುತ್ತಾ ಎಂದು ನೋಡುತ್ತಲೇ ಇದ್ದೆ. ಒಂದು ದಿನ ಕಾರು ನಿಲ್ಲಿಸಿ ಕಲ್ಲಂಗಡಿ ಮಾರುವ ಇತರರಲ್ಲಿ ಸಾಬನನ್ನು ಕೇಳಿದಾಗ, ಅವನಿಗೆ ಜ್ವರ ಬರುತ್ತಿರುವುದರಿಂದ ಮನೆಯಲ್ಲೇ ಇದ್ದಾನೆ ಎಂದು ತಿಳಿಸಿದರು.

ನನ್ನ ಮನಸ್ಸಿನೊಳಗೆ ಕಲ್ಲಂಗಡಿ ಮತ್ತೆ ಕೊರೆಯಲು ಶುರುವಾಯಿತು. ಎಲ್ಲಿಯಾದರೂ ಆ ಮುದುಕ ಸತ್ತು ಹೋದರೆ ನಾನು ಅವನ 20 ರೂಪಾಯಿಯ ಋಣಗಾರ ಆಗುತ್ತೇನಲ್ಲಾ? ಆ ಮೋಸದ 20 ರೂಪಾಯಿಯನ್ನು ಏನು ಮಾಡುವುದು? ಎಲ್ಲಿಯಾದರೂ ಮಸೀದಿಗೋ, ದರ್ಗಾಕ್ಕೋ ಹೋಗಿ ಕಾಣಿಕೆ ಡಬ್ಬಕ್ಕೆ ಹಾಕಿದರೆ ಹೇಗೆ... ಹೀಗೆ ನಾನಾ ಯೋಚನೆಗಳು ನನ್ನ ತಲೆಯೊಳಗೆ ತಿರುಗತೊಡಗಿತು. ಒಟ್ಟಾರೆ ಈ ಕಲ್ಲಂಗಡಿಯ 20 ರೂಪಾಯಿ ಒಳಗಿಂದೊಳಗೆ ಕೀಟದಂತೆ ನನ್ನನ್ನು ಕೊರೆಯತೊಡಗಿತ್ತು. ಆ 20 ರೂಪಾಯಿ ನನ್ನ ಮನಸ್ಸಿನ ನೆಮ್ಮದಿಯನ್ನು ಹಾಳು ಮಾಡಿತ್ತು.

ಹೀಗೆ 7–8 ದಿನಗಳು ಕಳೆದಿರಬಹುದು. ಒಂದು ದಿನ ಅದೇ ದಾರಿಯಲ್ಲಿ ಬಂದಾಗ ಕಲ್ಲಂಗಡಿ ರಾಶಿಯ ಮಧ್ಯೆ ಸಾಬನ ಮುಖ ಕಂಡಿತು. ಮುಂದಕ್ಕೆ ಹೋದ ಕಾರನ್ನು ಹಿಂದಕ್ಕೆ ತೆಗೆದು ಸೀದಾ ಕಲ್ಲಂಗಡಿಯ ರಾಶಿಯಲ್ಲಿಗೆ ಬಂದೆ. ಕಿಸೆಗೆ ಕೈ ಹಾಕಿ 20 ರೂಪಾಯಿ ತೆಗೆದೆ.

ಸಾಬನನ್ನು ನೋಡಿದ್ದೇ ಏಳು ದಿನ ಊಟ ಮಾಡದವನಿಗೆ ಪರಮಾನ್ನ ಕಂಡರೆ ಹೇಗಾಗಬಹುದು ಹಾಗೆ ಆಗಿತ್ತು ನನಗೆ. 'ಏ ಭಾಯ್' ಎಂದು ಮುದುಕನನ್ನು ಕರೆದೆ ನಾನು.

ಮುದುಕ ತಿರುಗಿ ನೋಡಿ "ಸಾಬ್' ಎಂದು, ಅಲ್ಲಿದ್ದ ಗಿರಾಕಿಗಳನ್ನೆಲ್ಲಾ ಅಲ್ಲೇ ಬಿಟ್ಟು ಓಡಿ ಬಂದ.

"ಸಾಬ್ ಮಾಪ್ ಕರೋ ಸಾಬ್, ನೀವು ನನಗೆ ಅವತ್ತು ಕೊಟ್ಟ ದುಡ್ಡಲ್ಲಿ ಉಳಿದ ಬಾಕಿ ಹಣವನ್ನು ಹಿಂದೆ ಕೊಡಲು ನಾನು ಬರುವಾಗ ಕಾರು ರುಂಯ್ಯಂತ ಹೋಗಿ ಬಿಡ್ತು ಸಾಬ್. ಅನಂತರ ಎಷ್ಟೋ ಸಲ ನಿಮ್ಮ ಕಾರಿನ ದಾರಿ ನೋಡುತ್ತಿದ್ದೆ. ಎರಡು ದಿನ ಅನಾರೋಗ್ಯದಿಂದ ಮಲಗಿದ್ದೆ. ಹಾಗಾಗಿ ಬಂದಿರಲಿಲ್ಲ ಸಾಬ್ ನಾನು. ಆಗಲೂ ನನಗೆ ನಿಮ್ಮ 30 ರೂಪಾಯಿದ್ದೆ ಚಿಂತೆಯಾಗಿತ್ತು. ತಗೊಳ್ಳಿ ಸಾಬ್ ನಿಮ್ಮ ಬಾಕಿ 30 ರೂಪಾಯಿ".

ಬಡ ಬಡಾಂತ ಮಾತನಾಡಿದ ಸಾಬ ಸೊಂಟದಿಂದ 30 ರೂಪಾಯಿ ತೆಗೆದು ನನ್ನ ಕೈಯಲ್ಲಿಟ್ಟ, ನನಗೆ ಅರ್ಥವೇ ಆಗಲಿಲ್ಲ.

"ಅದು ಹೇಗೆ ನೀನು ನನಗೆ 30 ರೂಪಾಯಿ ಕೊಡುವುದು? ನಾನೇ ನಿನಗೆ ಕೊಡಬೇಕಲ್ಲಾ?" ನಾನು ಕೇಳಿದೆ.

"ಅಲ್ಲ ಸಾಬ್, ನೀವು ನನಗೆ 50 ರೂಪಾಯಿಯ ಎರಡು ನೋಟು ಕೊಟ್ಟಿರಲ್ಲ. ಅದರಲ್ಲಿ 60 ರೂಪಾಯಿ ಕಳೆದು 40 ರೂಪಾಯಿ ನಾನು ನಿಮಗೆ ಕೊಡಬೇಕಾಗಿತ್ತಲ್ಲ. ಕೈಯಲ್ಲಿದ್ದ ಹತ್ತು ರೂಪಾಯಿಯನ್ನು ಕೊಟ್ಟು, ಅಲ್ಲಿ ಗೋಣಿಯಡಿಯಲ್ಲಿದ್ದ 30 ರೂಪಾಯಿಯನ್ನು ತಕೊಂಡು ನಿಮಗೆ ಕೊಡುವಾಂತ ಓಡಿ ಬರುವಾಗ ನಿಮ್ಮ ಕಾರು ಬುರಂತ ಹಾರಿಹೋಯಿತು."

"ಓ– ದೇವರೇ, ಹಾಗೆಯಾ?" ಹೊರೆ ಇಳಿಸಿದಂತೆ ಉಸಿರುಬಿಟ್ಟು ನಾನು ಕೇಳಿದೆ.

"ಹಾಂ ಸಾಬ್, ನಾಲ್ಕು ದಿನ ನನಗೆ ನಿದ್ದೆನೇ ಬರಲಿಲ್ಲ. ಈ ಹರಾಮಿನ ಹಣವನ್ನು ಹಿಡಿದುಕೊಂಡು ನಿಮ್ಮನ್ನೇ ನೆನೆಯುತ್ತಿದ್ದೆ. ನೀವು ಆವತ್ತು ಕೊಂಡು ಹೋಗಿದ್ದ ಕಲ್ಲಂಗಡಿ ಸಿಹಿ ಇತ್ತಾ ಸಾಬ್ ಅಮ್ಮನಿಗೆ ಖುಷಿ ಆಯಿತಾ ಸಾಬ್?" ಸಾಬ ಕೇಳಿದಾಗ ನನಗೆ ನಗು ಉಕ್ಕಿ ಬಂತು.

"ಸಾಬಾ, ಮೊನ್ನೆಯ ಕಲ್ಲಂಗಡಿ ಸಿಹಿ ಇತ್ತಾ ಚಪ್ಪೆ ಇತ್ತಾಂತ ನನಗೆ ಗೊತ್ತಿಲ್ಲ. ಆದರೆ ಈಗ ಎರಡು ಕಲ್ಲಂಗಡಿ ಕೊಡು. ಒಳ್ಳೆ ಸಿಹಿದ್ದು ಕೊಡು, ಹತ್ತು ಕಿಲೋ ಸಾಕು. ನನ್ನದೂ ನಿನ್ನದೂ ಸೇರಿ ಈ 50 ರೂಪಾಯಿ ಇದೆ ತಗೋ." ದುಡ್ಡು ಸಾಬನ ಕೈಯಲ್ಲಿಟ್ಟು ಜೋರಾಗಿ ನಕ್ಕೆ. ಸುತ್ತಮುತ್ತ ಕಲ್ಲಂಗಡಿ

ಖರೀದಿಸುತ್ತಿದ್ದವರು ನನ್ನನ್ನೇ ನೋಡಿದರು. ನಾನು ಕಲ್ಲಂಗಡಿಯನ್ನು ಕಾರಿನೊಳಗೆ ಹಾಕುವಾಗ ಸಾಬ "ಈಸಲ ಕಲ್ಲಂಗಡಿ ತಿನ್ನದೇ ಇರಬೇಡಿ ಸಾಬ್" ಎಂದ.

"ಇಲ್ಲ, ಖಂಡಿತ ತಿನ್ನುತ್ತೇನೆ."

ಅಚ್ಛಾ ಸಾಬ್, ಖುದಾ ಹಾಪಿರ್ಝ್' ಸಾಬ ಕಾರಿನ ಬಾಗಿಲು ಹಾಕಿದ.

'ಖುದಾ ಹಾಫಿರ್ಝ್' ನಾನೂ ಹೇಳಿದೆ.

~ * ~ * ~ * ~

ಆಕರ: ದರ್ಬೆ – ಸಂಪಾದಕ : ನಂಜುಂಡಸ್ವಾಮಿ ತೊಟ್ಟವಾಡಿ

# 2.3 ಧರ್ಮ ಮತ್ತು ಭಕ್ತಿ

**ರಹಮತ್ ತರೀಕೆರೆ**

೧

'ಧರ್ಮ' ಎಂಬ ಪರಿಕಲ್ಪನೆಯು, ಕನ್ನಡಿಗರ ದೈನಿಕದಲ್ಲಿ ಬಹುರೂಪಿಯಾದ ಅರ್ಥಗಳಲ್ಲಿ ಬಳಕೆಯಾಗುತ್ತಿದೆ. ಧರ್ಮಕ್ಕೆ ಜಾತಿ, ಮತ, ಪಂಗಡ, ಧಾರ್ಮಿಕ ಸಮುದಾಯ, ಭಿಕ್ಷೆ ಕರುಣೆ ನ್ಯಾಯ ಮುಂತಾದ ಹಲವು ಅರ್ಥಗಳಿವೆ. ಜತೆಗೆ ಇದು ಹಲವಾರು ಪಂಗಡ ಇಲ್ಲವೆ ಮತಗಳನ್ನು ಒಳಗೊಂಡಿರುವ ಒಂದು ಸಂಯುಕ್ತ ಪರಿಕಲ್ಪನೆಯಾಗಿದೆ. ಬಹುದೇವತಾರಾಧಕ ಸಮುದಾಯಗಳ ಜಾತಿ, ಮತ ಪಂಗಡಗಳ ಸಡಿಲ ಒಕ್ಕೂಟದಂತಿರುವ 'ಹಿಂದೂಧರ್ಮ'ದ ಪರಿಕಲ್ಪನೆ ಇದಕ್ಕೆ ಒಳ್ಳೆಯ ನಿದರ್ಶನ. ಹಾಗೆಂದು ಏಕದೇವತಾರಾಧಕವಾದ, ಮಧ್ಯ ಏಶಿಯಾದಲ್ಲಿ ಹುಟ್ಟಿ ಭಾರತಕ್ಕೆ ಬಂದ ಸೆಮೆಟಿಕ್ ಧರ್ಮಗಳಾದ ಇಸ್ಲಾಂ ಮತ್ತು ಕ್ರೈಸ್ತಗಳು ಏಕರೂಪಿಯಲ್ಲ. ಅಲ್ಲಿಯೂ ಹಲವಾರು ಒಳಪಂಗಡಗಳಿವೆ. ಭಾರತದಲ್ಲಿ ಹುಟ್ಟಿದ ಏಕದೇವತಾರಾಧಕ ಸ್ಥಾಪಕ ವ್ಯಕ್ತಿಕೇಂದ್ರಿತ ಧರ್ಮಗಳಾದ ವೀರಶೈವ, ಸಿಖ್, ಬೌದ್ಧ ಮುಂತಾದವಕ್ಕೂ ಈ ಮಾತು ಅನ್ವಯವಾಗುತ್ತದೆ. ಆದ್ದರಿಂದ ಭಾರತದಲ್ಲಿ ಧರ್ಮ ಎಂಬುದನ್ನು ಏಕರೂಪಿ ಪರಿಕಲ್ಪನೆಯಾಗಿ ಬಳಸುವುದು ಸಾಮಾಜಿಕವಾಗಿ ತಾತ್ವಿಕವಾಗಿ ಅವಾಸ್ತವಿಕವಾಗಿದೆ.

ತಾವು ನಂಬಿದ ದೈವಕ್ಕೆ ಅಥವಾ ಧರ್ಮಕ್ಕೆ ಅದರ ಅನುಯಾಯಿಗಳು ತೋರುವ ಶ್ರದ್ಧೆ ಮತ್ತು ನಿಷ್ಠೆಯನ್ನು ಭಕ್ತಿ' ಎಂದು ಕರೆಯುವುದಾದರೆ, ಅದು ಕೂಡ ಭಾರತದ ಸಮಾಜದಲ್ಲಿ ಬಹುರೂಪಿಯಾಗಿದೆ ಮತ್ತು ವಿವಾದಾಸ್ಪದವಾಗಿದೆ. ಏಕರೂಪಿಯಾಗಿ ಗ್ರಹಿಸಲಾಗಿರುವ ಇಸ್ಲಾಂ ಕ್ರೈಸ್ತ ಹಿಂದೂ ಜೈನ ಬೌದ್ಧ ಧರ್ಮಗಳಲ್ಲಿರುವ, ಬೇರೆಬೇರೆ ಪಂಗಡಗಳು ಪರಸ್ಪರ ಸಮ್ಮತವಾಗದ ಭಕ್ತಿಯ ಆಚರಣೆಗಳನ್ನು ಇಟ್ಟುಕೊಂಡಿವೆ. ಒಂದು ಪಂಗಡದ ಧಾರ್ಮಿಕ ಆಚರಣೆಯು, ಮತ್ತೊಂದಕ್ಕೆ ಅದು 'ಅಧಾರ್ಮಿಕ 'ಧರ್ಮವಿರೋಧಿ' ಎನಿಸಿಕೊಳ್ಳುತ್ತದೆ. ಭಾರತದ ಬೇರೆಬೇರೆ ಧಾರ್ಮಿಕ ಪಂಗಡಗಳಲ್ಲಿ ದೇವರನ್ನು, ಗುಡಿ ಮಸೀದಿಯಂತಹ ಕಟ್ಟಡಗಳನ್ನು, ವಿಗ್ರಹಾರಾಧನೆ, ಪ್ರಾಣಿಬಲಿ, ತೀರ್ಥಯಾತ್ರೆ ಮುಂತಾದ ಆಚರಣೆಗಳನ್ನು ಕುರಿತಂತೆ ಇರುವ ಭಿನ್ನಮತಗಳನ್ನು ನೋಡಿದರೆ ಇದು ಹೊಳೆಯುತ್ತದೆ. ಶರಣರು 'ಉಳ್ಳವರು ಮಾಡುವ ಶಿವಾಲಯ ಸಂಸ್ಕೃತಿಯನ್ನು ಮಾತ್ರವಲ್ಲದೆ, ಜನಪದ ಧರ್ಮಗಳ ದೈವಗಳನ್ನು ಮತ್ತು ಅವನ್ನು ನಂಬಿದವರು ಮಾಡುವ ಆಚರಣೆಗಳನ್ನು ವಿಡಂಬಿಸಿದರು. ಉಚ್ಚವರ್ಣದ ವೈದಿಕ ಬ್ರಾಹ್ಮಣರು ಮಾಡುವ ಯಾಗ ಮತ್ತು ಪ್ರಾಣಿಬಲಿಗಳನ್ನು ಕೂಡ ಕಟುವಾಗಿ ಎಡಂಬಿಸಿದರು. ಶಿಯಾ ಮುಸ್ಲಿಮರು ಮಾಡುವ ಮೊಹರಂ ಆಚರಣೆಗಳನ್ನು ಸುನ್ನಿ ಮೂಲಭೂತವಾದಿಗಳು ವಿರೋಧಿಸುತ್ತಾರೆ ಮಾತ್ರವಲ್ಲ, ಅವರನ್ನು

ಪ್ರವಾದಿ ಮಹಮ್ಮದ್ ಅವರನ್ನು ನಂಬುವುದಿಲ್ಲ ಎಂಬ ಕಾರಣದಿಂದ, ಕೊಲೆಯನ್ನೂ ಮಾಡುವ ಮಾಡುತ್ತಿರುವ ನಿದರ್ಶನಗಳಿವೆ.

ಪ್ರಸ್ತುತ ಟಿಪ್ಪಣಿಗಳಲ್ಲಿ, ಧರ್ಮ ಮತ್ತು ಭಕ್ತಿಗಿರುವ ಈ ಬಹುರೂಪಿ ಮತ್ತು ಸಂಕೀರ್ಣವಾದ ಆಯಾಮಗಳನ್ನು ಸದ್ಯಕ್ಕೆ ಹೊರಗಿಡಲಾಗಿದೆ; 'ಧರ್ಮ' ಎನ್ನುವುದನ್ನು ಸಾಂಸ್ಥಿಕತೆ ಪಡೆದಿರುವ ಯಜಮಾನಿಕೆ ವಹಿಸಿರುವ ವಿರಾಟ್ ಸ್ವರೂಪದಲ್ಲಿರುವ ಸಂಸ್ಥೆಯೆಂದೂ, ಭಕ್ತಿಯನ್ನು ಅದಕ್ಕೆ ಪ್ರತಿರೋಧದ ಮತ್ತು ಪರ್ಯಾಯ ಹುಡುಕಾಟದ ಆಯಾಮವುಳ್ಳ ಚಲನಶೀಲ ಪ್ರತಿಕ್ರಿಯೆಯೆಂದೂ ವ್ಯಾಖ್ಯಾನಿಸಿಕೊಂಡು, ಈ ಸೀಮಿತ ಚೌಕಟ್ಟಿನಲ್ಲಿ ಕೆಲವು ಮುಖ್ಯ ಪ್ರಶ್ನೆಗಳನ್ನು ಎತ್ತಿ ಚರ್ಚೆ ಮಾಡಲು ಯತ್ನಿಸಲಾಗಿದೆ. ಈ ಟಿಪ್ಪಣಿಗಳಲ್ಲಿ ಇರಿಸಿಕೊಂಡಿರುವ ಪ್ರಮೇಯವೆಂದರೆ, ಬಹುತೇಕ ಧರ್ಮಗಳು ತಾವು ಹುಟ್ಟಿನ ಚಾರಿತ್ರಿಕ ಸನ್ನಿವೇಶಗಳಲ್ಲಿ ದಮನಿತರನ್ನು ಒಳಗೊಳ್ಳುವ ಚಳವಳಿ ರೂಪದಲ್ಲಿರುತ್ತವೆ. ಆದರೆ ಅವು ಬೆಳೆಯುತ್ತ ಹೋದಂತೆ ಸಾಂಸ್ಥಿಕವಾಗುತ್ತ ಹೋಗುತ್ತವೆ. ದಮನಿತರನ್ನು ಹೊರಗಿಡುವುದು ಹೇಗೆ ಎಂದು ಆಲೋಚಿಸತೊಡಗುತ್ತವೆ. ಕಾರಣ, ಅವನ್ನು ಸಮಾಜದ ಬಲಿಷ್ಠ ವರ್ಗಗಳು ನಿಯಂತ್ರಣ ಮಾಡಲು ಆರಂಭಿಸಿರುತ್ತವೆ. ಆಗ ಅವುಗಳ ಒಳಗಿಂದಲೇ ಜಡತೆಯನ್ನು ವಿರೋಧಿಸುವ ಮತ್ತೊಂದು ಶಾಖೆ ಆರಂಭವಾಗುತ್ತದೆ. ಭಾರತದಲ್ಲಿ ಭಕ್ತಿಪಂಥಗಳು ಸಾಮಾನ್ಯವಾಗಿ ಹೀಗೆ ಪ್ರತಿರೋಧಿ ನೆಲೆಯಲ್ಲಿ ಹುಟ್ಟಿದವು. ಆದರೆ ಧರ್ಮ ಮತ್ತು ಭಕ್ತಿಗಳ ಈ ಜಡ ಮತ್ತು ಜಂಗಮರೂಪದ ಈ ಚಹರೆ ಖಾಯಂ ಅಲ್ಲ. ಪ್ರತಿರೋಧದ ನೆಲೆಯಲ್ಲಿ ಹುಟ್ಟಿದ ಭಕ್ತಿಯ ಧಾರೆಗಳು ಕೂಡ ಯಜಮಾನ ನೆಲೆಗೆ ಚಲಿಸಿದಾಗ, ಸಾಂಸ್ಥಿಕ ಧರ್ಮದ ಜಡತೆಯನ್ನೇ ಪಡೆದು, ಅವು ಮಾಡಿದ ಹಿಂಸೆ ಕೌರ್ಯಗಳನ್ನೇ ಮುಂದುವರೆಸುತ್ತವೆ. ಅವುಗಳ ಒಳಗೆ ಮತ್ತೊಂದು ಪ್ರತಿರೋಧಿ ಧಾರೆಯು ಎದ್ದು ಅದರ ಜಡತೆಯನ್ನು ಮುಖಾಮುಖಿ ಮಾಡುತ್ತದೆ.

## ೨

ಕರ್ನಾಟಕದ ಶರಣ, ದಾಸ, ತಮಿಳುನಾಡಿನ ಶೈವ, ನಾಥ, ಶಾಕ್ತ, ಸೂಫಿ, ಕಬೀರ್, ಆಳ್ವಾರರ ಶ್ರೀವೈಷ್ಣವ, ಮಹಾರಾಷ್ಟ್ರದ ಮಹಾನುಭಾವ, ವಾರಕರಿ ಮುಂತಾದವನ್ನು ಭಕ್ತಿಪಂಥಗಳು ಎಂದು ಗುರುತಿಸುವ ವಾಡಿಕೆಯಿದೆ. ಶಿಕ್ಷಣ ವ್ಯವಸ್ಥೆಯಲ್ಲಿರುವ ಪಠ್ಯಕ್ರಮದಲ್ಲಿ ಇವನ್ನು ಬೇರೆಬೇರೆ ಪ್ರದೇಶ ಮತ್ತು ಕಾಲಘಟ್ಟಗಳಲ್ಲಿ ಕಾಣಿಸಿಕೊಂಡ ಸಮಾನ ಲಕ್ಷಣಗಳುಳ್ಳ ಪಂಥಗಳು ಎಂದು ಗುರುತಿಸಲಾಗುತ್ತದೆ. ಇದೊಂದು ಅಚಾರಿತ್ರಿಕ ಮತ್ತು ಸರಳೀಕೃತ ವ್ಯಾಖ್ಯಾನ, ಯಾಕೆಂದರೆ ಇಲ್ಲಿ ಭಕ್ತಿ (ಡೆವೋಶನ್) ಅನುಭಾವ (ಮಿಸ್ಟಿಸಿಸಂ) ಅಧ್ಯಾತ್ಮ (ಸ್ಪಿರಿಚ್ಯುಯಾಲಿಟಿ)ಗಳ ನಡುವೆ ತಾತ್ವಿಕವಾದ ವ್ಯತ್ಯಾಸವನ್ನೇ ಮಾಡಿಕೊಂಡಿರುವುದಿಲ್ಲ. ಭಕ್ತಿಪಂಥಗಳೆಂದೂ ಕರೆಯಲಾಗುವ ಈ ಪಂಥಗಳಲ್ಲಿ ಎರಡು ಮುಖ್ಯ ಧಾರೆಗಳಿವೆ. ಒಂದು ಸಾಂಸ್ಥಿಕ ಧರ್ಮಗಳ ಮೂಲಭೂತ ಚೌಕಟ್ಟನ್ನು ಹೆಚ್ಚು ಭಗ್ನಮಾಡದೆ, ಆದರೊಳಗೆ

ವ್ಯಕ್ತಿಯ ಮತ್ತು ಸಮಾಜದ ಬಿಡುಗಡೆಯ ಸಾಧ್ಯತೆಯನ್ನು ಹುಡುಕಾಡಿದ ಸೀಮಿತ ನೆಲೆಯದು, ಇದನ್ನು ವಿಗ್ರಹಾರಾಧಕ ಭಕ್ತಿಚಳುವಳಿ ಎನ್ನಬಹುದು. ಎರಡನೆಯದು ಸಾಂಸ್ಥಿಕ ಧರ್ಮಗಳ ಮೂಲಭೂತ ಚೌಕಟ್ಟನ್ನು ಮುಖಾಮುಖಿ ಮಾಡಿ, ಅದನ್ನು ಭಗ್ನಮಾಡುವ ಮೂಲಕ ಪರ್ಯಾಯವಾದ ವ್ಯಕ್ತಿ ಮತ್ತು ಸಮಾಜದ ಬಿಡುಗಡೆ ಮತ್ತು ಪರಿವರ್ತನೆಯನ್ನು ಮಾಡಲು ಯತ್ನಿಸಿದ ಭಕ್ತಿಚಳುವಳಿ. ಇದನ್ನು ಅನುಭಾವವಾದಿ ಭಕ್ತಿಚಳುವಳಿ ಎನ್ನಬಹುದು.

ವಿಗ್ರಹಾರಾಧಕ ಭಕ್ತಿ ಚಳುವಳಿಗೆ ತಮಿಳುನಾಡಿನ ನಾಯನಾರರು, ಆಳ್ವಾರರು ಹಾಗೂ ಕರ್ನಾಟಕದ ದಾಸರು ಒಳ್ಳೆಯ ನಿದರ್ಶನ. ಇವರು ಮೂಲತಃ ಗುಡಿಸಂಸ್ಕೃತಿ ಯವರು. ಗುಡಿಯನ್ನು ಒಪ್ಪಿದರೆ ಆದರೊಳಗಿರುವ ಮೂರ್ತಿಯನ್ನು ಒಪ್ಪಲೇಬೇಕು. ಆದರೆ ಇದು ಮೂರ್ತಿರೂಪದ ದೈವವನ್ನು ಉಚ್ಚವರ್ಗದ ಪುರೋಹಿತಶಾಹಿಯ ಚೌಕಟ್ಟಿನಾಚೆ ಇಡಲು ಯತ್ನಿಸಿತು. ಜನಸಾಮಾನ್ಯರ ಸರಳವಾದ ಪ್ರಾಮಾಣಿಕವಾದ ಕ್ರಿಯೆಗಳು ಕೂಡ ದೇವರಿಗೆ ಪ್ರಿಯವಾಗಬಲ್ಲವು ಎಂಬ ಉದಾರ ನೆಲೆಯಲ್ಲಿ ಕಲ್ಪಿಸಿಕೊಟ್ಟಿತು. ಎಂತಲೇ ತಮಿಳುನಾಡಿನ 'ಪೆರಿಯಪುರಾಣ'ದಲ್ಲಿ ಬರುವ ಶಿವಭಕ್ತರಲ್ಲಿ ಬಡವರೂ ದಮನಿತರೂ ದಲಿತರೂ ಸೇರಿದ್ದಾರೆ. ಅವರು ತಮ್ಮ ಭಕ್ತಿಯ ಪ್ರಾಮಾಣಿಕತೆ ಯಲ್ಲಿ ತಮಗಿಂತ ಸಿರಿವಂತರಾಗಿರುವವರ ಭಕ್ತಿಯನ್ನು ಮೀರಿಸಿ ಶಿವನಿಗೆ ಪ್ರಿಯವಾಗುತ್ತಾರೆ. ಅರಮನೆಯ ಕುದುರೆಗಳಿಗೆ ಹುಲ್ಲು ತರುವವರು, ಚಪ್ಪಲಿ ಹೊಲಿಯುವವರು, ಮಾಡುವ ಭಕ್ತಿಯು ಅವರ ದೊರೆಗಳ ಭಕ್ತಿಯನ್ನೂ ಮೀರಿಸುತ್ತದೆ. ಶಿವ ಚೋಳರಾಜನ ಅರಮನೆಯ ಭೋಜನ ತ್ಯಜಿಸಿ ಚೆನ್ನನ ಮನೆಯ ಅಂಬಲಿಯನ್ನು ಊಟಮಾಡುತ್ತಾನೆ. ಶ್ರೀವೈಷ್ಣವರ ಆಳ್ವಾರರಲ್ಲೂ ಅನೇಕ ದಲಿತರಿದ್ದಾರೆ. ಮೇಲುಕೋಟೆಯಲ್ಲಿರುವ ಚೆಲುವನಾರಾಯಣನ ಮೂರ್ತಿಯನ್ನು ಮೋಹಿಸಿ ದೆಹಲಿಯಿಂದ ಹಿಂಬಾಲಿಸಿಕೊಂಡು ಬಂದ ಮುಸ್ಲಿಂ ರಾಜಕುಮಾರಿ ಬೀಬೀ ನಾಚ್ಚಿಯಾರಳನ್ನು ಅದು ಒಳಗೊಂಡಿದೆ.

ಆದರೆ ವಿಗ್ರಹಾರಾಧಕ ಭಕ್ತಿಪಂಥಗಳ ಚರಿತ್ರೆಯನ್ನು ನೋಡಿದರೆ, ಇವು ಬಹುಬೇಗನೆ ತಮ್ಮಲ್ಲಿದ್ದ ಸೀಮಿತವಾದ 'ಕ್ರಾಂತಿಕಾರಕ ಗುಣವನ್ನೂ ಕಳೆದುಕೊಂಡು ಪುರೋಹಿತಶಾಹಿ ಆಳ್ವಿಕೆಯಿರುವ ಸ್ಥಾವರರೂಪಿ ಧರ್ಮದತ್ತ ಚಲಿಸಿಬಿಟ್ಟವು, ಯಾಕೆಂದರೆ ಇವುಗಳ ಉದಾರವಾದವು ಸಾಂಸ್ಥಿಕ ಧರ್ಮಗಳ ಚೌಕಟ್ಟಿನೊಳಗೇ ಹುಟ್ಟಿದ್ದಾಗಿದ್ದು, ಅದನ್ನು ದಾಟಿಹೋಗಲು ಅವಕ್ಕೆ ಸಾಧ್ಯವಾಗಲಿಲ್ಲ. ಆದರೆ ಈ ವಿಗ್ರಹಾರಾಧಕ ಭಕ್ತಿಪಂಥಗಳು ತಮಗಿದ್ದು ಸಾಂಸ್ಥಿಕ ಧರ್ಮಗಳ ಚೌಕಟ್ಟಿನೊಳಗೆ ಮಾಡಿದ ಸುಧಾರಣೆಗಳನ್ನು ಮರೆಯುವಂತಿಲ್ಲ. ಸಗುಣರಾಧಕ ಭಕ್ತಿ ಪಂಥಗಳು, ದೈವದ ಮತ್ತು ಭಕ್ತರ ನಡುವೆ ಬರುವ ಮರೋಹಿತಶಾಹಿಯ ಅಸ್ತಿತ್ವವನ್ನು ನಿರಾಕರಿಸಿದವು, ದೈವದ ಜತೆ ಭಕ್ತರ ನೇರಸಂಬಂಧ ಸಾಧ್ಯ ಎಂದು ಹೇಳಿದವು. ಜಾತಿಭೇದ ಮತ್ತು ಲಿಂಗಭೇದಗಳು ಭಕ್ತಿಯ ಮುಂದೆ ಅಮುಖ್ಯವೆಂದು ಹೇಳಿದವು. ಆದರೆ ಇವು ಸಾಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿದ್ದ ಲಿಂಗಭೇದ, ಜಾತಿಭೇದ ವರ್ಗಭೇದಗಳ

ಚೌಕಟ್ಟುಗಳನ್ನು ಭಗ್ನಗೊಳಿಸಲಿಲ್ಲ. ಕರ್ನಾಟಕದ ಹರಿದಾಸರ ಭಕ್ತಿಯ ನೆಲೆ ಇಂತಹುದು. ಎಂತಲೇ ಈ ಬಗೆಯ ಭಕ್ತಿಯ ಧಾರೆಯನ್ನು ಸುಧಾರಣಾವಾದಿ ಧಾರೆ ಎಂದು ಕರೆಯಬಹುದು.

**೩**

ಇದಕ್ಕೆ ಹೋಲಿಸಿದರೆ, ಅನುಭಾವ ಪಂಥಗಳು ವ್ಯಕ್ತಿಯ ಚೈತನ್ಯವನ್ನು ಬಂಧಿಸುವ ಜಾತಿ, ಮತಗಳನ್ನು ಮತೀಯ ಯಾಂತ್ರಿಕ ಆಚರಣೆಗಳನ್ನು ನಿರಾಕರಿಸಿ, ಸಾಂಸ್ಥಿಕ ಧರ್ಮದ ಎದುರಾಳಿಯಾದವು. ಅವಕ್ಕೆ ವ್ಯಕ್ತಿ ನೆಲೆಯನ್ನು ದಾಟಿದ ಸಾಮುದಾಯಿಕ ಭಾಗವಹಿಸುವಿಕೆ ಮತ್ತು ಬದಲಾವಣೆಯ ಅರ್ಥವಿರುವ ಚಳುವಳಿಯ ಮುಖ ಬಂದಿದ್ದು ಹೀಗೆ. ಇವು ಸಾಂಸ್ಥಿಕ ಧರ್ಮಗಳ ಮೂಲಭೂತ ಚೌಕಟ್ಟನ್ನು ಒಡೆದು ಪರ್ಯಾಯವನ್ನು ನಿರ್ಮಿಸಲು ಯತ್ನಿಸಿದವು. ಇವು ಗುರುವಿಗೆ ಮಹತ್ವ ಕೊಡುತ್ತವೆ. ಭಾರತಾದ್ಯಂತ ಇರುವ ಸೂಫಿಪಂಥ, ಉತ್ತರ ಭಾರತದಲ್ಲಿರುವ ಕಬೀರ್‌ಪಂಥ, ಮರಾಠಿಯ ಮಹಾನುಭಾವ, ಬಂಗಾಳದ ಚೈತನ್ಯ ಪಂಥ, ಕರ್ನಾಟಕದ ಶರಣಪಂಥ ಇವೆಲ್ಲ ಸಾಂಪ್ರದಾಯಿಕ ಭಕ್ತಿಪಂಥಗಳಲ್ಲ. ಸಾಧನೆಯ ಮೂಲಕ, ಸಾಧಕರೇ ದೈವತ್ವವನ್ನು ಪಡೆಯಬಹುದು ಎಂದು ಪ್ರತಿಪಾದಿಸುವ ಆನುಭಾವಿಕ ನೆಲೆಯ ಗುರುಪಂಥಗಳು. ಯೋಗಮಾರ್ಗಗಳು, ವ್ಯಕ್ತಿ ಬಿಡುಗಡೆಯ ಹಾದಿಗಳು. ಮರಾಠಿ ಅನುಭಾವಿಗಳಿಗೆ ಪಂಡರಾಪುರದ ವಿಠಲನ ಗುಡಿ ಮತ್ತು ಮೂರ್ತಿ ಮುಖ್ಯವಾಗಿದ್ದರೂ, ಅದನ್ನು ದಾಟಿ ಅದು ಅನುಭಾವವಾದಿ ನೆಲೆಯನ್ನು ಒಳಗೊಂಡಿದೆ. ಗುಡಿಗೆ ಹೋಗಿ ಪೂಜಿಸುವ ಯಾಂತ್ರಿಕ ಭಕ್ತಿಗಿಂತ ತನ್ನ ಬೇಸಾಯ ಕೆಲಸದಲ್ಲಿಯೇ ಅಥವಾ ಮಡಕೆ ಮಾಡುವಲ್ಲಿಯೇ ದೈವವನ್ನು ಕಾಣುವ ಭಕ್ತರು ಇಲ್ಲಿ ನಾಯಕರಾಗಿ ಬೆಳೆದ ಕಥನಗಳಿವೆ. ಇಲ್ಲಿ ವಿಗ್ರಹಾರಾಧನೆ, ವಿಗ್ರಹ ಇಡುವ ಗುಡಿ, ನಮಾಜು, ಅದನ್ನು ಮಾಡುವ ಮಸೀದಿಗಳು ಅಷ್ಟು ಮುಖ್ಯವಲ್ಲ. ಇಲ್ಲಿ ಮೂರ್ತ ಸಗುಣ ದೈವಕ್ಕೆ ವ್ಯಕ್ತಿಯು ತನ್ನನ್ನು ಸಲ್ಲಿಕೆ ಮಾಡಿಕೊಳ್ಳುವ ರೀತಿ ಇರುವುದಿಲ್ಲ. ಬದಲಿಗೆ ವ್ಯಕ್ತಿಯು ತನ್ನ ತಾನರಿಯುವ ಮೂಲಕ ತಾನೇ ಪರತತ್ವವಾಗುವ ವಿನ್ಯಾಸವಿರುತ್ತದೆ. ಈ ಪ್ರಕ್ರಿಯೆಯನ್ನು ಸೂಫಿಗಳಲ್ಲಿ ಅನಲ್ ಹಖ್ (ನಾನೇ ಪರತತ್ವ), ಉಳಿದ ಪಂಥಗಳಲ್ಲಿ ಅಹಂಬ್ರಹ್ಮಾಸ್ಮಿ, ತತ್ವಮಸಿ, ಸೋಹಂ ಎಂದೆಲ್ಲ ಕರೆಯಬಹುದು. ನಾ ದೇವನಲ್ಲದೆ ನೀ ದೇವನೆ ಎಂಬ ಅಲ್ಲಮನ ಪ್ರಶ್ನೆ ಈ ದರ್ಶನವನ್ನು ಖಚಿತವಾಗಿ ಹೇಳುತ್ತದೆ. ಕರ್ನಾಟಕದಲ್ಲಿ ಸೋಹಂವಾದಿಗಳು ಅನೇಕರು ಆಗಿಹೋದರು. ಹಲಸಂಗಿಯ ಖಾಜಾಸಾಹೇಬರು, (ಹಲಸಂಗಿ ಮಧುರಚೆನ್ನಗಿರಿಂತ ಹಿರಿಯರು) ಕಟ್ಟಿದ 'ಸೋಹಂ ಶಿವನೆ ನಿನ್ನಯ ಹೊರತು ದೇವರೇ ಇಲ್ಲ' ಎಂಬ ರಚನೆಯನ್ನು ಗಮನಿಸಬಹುದು. ಇಲ್ಲಿರುವ ಶಿವ ಪುರಾಣದಲ್ಲಿರುವ ಕೈಲಾಸವಾಸಿ ಶಿವನಲ್ಲ. ತನ್ನಾತ್ಮದೊಳಗಿರುವ ಚೈತನ್ಯಶಕ್ತಿ, ಈ ರಚನೆಯಲ್ಲಿ ಕಲ್ಲಿನಿಂದ ಮಾಡಿದ ವಿಗ್ರಹಾರಾಧನೆ ಯನ್ನು ಕಟುವಾಗಿ ವಿಡಂಬಿಸಲಾಗಿದೆ ಮತ್ತು ವ್ಯಕ್ತಿಯು ಸಾಧನೆಯ ಮೂಲಕ ತಾನೇ ದೇವರಾಗುವ ಮಹತ್ವವನ್ನು

ಹೇಳಲಾಗಿದೆ. ಭಾರತದ ಬಹುತೇಕ ಅನುಭಾವಿ ಪಂಥಗಳು ವಿಗ್ರಹಾರಾಧನೆಯ ವಿರೋಧಿಗಳು, ಅಲ್ಲಮನ ಬೆಟ್ಟಕ್ಕೆ ಹುಟ್ಟಿದ ಶಿಲೆಯು ಶಿಲ್ಪಿಯ ಮೂಲಕ ವಿಗ್ರಹವಾಗಿ ಬಂದಿದ್ದು ಅದನ್ನು ಪೂಜಿಸುವುದನ್ನು ಕಟುವಾಗಿ ವಿರೋಧಿಸುತ್ತಾನೆ.

ಆದರೆ ಈ ಅನುಭಾವಿಕ ಆಯಾಮದ ಭಕ್ತಿ ಚಳವಳಿಗಳು ಕೂಡ ಏಕರೂಪಿಯಲ್ಲ. 12ನೆಯ ಶತಮಾನದ ಶರಣರಿಗೂ ಸಮಾನವಾದ ಒಂದು ದಾರ್ಶನಿಕ ಹಿನ್ನೆಲೆಯಿದೆಯೆಂದೂ ಭಾವಿಸಲಾಗುತ್ತದೆ, ಆದರೆ ಅದು ಭಕ್ತಿಯ ಆನೇಕ ಧಾರೆಗಳ ಒಂದು ಸಂಗಮ. ಅನೇಕ ಅನುಭಾವಿಗಳ ಸಂಗಮ. ಇಷ್ಟಲಿಂಗವನ್ನು ಆರಾಧಿಸುವ ಭಕ್ತರು ಇರುವಾಗ, ಇಷ್ಟಲಿಂಗಾರಾಧನೆಯನ್ನೂ ಒಪ್ಪದ ಅನುಭಾವಿಗಳು ಅಲ್ಲಿದ್ದರು. ಇಷ್ಟಲಿಂಗವಾದಿಗಳು ವಿಭೂತಿ ಧಾರಣೆ, ಇತ್ಯಾದಿ ಆಚರಣೆಗಳಲ್ಲಿ ನಂಬಿಕೆಯುಳ್ಳವರಾದರೆ, ಅನುಭಾವಿಗಳು ಯೌಗಿಕ ಸಾಧನೆಯಲ್ಲಿ ನಂಬಿಕೆಯುಳ್ಳವರು. ಇವರಿಬ್ಬರ ನಡುವೆ ಭಿನ್ನಮತಗಳಿದ್ದವು. ಅನೇಕ ಸಲ ವಾಗ್ವಾದ ನಡೆಯುತ್ತಿದ್ದವು. ಸೂಫಿಗಳಲ್ಲಿಯೂ ಅನೇಕ ಧಾರೆಗಳಿವೆ. ಸಾಂಸ್ಥಿಕ ಇಸ್ಲಾಂ ಹೇಳುವ ನಮಾಜು, ಮಸೀದಿ, ದೈವದ ಕಲ್ಪನೆಯನ್ನು ಒಪ್ಪಿಕೊಂಡ ಸೂಫಿಗಳಿರುವಂತೆ, ಇವನ್ನು ಒಪ್ಪದ ಅನಿಹಖ್ ಸೂಫಿಗಳೂ ಇದ್ದಾರೆ. ಯಾವ ಸಂಪತ್ತನ್ನು ಸಂಗ್ರಹಿಸದ ವಿರಕ್ತರಾಗಿ ಬಾಳಿದ, ತಮ್ಮ ಜೀವನದ ಉದ್ದಕ್ಕೂ ಆಳುವ ರಾಜಕೀಯ ಪ್ರಭುತ್ವಗಳ ವಿರುದ್ಧ ಸೆಣಸಾಡಿದ, ಈ ಸೆಣಸಾಟದಲ್ಲಿ ತಮ್ಮ ತಲೆಯನ್ನು ದಂಡವಾಗಿ ಕೊಟ್ಟ ಧೀಮಂತ ಸೂಫಿಗಳಿರುವಂತೆಯೇ, ರಾಜರಿಗೆ ಗುರುಗಳಾಗಿ, ಅವರು ಕೊಟ್ಟ ಸಂಪತ್ತಿನಲ್ಲಿ ತಮ್ಮ ಮಠಗಳನ್ನು ಕಟ್ಟಿಕೊಂಡು, ಅದರ ಚೌಕಟ್ಟಿನಲ್ಲಿಯೇ ಸಾಂಸ್ಥಿಕ ಧರ್ಮಗಳ ಜತೆ ರಾಜಿಮಾಡಿಕೊಂಡು ಬದುಕಿದ ಸೂಫಿಗಳೂ ಇದ್ದಾರೆ. ಹೀಗಾಗಿ ಭಕ್ತಿ ಅಥವಾ ಅನುಭಾವದ ಹೆಸರಲ್ಲಿ ಬೇರೆಬೇರೆ ಕಾಲಘಟ್ಟದ ಶರಣರು ಸಂತರು ಸೂಫಿಗಳನ್ನು ಒಟ್ಟಿಗೆ ಹಾಕಿ ಭಕ್ತಿಚಳವಳಿ ಎಂದು ಪರಿಭಾವಿಸುವುದು ಮತ್ತು ಅವರಿಗೆಲ್ಲ ಸಾಮಾನ್ಯ ತಾತ್ವಿಕ ಚೌಕಟ್ಟಿನಲ್ಲಿ ವ್ಯಾಖ್ಯಾನಿಸುವುದು ಸಮಸ್ಯಾತ್ಮಕವಾಗಿದೆ.

೪

ಧರ್ಮ ಮತ್ತು ಭಕ್ತಿಗಳು ಎರಡೂ ಬೇರೆಬೇರೆ ಸ್ವರೂಪದವು ಎಂದು ಈ ಹಿಂದೆ ಹೇಳಿದ್ದರೂ, ಅವು ಏಕೀಭವಿಸಬಲ್ಲವು. ಧರ್ಮಗಳಲ್ಲಿ ತಂತಮ್ಮ ದೈವವನ್ನು ಸಂಪ್ರೀತಗೊಳಿಸಲು ತೋರುವ ಭಕ್ತಿ, ಮಾಡುವ ಪ್ರಾರ್ಥನೆ, ಆರಾಧನೆ (ಪೂಜೆ)ಗಳಿಗೆ ಇನ್ನೊಂದು ಧರ್ಮದವರ, ಪಂಗಡದವರ ಭಕ್ತಿಯ ರೀತಿಯನ್ನು ದ್ವೇಷಿಸುವ ಆಯಾಮವಿದೆ. ತಮಗೆ ಪವಿತ್ರವೆನಿಸಿದ ಪ್ರಾಣಿಯನ್ನು ತಿನ್ನುತ್ತಾರೆ. ನಮ್ಮ ಪವಿತ್ರ ಗ್ರಂಥಗಳಿಗೆ ಅಪಮಾನಿಸಿದರು. ನಮ್ಮ ದೈವಕ್ಕೆ ವಿರೋಧ ಮಾಡುತ್ತಾರೆ, ಎಂಬ ಕಾರಣದಿಂದ ನಡೆದಿರುವ ಹಿಂಸೆ ಮತ್ತು ರಕ್ತಪಾತಗಳು ಭಾರತದಲ್ಲಿ ಇನ್ನೂ ನಿಂತಿಲ್ಲ. ಬಹುಶಃ ಚಾರಿತ್ರಿಕವಾಗಿ ಜಗತ್ತಿನ ಬಹುತೇಕ ಧರ್ಮಗಳಲ್ಲಿ

ಅದರ ಅನುಯಾಯಿಗಳ ನಿಷ್ಠೆಯನ್ನು `ಅನ್ಯ' ಧರ್ಮಗಳ ಧಾರ್ಮಿಕರ ಮೇಲಿನ ದ್ವೇಷ, ಕ್ರೌರ್ಯ ಹಿಂಸೆಗಳ ಆಯಾಮವಿಲ್ಲದೆ ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

ವಿಶೇಷವೆಂದರೆ, ದ್ವೇಷ, ಹಿಂಸೆ ಕೌರ್ಯಗಳನ್ನು ಸಾಂಸ್ಥಿಕ ಧರ್ಮಗಳು ಮಾತ್ರ ಮಾಡುವುದಿಲ್ಲ. ಭಕ್ತಿಚಳವಳಿಗಳು ಎನಿಸಿಕೊಂಡವು ಕೂಡ ಮಾಡುತ್ತವೆ. ತಮ್ಮ ಇಷ್ಟದೈವದ ಮೇಲೆ ಅತೀವ ಭಕ್ತಿಯುಳ್ಳ ಭಕ್ತರು ಕೂಡ ಅನ್ಯದೈವಗಳ ಅನ್ಯಧರ್ಮಿಯರ ಮೇಲಿನ ಹಿಂಸೆಗೆ ಕಾರಣವಾಗಿರುವ ನೂರಾರು ಘಟನೆಗಳಿವೆ. ವಿಗ್ರಹಾರಾಧಕ ಅಥವಾ ಗುಡಿಸಂಸ್ಕೃತಿಯ ಭಕ್ತಿಗೆ ಸೇರಿದ ಹರಿಹರನು, ವೈದಿಕ ಬ್ರಾಹ್ಮಣ ಸಂಸ್ಕೃತಿಯ ವಿರುದ್ಧ ಬಂಡೆದ್ದು, ದಲಿತ ಕೆಳಜಾತಿಯ ಬಡವ ಮತ್ತು ಶ್ರಮಿಕರಾದ ಸಾಮಾನ್ಯ ವ್ಯಕ್ತಿಗಳನ್ನು ನಾಯಕರನ್ನಾಗಿ ಮಾಡಿಕೊಂಡು ರಗಳೆ ಕಾವ್ಯ ರಚಿಸಿದವನು. ಭಕ್ತಿಪಂಥಗಳಲ್ಲಿರುವ ಕ್ರಾಂತಿಕಾರಕತೆಯ ನೆಲೆಯಿಂದ ಇದು ಸಹಜವಾಗಿದೆ. ಆದರೆ ಇದೇ ಹರಿಹರನು ಆದಯ್ಯನ ರಗಳೆಯನ್ನೂ ಬರೆದನು. ಈ ರಗಳೆಯಲ್ಲಿ ಪುಲಿಗೆರೆಯ ಜೈನರನ್ನು ಆದಯ್ಯನು ಕಡಿದುಚೆಲ್ಲುವ ರೌದ್ರಭೀಭತ್ಸ ದೃಶ್ಯಗಳ ಚಿತ್ರಣವಿದೆ. ಹರಿಹರನು ಈ ಹಿಂಸೆಯನ್ನು ಭಕ್ತಿಯ ಹೆಸರಲ್ಲಿ ವೈಭವೀಕರಿಸುತ್ತಾನೆ. ಇದು ಸೃಜನಶೀಲವಾದ ಸಹನಶೀಲವಾದ ತಾಯ್ತನದ ಸಮಾಜವಾದಿ ಗುಣವುಳ್ಳ ಭಕ್ತಿ ಬದಲಾದ ಸನ್ನಿವೇಶಗಳಲ್ಲಿ ಸಾಂಸ್ಥಿಕ ಧರ್ಮದ ರೂಪಾಂತರ ಪಡೆಯುವುದಕ್ಕೆ ನಿದರ್ಶನವಾಗಿದೆ.

ತಮ್ಮ ಹುಟ್ಟಿನ ಮೊದಲ ಹಂತದಲ್ಲಿ ಸಾಂಸ್ಥಿಕ ಧರ್ಮಗಳು ಭಕ್ತಿಚಳವಳಿಗಳ ಕ್ರಾಂತಿಕಾರಿ ಗುಣವನ್ನು ಹೊಂದಿರುತ್ತವೆ. ದಮನಿತರ ಆಶೋತ್ತರಗಳನ್ನು ಪ್ರತಿನಿಧಿಸುತ್ತ ಪ್ರತಿಷ್ಠಾಪಿತ ಶಕ್ತಿಗಳ ಪ್ರತಿರೋಧ ಮಾಡುತ್ತ ಹುಟ್ಟುವ ಅವು, ತಳವರ್ಗದ ಜನರನ್ನು ಅಪ್ಪಿಕೊಳ್ಳುವ ತಾಯ್ತನ ತೋರುತ್ತವೆ. ಆದರೆ ಸಾಂಸ್ಥಿಕರಣ ಪಡೆದಾಗ ತರತಮ ಮಾಡುವ, ಭಿನ್ನಮತ ಸಹಿಸದ ಸರ್ವಾಧಿಕಾರಿ ಗುಣ ಪಡೆದುಕೊಳ್ಳುತ್ತವೆ. ಇಸ್ಲಾಂ ವಿಷಯದಲ್ಲಿಯೂ ಶರಣ ಚಳವಳಿಯ ವಿಷಯದಲ್ಲಿಯೂ ಈ ಮಾತು ನಿಜ ಬಿಜ್ಜಳನ ರಾಜ್ಯದ ವೈದಿಕರಿಂದ ಹಲ್ಲೆಗೊಳಗಾದ ಪೀಡನೆಗೊಳಗಾದ ಶರಣರು ಜೀವ ಉಳಿಸಿಕೊಳ್ಳಲು ದಶದಿಕ್ಕುಗಳಿಗೆ ಓಡಿಹೋಗಬೇಕಾಯಿತು. ಆದರೆ ಇದೇ ಶರಣಧರ್ಮ ಸಾಂಸ್ಥಿಕವಾದಾಗ, ಜೈನರ ಮೇಲೆ ಹಲ್ಲೆ ಮಾಡಿತು. ಶೈವಪಂಥದ ಕಾಪಾಲಿಕರನ್ನು ಅಸಹನೆಯಿಂದ ಕಂಡಿತು. ತಮಿಳುನಾಡಿನ ಶೈವರ ಹಲ್ಲೆಯಿಂದ ಜೀವವುಳಿಸಿಕೊಂಡು ಕರ್ನಾಟಕಕ್ಕೆ ಬಂದ ಶ್ರೀವೈಷ್ಣವ ಮತವು, ಇಲ್ಲಿನ ಜೈನರ ವಿಷಯದಲ್ಲಿ ಹಲ್ಲೆಮಾಡಿತು. ಮಾಗಡಿ ತಾಲ್ಲೂಕಿನ ಕಲ್ಯದ ಬುಕ್ಕರಾಯನ ಶಾಸನ ಇದಕ್ಕೆ ಸಾಕ್ಷಿ.

ಸಾಂಸ್ಥಿಕ ಧರ್ಮ ಮತ್ತು ಭಕ್ತಿಪಂಥ ಎದುರಾಳಿಗಳಾಗಿದ್ದರೆ, ಮತ್ತೆ ಕೆಲವು ಕಡೆ ಒಂದರೊಳಗೆ ಇನ್ನೊಂದು ಏಕೀಭವಿಸುತ್ತದೆ. ಎರಡೂ ಪರಸ್ಪರ ಪಾತ್ರಗಳನ್ನು ಬದಲಿಸಿಕೊಳ್ಳುತ್ತವೆ. ಅಂದರೆ, ಧರ್ಮಕ್ಕಾಗಲಿ ಅಥವಾ ಭಕ್ತಿಪಂಥಕ್ಕಾಗಲಿ, ಮಾನವೀಯ ಅಥವಾ ಅಮಾನವೀಯ, ಸಹನಶೀಲ ಅಥವಾ ಅಸಹನಶೀಲ ಸೃಜನಶೀಲ ಅಥವಾ ಜಡ ಆಯಾಮ ಒದಗುವುದು ಅವುಗಳ ತತ್ವದರ್ಶನ, ಧರ್ಮಶಾಸ್ತ್ರ

(ಥಿಯಾಲಜಿ) ಇವುಗಳಿಂದಲ್ಲ. ಅವು ಯಾವ ಚಾರಿತ್ರಿಕ ಸನ್ನಿವೇಶದಲ್ಲಿ ಬದುಕುತ್ತಿವೆ ಎಂಬುದರಿಂದ. ಇಲ್ಲಿ ಚಾರಿತ್ರಿಕ ಕಾರಣಗಳೆಂದರೆ ಮತ್ತೇನಲ್ಲ, ಆಯಾ ಕಾಲದ ಬೇರೆಬೇರೆ ವರ್ಗಗಳ ಆರ್ಥಿಕ ರಾಜಕೀಯ ಸಾಮಾಜಿಕ ಕಾರಣಗಳೇ. ಹರಿಹರನು ಆದಯ್ಯನ ಭಕ್ತಿ ಜೈನವಿರೋಧಿಯಾಗಿ ಬದಲಾಗಲು ಕಾರಣ, ವ್ಯಾಪಾರ ವಹಿವಾಟುಗಳಲ್ಲಿ ಜೈನರು ಬಣಜಿಗ ವೀರಶೈವರ ಎದುರಾಳಿಯಾಗಿದ್ದುದು. ಕಲ್ಯದಲ್ಲಿ ನಡೆದ ಶ್ರೀವೈಷ್ಣವ ಹಾಗೂ ಜೈನರ ಸಂಘರ್ಷಕ್ಕೂ ರಾಜಕೀಯ ಅಧಿಕಾರಸ್ಥರಿಗೆ ಯಾರು ಹತ್ತಿರವಾಗಬೇಕು ಮತ್ತು ಸಂಪತ್ತಿನ ಮೇಲೆ ಹಿಡಿತ ಸಾಧಿಸಬೇಕು ಎಂಬ ಹಿತಾಸಕ್ತಿಗಳೇ, ಆದ್ದರಿಂದ ಚರಿತ್ರೆಯಲ್ಲಿ ಆರ್ಥಿಕ ಸಾಮಾಜಿಕ ರಾಜಕೀಯ ವೈಷಮ್ಯ ಸ್ಪರ್ಧೆಗಳು ದೈವಭಕ್ತಿಯ ಹೆಸರಲ್ಲಿ ಯುದ್ಧಗಳಿಗೆ ಕಾರಣವಾಗುತ್ತ ಬಂದಿವೆ. ಅಹಿಂಸೆಯೇ ಮೂಲತತ್ವವಾದ ಬೌದ್ಧರು, ಈಚೆಗೆ ಶ್ರೀಲಂಕಾ ಸರ್ಕಾರವು ಮಾಡುವ ತಮಿಳರ ಜನಾಂಗಹತ್ಯೆಯನ್ನು ಬೆಂಬಲಿಸಿದರು ಎನ್ನುವುದು ಇದನ್ನೇ ಸೂಚಿಸುತ್ತದೆ.

ಧರ್ಮ ಮತ್ತು ಭಕ್ತಿಗಳನ್ನು ಗತಕಾಲದ ಚರಿತ್ರೆಯಲ್ಲಿಟ್ಟು ಅಧ್ಯಯನ ಮಾಡುವ ಪ್ರವೃತ್ತಿಯಿದೆ. ಆದರೆ ಅವುಗಳ ಸಮಕಾಲೀನ ರೂಪಾಂತರಗಳನ್ನು ಶೋಧಿಸುವುದು ಹೆಚ್ಚು ಉಪಯುಕ್ತ. ಧರ್ಮ ಮತ್ತು ಭಕ್ತಿಯ ಮೇಲ್ಕಾಣಿಸಿದ ಚಹರೆಗಳು ವರ್ತಮಾನ ಕಾಲದಲ್ಲಿ ಬೇರೆಬೇರೆ ಬಗೆಯಲ್ಲಿ ಈಗ ಕರ್ನಾಟಕದಲ್ಲಿ ರಾಜಕಾರಣಿಗಳು ಅಕ್ರಮ ಗಣಿಗಾರಿಕೆ ಮಾಡುವವರು, ಜನಸಾಮಾನ್ಯರಿಗಿಂತ ಹೆಚ್ಚು ದೈವಭಕ್ತಿ ಗುರುಮಠಗಳ ಭಕ್ತಿ ತೋರುತ್ತಿದ್ದಾರೆ. ಇಲ್ಲಿ ಭಕ್ತಿಯು ತಮ್ಮ ಅನೈತಿಕತೆ ಅಕ್ರಮಗಳನ್ನು ಕ್ರಮಬದ್ಧಗೊಳಿಸಿಕೊಳ್ಳುವ, ಮುಚ್ಚಿಹಾಕುವ ಮೇಲುಸುಕಾಗಿ ಬಳಕೆಯಾಗುತ್ತಿದೆ. ಇದು ಭಕ್ತಿಯ ರಾಜಕೀಕರಣ ಮತ್ತು ಕಾರ್ಪೊರೇಟೀಕರಣ. ಇದಕ್ಕೆ ಪೂರಕವಾಗಿ ಧಾರ್ಮಿಕ ಸಂಸ್ಥೆಗಳು ಅದರ ನೇತಾರರೂ ಈಗ ಹೆಚ್ಚು ರಾಜಕೀಯೀಕರಣ ಇಲ್ಲವೆ ಕಾರ್ಪೊರೇಟೀಕರಣ ಪಡೆಯುತ್ತಿರುವರು, ಧರ್ಮ ಮತ್ತು ಭಕ್ತಿಗಳು ಮಾರುಕಟ್ಟೆಯ ಈ ಯುಗದಲ್ಲಿ ಅವು ಮಾರಾಟದ ಸರಕುಗಳಾಗಿವೆ ಇಲ್ಲವೇ ಮಾರುಕಟ್ಟೆಯ ಶಕ್ತಿಗಳಿಗೆ ಇಂಬಾಗಿ ನಿಂತಿವೆ. ಇದಕ್ಕೆ ಕಾರ್ಪೊರೇಟ್ ವ್ಯವಸ್ಥೆಯ ಅಗತ್ಯ ಪೂರೈಸಲು ಹುಟ್ಟಿಕೊಂಡಿರುವ ಗುರುಗಳೇ ಸಾಕ್ಷಿ. ಅಂದರೆ ಚರಿತ್ರೆಯು ಪುನರಾವರ್ತನೆಗೊಳ್ಳುತ್ತಿದೆ.

ಹೀಗೆ ಚರಿತ್ರೆಯಲ್ಲಿ ಧರ್ಮ ಮತ್ತು ಭಕ್ತಿಗಳು ಒಂದರ ಚೌಕಟ್ಟಿನಲ್ಲಿ ಇನ್ನೊಂದು ಅಡಗಿವೆ. ಒಂದಕ್ಕೆ ಇನ್ನೊಂದು ಪ್ರತಿರೋಧಿಯಂತೆ ವರ್ತಿಸಿವೆ. ಒಂದು ಇನ್ನೊಂದಾಗಿ ತಮ್ಮ ಪಾತ್ರಗಳನ್ನು ಅದಲುಬದಲು ಮಾಡಿಕೊಂಡಿವೆ. ಇವಕ್ಕೆ ಖಾಯಂ ಆದ ಅರ್ಥವ್ಯಾಖ್ಯಾನವನ್ನು ಕೊಟ್ಟು, ಅವು ವರ್ತಿಸುವ ದಿಸೆಯನ್ನು ಹೀಗೆ ಎಂದು ಹೇಳಲು ಬರುವುದಿಲ್ಲ. ಅವುಗಳ ವರ್ತನೆಗಳ ಆಧಾರದಲ್ಲಿ ಕಾರಣವನ್ನು ಶೋಧಿಸಿ ವಿಶ್ಲೇಷಣೆ ಮಾಡಬಹುದು. ಭಕ್ತಿ ಮತ್ತು ಧರ್ಮಗಳು ದಮನಿತ ಸಮುದಾಯಗಳ ಬಿಡುಗಡೆಯ ಮಾರ್ಗಗಳಾಗಿ ಕೆಲಸ ಮಾಡಿರುವಂತೆ, ಅಧಿಕಾರಸ್ಥರ ಹತ್ಯಾರಗಳಾಗಿ ಸಮುದಾಯಗಳ ಬಂಧನಕ್ಕೂ ಕಾರಣವಾಗಿ ಕೆಲಸ ಮಾಡಿವೆ. ಆದ್ದರಿಂದಲೇ ಧರ್ಮ ಮತ್ತು ಭಕ್ತಿಯನ್ನು ಅವು ಎಸಗಿದ ಕೃತ್ಯಗಳು

ಅವುಗಳ ಪರಿಣಾಮಗಳ ಮೂಲಕ ಅಲ್ಲ. ಅವುಗಳ ಮೂಲತತ್ವ ಇಲ್ಲವೇ ದರ್ಶನಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿಕೊಂಡು ಬರಲಾಗಿದೆ. ಇದನ್ನು ಧರ್ಮ ಮತ್ತು ಭಕ್ತಿಯ ತಾತ್ವಿಕ ಅಧ್ಯಯನ ಎಂದು ಕರೆಯಬಹುದು. ಆದರೆ ನಡೆಯಬೇಕಿರುವುದು ಭಕ್ತಿ ಮತ್ತು ಧರ್ಮಗಳ ರಾಜಕೀಯ–ಸಾಮಾಜಿಕ ಅಧ್ಯಯನ. ಈ ಅಧ್ಯಯನ ವಿಧಾನವು ಅವು ಹುಟ್ಟಿದ, ಬೆಳೆದ ಹಾಗೂ ವರ್ತಿಸಿದ ರೀತಿಗಳ ಹಿಂದಿನ ವಾಸ್ತವಿಕ ಕಾರಣಗಳನ್ನು ಶೋಧಿಸುತ್ತದೆ.

ಭಕ್ತಿ ಮನುಷ್ಯರನ್ನು ಮಾನವೀಯರಾಗಿಸಿದೆ. ಇನ್ನೊಬ್ಬರಲ್ಲಿಯೂ ದೈವದ ಅಂಶವಿದೆಯೆಂದು ಗುರುತಿಸುವ ಮೂಲಕ, ಮನುಷ್ಯರನ್ನು ಜಾತಿ ಮತ ಲಿಂಗದ ಆಧಾರದಲ್ಲಿ ವಿಂಗಡಿಸುವ ಮತ್ತು ತರತಮ ಮಾಡುವ ಪದ್ಧತಿಗಳನ್ನು ತಿರಸ್ಕರಿಸಿದೆ. ಆದರೆ ಇದೇ ಭಕ್ತಿ ತನ್ನ ದೇವರನ್ನು ಒಪ್ಪದ ಜನರನ್ನು ಮನುಷ್ಯರೆಂದು ಪರಿಗಣಿಸಿದೆ. ಕೊಲ್ಲುವ ಕೆಲಸ ಕೂಡ ಮಾಡಿದೆ. ಒಂದು ಧರ್ಮ ಭಕ್ತಿ, ಈ ಎರಡೂ ಕೆಲಸಗಳನ್ನು ಮಾಡಿದೆ. ಇದಕ್ಕೆ ಕಾರಣ, ಆಯಾ ಧರ್ಮದ ಅಥವಾ ಭಕ್ತಿಪಂಥದ ತತ್ವಗಳು ಮಾತ್ರವಲ್ಲ. ಅವು ಜಾರಿಯಾಗುವ ಕಾಲದೇಶ ಸನ್ನಿವೇಶಗಳು.

(*ಆಕರ: ಭಕ್ತಿಯ ಬೆರಗು ಸಂ. ಪಿ ಚಂದ್ರಿಕಾ*)

# 2.4 ಮುಸ್ಲಿಂ ಮದುವೆಯೊಂದರಲ್ಲಿ (ಓದು ಪತ್ಯ)

**ನಾಗತೀಹಳ್ಳಿ ಚಂದ್ರಶೇಖರ**

"ನೀವು ನನ್ನ ಮದುವೆಗೆ ಬರಲೇಬೇಕು" ಅವನು ಒತ್ತಾಯಿಸಿದ. ಅವನ ತಾಯಿ ಕೂಡಾ "ನೀವು ಬರದಿದ್ದರೆ ಹೇಗೆ?" ಎಂದರು. ಐದುನೂರಾ ಐದು ಕಿಲೋಮೀಟರು ದೂರದ ಆ ಊರಿಗೆ ಹೋಗಿ ಬರಲು ಮೂರು ದಿನ ಎಗರಿ ಹೋಗುತ್ತದೆ. ನನ್ನ ದಿನಚರಿಯ ಬ್ಯಾಂಕಿನಲ್ಲಿ ಕಾಲದ ಉಳಿತಾಯ ಅಷ್ಟೊಂದಿಲ್ಲ. ನೀವು ನನ್ನ ಗಾಡ್‌ಫಾದರ್. ಎರಡು ತಿಂಗಳು ಮೊದಲೇ ಹೇಳಿದ್ದೇನೆ. "ಹೇಗಾದರೂ ಮಾಡಿ ಬನ್ನಿ' ಎಂಬುದು ಅವನ ಹಕ್ಕೊತ್ತಾಯ. ಶಿಷ್ಯನ ಬಗೆಗಿನ ಕಾಳಜಿ, ಅನ್ಯಧರ್ಮೀಯರ ಮದುವೆ ನೋಡುವ ಕುತೂಹಲ, ಕರ್ತವ್ಯ ಪ್ರಜ್ಞೆ ಇವೆಲ್ಲ ಕಾರಣಗಳು ಹೊರಡಿಸಿದವು.

ಅವನು ನನ್ನಲ್ಲಿ ಬಂದದ್ದು ಹೀಗೆ. ಚಿತ್ರೋತ್ಸವ ಒಂದರಲ್ಲಿ ಸಿಕ್ಕಿದ. ಅವನ ಹೆಸರನ್ನು ಅನ್ವರ್ ಎಂದಿಟ್ಟುಕೊಳ್ಳೋಣ. ಅನೇಕರಂತೆ "ಫಿಲಂ ಫೀಲ್ಡಲ್ಲಿ ಏನಾದರೂ ಮಾಡೋ ಆಸೆ. ಹೆಲ್ಪು ಮಾಡಿ ಸಾರ್" ಎಂದಿದ್ದವನು. "ಏನಾದರೂ" ಎಂದರೆ ಏನು ಎಂದು specific ಆಗಿ ತಿಳಿಯದಿದ್ದವನು. ಸಿನಿಮಾ ಎನ್ನುವುದು ವಿಲಕ್ಷಣ ಮತ್ಸ್ಯರಾಶಿಗಳು ಬದುಕುವ ಮಹಾಸಾಗರ. ಗೋಡೆಗೆ ಪೋಸ್ಟರು ಹಚ್ಚುವವನೂ, ಎರಡೆರಡೂ ಕ್ಯಾನುಗಳಲ್ಲಿ ಸುತ್ತಿರುವ ರೀಲುಗಳನ್ನು ಕಂಕುಳಲ್ಲಿ ಇರುಕಿ ಆಟದ ನಡುವೆಯೇ ಥೇಟರಿನಿಂದ ಥೇಟರಿಗೆ ಅಡ್ಡಾಡುವವನೂ, ದುಬಾರಿ ಸಂಭಾವನೆಯ ನಟನಟಿಯರೂ ಇರುವುದು ಈ ಫಿಲಂ ಫೀಲ್ಡಿನಲ್ಲೆ. ಅನ್ವರ್‌ಗೆ ಮಾರ್ಕೆಟಿಂಗ್‌ನಲ್ಲಿ ಆಸಕ್ತಿ ಇತ್ತು. ನಮ್ಮ ಮನೆಯಲ್ಲೇ ಇದ್ದುಕೋ, ನನ್ನ ಕಚೇರಿಯಲ್ಲೇ ಕೆಲಸ ಆರಂಭಿಸು, ಕಠಿಣ ಪರಿಶ್ರಮ, ಪ್ರಾಮಾಣಿಕತೆ, ಸಮಯಪ್ರಜ್ಞೆ ಇದ್ದರೆ ಮಾತ್ರ ನನ್ನಲ್ಲಿ ಕೆಲಸ. ಇವು ಮಾತ್ರ ನಿನ್ನ ಉಳಿಸುತ್ತವೆ. ಬೆಳೆಸುತ್ತವೆ ಎಂದು ಎಚ್ಚರಿಸಿದೆ. ಒಂದು ಚಿಕ್ಕ ತಾಲ್ಲೂಕು ಕೇಂದ್ರದಿಂದ ರಾಜಧಾನಿಗೆ ಬಂದ ಅನ್ವರ್‌ಗೆ ತತ್‌ಕ್ಷಣಕ್ಕೆ ಆಶ್ರಯ ಉದ್ಯೋಗ ಸಿಕ್ಕಿತು. ಶಿಕ್ಷಕಿಯಾಗಿದ್ದ ಅವನ ತಾಯಿ "ಇವನನ್ನು ನಿಮ್ಮ ಮಡಿಲಿಗೆ ಹಾಕಿದ್ದೀನಿ" ಎಂದರು. ವಾಸ್ತವವಾಗಿ ನಾನೇ ಒಂದು ನೆಮ್ಮದಿಯ ಮಡಿಲಿಗಾಗಿ ತಹತಹಿಸುವವ. ಅನ್ವರ್ ನಮ್ಮ ಮನೆಯಲ್ಲಿ ಒಬ್ಬನಾದ. ನಮ್ಮ ಕಚೇರಿಯಲ್ಲಿ ಒಬ್ಬನಾದ.

"ಹೋಗಿ ಹೋಗಿ ಸಾಬೀನ ಮನೇಲಿಡ್ಕೊಂಡಿದ್ದೀಯ! ಮೊದಲು ಖಾಲಿ ಮಾಡ್ಸು. ಅವ್ರು ಭಾಳಾ ಡೇಂಜರಸ್ಸು, ಸರ್ಯಾಗಿ ದೋಖಾ ಹಾಕ್ತಾರೆ" ಎಂಬ ಗೀತೋಪದೇಶವನ್ನು ಹಲವು ಗೆಳೆಯರು ಕೊಟ್ಟರು. ನಾನು ನಕ್ಕು ಸುಮ್ಮನಾದೆ. ಮುಸ್ಲಿಮರ ಮನೆಯಲ್ಲಿ ಒಬ್ಬ ಹಿಂದೂ ಹುಡುಗ ಇದ್ದರೆ ಅವರೂ ಹೀಗೇ ಮಾತನಾಡುತ್ತಾರೇನೋ. ಮನುಷ್ಯರನ್ನು ಮನುಷ್ಯರನ್ನಾಗಿ ನೋಡುವ ಕಾಲ ಇಲ್ಲವಾಗಿದೆ. ಸ್ವಧರ್ಮಿಯರು ಸಾವಿರ ಸಲ ಮೋಸ ಮಾಡಲಿ, ತಾಳಿಕೊಳ್ಳುತ್ತೇವೆ ಆದರೆ ಅನ್ಯ ಧರ್ಮೀಯನ ಒಂದು ವಂಚನೆಯ ಉದಾಹರಣೆ ಸಿಕ್ಕಿದರೆ ಸಾಕು, ಅದನ್ನು ಹಿಗ್ಗಲಿಸಿ ಅವನನ್ನೂ ಅವನ ಧರ್ಮವನ್ನೂ ಹೀಗಳೆಯುತ್ತೇವೆ.

ಹಾಗೆ ನೋಡಿದರೆ ನನಗೆ ಟೋಪಿ ಹಾಕಿರುವವರು ಕುಲಬಾಂಧವರೇ– ಆತ್ಮೀಯ ಬಳಗದಲ್ಲಿದ್ದ ಗೆಳೆಯರೇ. ಅನ್ವರ್ ನಮ್ಮ ಮನೆಯಲ್ಲಿ ಬಹುತೇಕ ಒಂದು ವರ್ಷವಿದ್ದ. ಕೊಂಚ ಸೋಮಾರಿ ಅನ್ನುವುದನ್ನು ಬಿಟ್ಟರೆ ಅವನಿಂದ ಯಾವ ತೊಂದರೆಯೂ ಆಗಲಿಲ್ಲ. ಮೆದು ಮಾತು ಮತ್ತು ಮೀಸೆ ಮರೆಯ ನಗುವನ್ನು ಬಳಸಿಕೊಂಡೇ ಬೆಳೆದ. ಮುಂಬೈಗೆ ಹೋದ. ಪ್ರತಿಷ್ಠಿತ ಸಂಸ್ಥೆಯಲ್ಲಿ ದಕ್ಷಿಣ ಭಾರತದ ಮಾರುಕಟ್ಟೆ ವ್ಯವಸ್ಥಾಪಕನಾಗಿ ಕೆಲಸ ಪಡೆದ. ಇದೀಗ ಅವನಿಗೆ ಮದುವೆ. "ನಿಜ ಹೇಳು ವರದಕ್ಷಿಣೆ ತಗೊಂಡಿಲ್ಲ ತಾನೆ?" ಎಂದಿದ್ದೆ. "ಎಲ್ಲಾದ್ರೂ ಉಂಟಾ? ನಿಮ್ಮ ಶಿಷ್ಯನಾಗಿ?" ಅಂತ ಭರವಸೆ ಕೊಟ್ಟ ಮೇಲೆ ಮದುವೆಗೆ ಹೊರಟಿದ್ದೆ.

ರಾಹುಕಾಲದಲ್ಲಿ ಅಂತರ್ಜಾತಿ ಮದುವೆಯಾದ ನಾನು ಆಡಂಬರದ ಮದುವೆಗಳಿಗೆ ಹೋಗುತ್ತಲೇ ಇರಲಿಲ್ಲ. ಈ ಶಪಥ ಮುರಿದದ್ದು ಲಂಕೇಶರು ತಮ್ಮ ಮಗನ ಮದುವೆಗೆ ತುಮಕೂರಿಗೆ ಕರೆದೊಯ್ದ ಮೇಲೆ. "ಅವರವರ ದಾರಿ ಅವರ್ಗೆ ಕಣಯ್ಯ, ನಮ್ಮ ದಾರಿ ನಮಗೆ" ಅಂತ ಸಮರ್ಥಿಸಿಕೊಂಡಿದ್ದರು. ಸಿನಿಮಾ ಸೇರಿ ನಾನು ಸರ್ವನಾಶವಾದ ಮೇಲೆ ಈ ಮುಹೂರ್ತ, ಕುಂಬಳಕಾಯಿ ಒಡೆಯೋದು, ಅದ್ದೂರಿ ಪೂಜೆ ಇತ್ಯಾದಿ ವಿವಿಧ ವೇಷ ಸ್ಪರ್ಧೆಗಳನ್ನು ಮೂಕ ಸಾಕ್ಷಿಯಾಗಿ ನೋಡಬೇಕಾಯಿತು.

ಮೌಲ್ಯಗಳು ತೀರಾ ವೈಯಕ್ತಿಕ. ಹೇರಬಾರದು. ಹೇರಿಸಿಕೊಳ್ಳಬಾರದು. ಲೋಗರಾಟವನ್ನಾಡಲು ಎರಡು ಕೋಣೆಗಳಲ್ಲಿ ಒಂದನ್ನು ಮೀಸಲಿಟ್ಟು ಇನ್ನೊಂದರೊಳಗೆ ಒಬ್ಬನೇ ವಿರಮಿಸಬೇಕು. ಎಲ್ಲದರ ವಿರುದ್ಧ ಘೋಷಣೆ ಕೂಗುವವನು ಕಾಗೆಯಾಗುತ್ತಾನೆ. ಅನುಮಾನಾಸ್ಪದವಾಗುತ್ತಾನೆ. ಎಲ್ಲರೊಳಗೊಂದಾಗುವವನು ಮಂಕುತಿಮ್ಮನಾಗುತ್ತಾನೆ. ಕಾಗೆಯ ಅರಚಾಟಕ್ಕಿಂತ ಮಂಕುತಿಮ್ಮನ ಸುಡುವ ಮೌನ ಶ್ರೇಷ್ಠ.

ಅನ್ವರ್‌ನ ಮದುವೆ ಹಾಲ್‌ಗೆ ಹೋದಾಗ ಆಗಲೇ ಜನ ಸೇರಿದರು. ಹಿಂದುಗಡೆ ಸೀಟಿನಲ್ಲಿ ಕೂರಲು ಯತ್ನಿಸಿದೆ. ಅಲ್ಲಿದ್ದವರು ಬಲವಂತವಾಗಿ ವೇದಿಕೆಯ ಮೇಲೆ ಕರೆದೊಯ್ದು ಕನ್ಯಾಪಿತೃವಿನ ಪಕ್ಕದಲ್ಲಿ ಕೂರಿಸಿದರು.

ಈ ಅನ್ವರ್ ಅವರಿಗೆ ಏನು ಹೇಳಿದ್ದನೋ ಕಾಣೆ. ಇದು ಸಾಂಸ್ಕೃತಿಕ ಸಮಾರಂಭವೋ, ಮದುವೆಯೋ ಅಂತ ಗೊಂದಲವಾಯಿತು. ಅನ್ವರ್‌ನ ವರಾವತಾರ ಕಂಡ ಮೇಲೆ ಅದು ಮದುವೆಯೇ ಎನಿಸಿತು. ಅವನ ಪಕ್ಕದಲ್ಲಿದ್ದ ಜಾಗದಲ್ಲಿ ವಧು ಬಂದು ಕೂರುತ್ತಾಳೆಂದು ಕಾಯುತ್ತಿದ್ದೆ. ಆದರೆ ಮೌಲ್ವಿ ಬಂದು ಕುಳಿತರು. ಕುರಾನ್ ಓದಿದರು. ಕನ್ಯಾಪಿತೃವನ್ನು ಅರ್ಥ ಕೇಳಿದೆ. ಸುಖೀ ದಾಂಪತ್ಯ, ಒಳ್ಳೆಯ ಜೀವನದ ಹರಕೆ, ಸಂತಾನ ಪ್ರಾಪ್ತಿಯ ಭಾಗ್ಯದ ಕೋರಿಕೆ ಎಂದರು. ಒಪ್ಪಿಗೆ ಸೂಚಿಸಿ ಸಹಿ ಹಾಕಿದರು. ವಧು ಬರಲಿಲ್ಲ. ಮದುವೆ ಮುಗಿಯಿತು. ನಾನು ನನ್ನ ಬದುಕಿನಲ್ಲಿ ಭಾಗವಹಿಸಿದ ಮೊದಲ ಮುಸ್ಲಿಂ ಮದುವೆ. ಅವರಲ್ಲಿ ವಧು ಕಲ್ಯಾಣ ಮಂಟಪಕ್ಕೆ ಬರುವುದೇ ಇಲ್ಲವಂತೆ. ನನಗೆ ಅಪಾರ ಕೌತುಕ. ಹೆಣ್ಣು

ಮಕ್ಕಳೆಲ್ಲಾ ಬೇರೊಂದು ಕೊಠಡಿಯಲ್ಲಿ ಇರುತ್ತಾರಂತೆ. ನನ್ನ ಶಿಷ್ಯ ಅನ್ವರ್ ಎಂಥ ಹುಡುಗಿಯ ಕೈ ಹಿಡಿದಿದ್ದಾನೋ ಎಂದು ನೋಡುವ ಕುತೂಹಲವಿತ್ತು. ನನಗೂ, ಅಷ್ಟೇಕೆ ಅನ್ವರ್‌ಗೂ ಸಾಧ್ಯವಾಗಲಿಲ್ಲ!

ಆ ವೇದಿಕೆಯ ಮೇಲೆ ಕೂರಲು ನನಗೆ ಯಾವ ಧಾರ್ಮಿಕ ಅರ್ಹತೆಯೂ ಇರಲಿಲ್ಲ. ನನ್ನ "ಚರಿತ್ರೆ" ಗೊತ್ತಿದ್ದರೆ ಅವರು ಕೂರಿಸುತ್ತಿರಲಿಲ್ಲವೇನೋ. ಹಲವು ಅಂತರ್ಜಾತಿ ಮದುವೆಗಳನ್ನು, ಹಿಂದೂ ಮುಸ್ಲಿಂ ಮದುವೆಗಳನ್ನೂ ಮಾಡಿಸಿರುವ ನನ್ನನ್ನು ಕೇವಲ ಆತನ ಗಾಡ್ಫಾದರ್ ಎಂಬ ಗೌರವದಿಂದ ಕೂರಿಸಿರಬಹುದು ಎಂದುಕೊಂಡೆ.

"ಅವರು ಎಲ್ಲಾದ್ರಲ್ಲೂ ಉಲ್ಟಾ' ಎಂದು ಹಿಂದೂಗಳು ಹೇಳುತ್ತಾರೆ. ಹಿಂದೂಗಳ ಬಗ್ಗೆ ಅವರೂ ಅದೇ ಹೇಳುತ್ತಾರೆ. ಸಾವಿರಾರು ರೂಢಿಗಳ ವರ್ತುಲದಲ್ಲಿ ಎಲ್ಲರೂ ಸಿಕ್ಕಿ ಬಿದ್ದಿದ್ದೇವೆ ನಾವಲ್ಲಿರುವುದರಿಂದ ನಮಗದು ಶ್ರೇಷ್ಠ, ಅನಿವಾರ್ಯ. ಮೂಲಭೂತವಾದಿ ಮನಸ್ಸು ಎಲ್ಲಿರುತ್ತದೋ ಅದು ತಾನು ಮಾತ್ರ ಶ್ರೇಷ್ಠ ಎಂದು ಬೀಗುತ್ತದೆ. ಸರಳ ಮನುಷ್ಯ ಈ ಸಿಕ್ಕಿನಿಂದ ಹೊರಬರಲಾಗದೆ ಚಡಪಡಿಸುತ್ತಾ ಅಸಹಾಯಕನಾಗಿ ತೋರುತ್ತಾನೆ. ತರ್ಕವನ್ನು ಬಳಸಲು ಬಿಟ್ಟರೆ, ಬೆಳೆಸಲು ಬಿಟ್ಟರೆ ಎಲ್ಲ ಧರ್ಮಗಳಲ್ಲೂ ಸಾವಿರ ಸಮರ್ಥನೆಗಳು ಸಿಗುತ್ತವೆ. ಯಾಕೆಂದು ಗೊತ್ತಿಲ್ಲ. ನಾನು ವಿಮಾನದಲ್ಲಿ ಹಾರುವಾಗ ಭೂಮಿ ಒಂದು ಆಟಿಕೆ, ಧಾರ್ಮಿಕ ಮತಾಂಧತೆ ಒಂದು ಬಾಲಿಶ ಕ್ರಿಯೆ ಅನ್ನಿಸುತ್ತದೆ. ಕೆಳಗಿಳಿದ ಕೂಡಲೇ ಎಲ್ಲರ ವಕಾಲತ್ತುಗಳು ಕೇಳತೊಡಗುತ್ತವೆ. "ನಮ್ ಜನ ಜಾಸ್ತಿ ಇರೋ ಏರಿಯಾದಲ್ಲಿ ಮನೆ ಮಾಡಿದ್ದೀನಿ ಸಾರ್, ಸೇಫ್ಟಿ ಇರುತ್ತೆ" ಎನ್ನುತ್ತಿದ್ದಾನೆ ಅನ್ವರ್. ಹಾಗಾದರೆ ನಮ್ಮ ಮನೆಯಲ್ಲಿದ್ದಾಗ ಅವನಿಗೆ ಸೇಫ್ಟಿ ಇರಲಿಲ್ಲವೇ? ಈ ಮತಗಳು ನಿಜಕ್ಕೂ ರಕ್ಷಾಕವಚಗಳೇ? ಅದು ನಿಜವಾದರೆ ನಮ್ಮ ಆಳದ ಒಂಟಿತನ, ಹತಾಶಗಳನ್ನು ಯಾವ ಮತಗಳೂ ಏಕೆ ನೀಗಲಿಲ್ಲ? ಎಲ್ಲರೂ ತಂತಮ್ಮ ಮತದ ರಕ್ಷಾಕವಚದ ಒಳಗೆ ಬದುಕ ಬಯಸುವುದು ಏಕೆ? ಇದು ಕೇವಲ ಭ್ರಮೆಯೇ? ಜಾತಿಧರ್ಮಗಳ ಗೋಡೆಗಳನ್ನು ಒದ್ದು ಕೆಡವಿದಷ್ಟೂ ಅವು ಎದ್ದು ನಿಲ್ಲುತ್ತವೆ ಏಕೆ?

ಸಿಂಗಪುರದಲ್ಲಿ ಒಂದು ನಿಯಮವಿದೆ. ಅಪಾರ್ಟ್ಮೆಂಟ್ ಸಮುಚ್ಚಯ ಒಂದರಲ್ಲಿ ಒಂದೇ ಧರ್ಮದವರು ವಾಸಿಸುವಂತಿಲ್ಲ. ದೇಶದ ಜನಸಂಖ್ಯೆಗನುಗುಣವಾಗಿ ಸರ್ಕಾರ ಫ್ಲ್ಯಾಟ್‌ಗಳನ್ನು ಎಲ್ಲ ಮತಗಳವರಿಗೂ ಶೇಕಡಾವಾರು ಹಂಚುತ್ತದೆ. ಎಲ್ಲರೂ ಸಹಬಾಳ್ವೆ ನಡೆಸಲೇಬೇಕು. ಅದಕ್ಕೆ ಸಿಂಗಪುರ ಹಾಗಿದೆ, ನಾವು ಹೀಗಿದ್ದೇವೆ.

ಅನ್ವರ್ ಶುಭವಾಗಲಿ.

ಆಕರ– ನೋಟ–1– ನಾಗತಿಹಳ್ಳಿ ಚಂದ್ರಶೇಖರ

~ * ~ * ~ * ~

# ಘಟಕ 3. ದೇಸೀಯತೆ

**ಆಶಯ:**

ಬಗೆ ಪೊಸತಪ್ಪುದಾಗಿ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯ ಬಂಧಮೊ
ಪ್ಪುಗುಮುಮೆಳಮಾವು ಕೆಂದಳಿರ ಪೂವಿನ ಬಿಣ್ಪೊರೆಯಂ ಬಳಲ್ದು ತುಂ
ಬಿಗಳಿವೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆ ವೋಲ್

–ವಿಕ್ರಮಾರ್ಜುನ ವಿಜಯ–ಪಂಪ

ದೇಸಿ ಶಬ್ದಕ್ಕೆ ಚೆಲುವು ಎನ್ನುವ ಅರ್ಥವಿದ್ದರೂ, ಈಗ ನಾನು ಹೇಳಿರುವ ಅರ್ಥಕ್ಕಿಂತ ಅದು ಸಂಪೂರ್ಣವಾಗಿ ಬೇರೆಯಲ್ಲ. ಅಹಜವಾದದ್ದು, ಮೂರ್ತವಾದದ್ದು, ಆಡುವ ಮಾತು ಎನ್ನುವ ಮೂಲ ಅರ್ಥಗಳನ್ನು ದೇಸಿಗೆ ಮೊದಲು ಹೇಳಿ, ಕಾವ್ಯದಲ್ಲಿ ಈ ಬಗೆಯ ದೇಸಿಯ ಬಳಕೆಯಿಂದ ಬರುವ ವಿಶೇಷಾಂಶವನ್ನು, ಚೆಲುವನ್ನು ದೇಸಿ ಎಂದು ಕರೆಯಲಾಗಿದೆ. ದೇಸಿಯಿಂದ ಬಂದ ಚೆಲುವು ದೇಸಿ. ವರ್ಣಸುವಾಗ ತೀರಾ ಸಹಜವಾದದ್ದರಿಂದ ಬಂದ ಸೊಬಗನ್ನು ದೇಸಿ ಎನ್ನುತ್ತಾರೆ. ಆದ್ದರಿಂದ ನಾನು ದೇಸಿ ಎಂದರೆ ಚೆಲುವು ಎನ್ನುವ ಅದರ ಮೂಲವನ್ನು ಮಾತ್ರ ಗಮನಿಸಿದ್ದೇನೆ. ಹಾಗೆ ನೋಡಿದರೆ ದೇಸಿಯ ಮೂಲ ಅರ್ಥ ಮತ್ತು ಬೆಳೆದ ಅರ್ಥಗಳ ನಡುವೆ ವರ್ಗೀಕರಣ ಮುಖ್ಯವೆಂದು ನನ್ನ ಭಾವನೆ. ಏಕೆಂದರೆ ನಾವು ಇದುವರೆಗೂ ದೇಸಿಯ ಬೆಳೆದ ಅರ್ಥದೊಡನೆ ಮಾತ್ರ ವ್ಯವಹರಿಸುತ್ತಿದ್ದೇವೆ. ಆಡುಮಾತು, ನಾಣ್ಣುಡಿಗಳಿಗೆ ಸಂಭ್ರಮಿಸುತ್ತೇವೆ. ದೇಸಿಯ ಮೂಲ ಅರ್ಥವನ್ನು ಗಮನಿಸುವುದರಿಂದ ಕಾವ್ಯವ್ಯಾಪಾರದಲ್ಲಿ ಅದರ ಪಾತ್ರವನ್ನು ಗುರುತಿಸಲು ಸಾಧ್ಯವಾಗುತ್ತದೆ.

–ಡಾ. ಕೆ.ವಿ.ನಾರಾಯಣ

## 3.1 ಮುಂಜಾವು

**ಮೂಡ್ನಾಕೂಡು ಚಿನ್ನಸ್ವಾಮಿ**

೧

ಮುಂಜಾವು; ಪ್ರಕೃತಿ ತಣ್ಣಗೆ
ತನ್ನಂತೆ ತಾನೆ ನಿತ್ಯವೂ
ಕಾಲದ ಉಡುಗೆ ತೊಟ್ಟು ದರ್ಶಿಸುತ್ತಾಳೆ
ನಗರಗಳಲ್ಲಿ ಸ್ವಲ್ಪ ತೆಳುವಾಗಿಯಾದರೂ

ನಗರ ಸಿದ್ಧವಾಗುತ್ತದೆ ಸದ್ದಿನೊಂದಿಗೆ
ದೇಗುಲಗಳಲ್ಲಿ ಉನ್ಮಾದದ ಘಂಟಾನಾದ
ಸಮೂಹದ ಸಮ್ಮೋಹದ ಒಕ್ಕೊರಲ ಸ್ತೋತ್ರ ಮೈಕಿನ ಮುಂದೆ
ಗಟಾರದಂಚಿನಲ್ಲಿ ನಿಂತು
ತಣ್ಣೀರು ಹೊಯ್ದುಕೊಳ್ಳುವ ಬಯಲು ಸೀಮೆಯ ಬಡಕೂಲಿ
ದೂರದ ಮಿನಾರುಗಳಿಂದ ತೇಲಿಬರುವ ಅಲ್ಲಾನತ್ತ ಮೊರೆ
ನವಿಲು ಗರಿಯ ಬೀಸಣಿಗೆ ಹಿಡಿದು ಬರಬರ ನಡೆವ
ಬರಿಗಾಲ ದಿಗಂಬರ ಸನ್ಯಾಸಿಗೆ ಸರಸರ ಹಿಂಬಾಲಕರು
ರಸ್ತೆಗಳನ್ನ ಎಚ್ಚರಿಸುವ ಆಟೋರಿಕ್ಷಾಗಳ ಕರ್ಕಶಕ್ಕೆ
ಮನೆಯೊಳಗೆ ಪದ್ಮಾಸನಾರೂಢ
ಆನಪಾನ ಧ್ಯಾನಸ್ಥ ವೃದ್ಧನಿಗೆ ಕಿರಿಕಿರಿ

ಒಬ್ಬೊಬ್ಬರೂ ಒಂದೊಂದು ಥರ
ಬದುಕಿಗೆ ಮುಖ ಮಾಡುವುದು ಹೀಗೆ
ಲೋಕವೇನು ಸ್ವಸ್ಥವೆ, ಅಸ್ವಸ್ಥವೆ, ಏಕವೆ? ಅನೇಕವೆ?

೨

ಲಾಲ್‌ಬಾಗಿನತ್ತ ಅಡಿಯಿಡುತ್ತಾ
ಬೆಳಗಿನ ನಡಿಗೆಗೆ ಸಜ್ಜಾಗುವ ನಾನು

'ಔಚಿತ್ಯ' ಕಾವ್ಯಮೀಮಾಂಸೆಗೆ ಮೀಸಲಾದ ಪದವಾಗಿದೆ
ನಿತ್ಯ ಬದುಕಿಗೆ ಅದು ಬೇಕಿಲ್ಲ
ಮುಂದೆ ನಡೆಯುತ್ತಿರುವಾತನ ಜೇಬಿನೊಳಗೆ ಸಣ್ಣ ರೇಡಿಯೋ
ದೊಡ್ಡದಾಗಿ ಸುಪ್ರಭಾತ ಮಂತ್ರ ಪಠಿಸುತ್ತದೆ
ವಾಯುನಿರ್ಬಂಧೀ ಬುರ್ಖಾಧರಿಸಿ ವಿಹಾರಾರ್ಥ ಬಂದ
ಹೆಂಗಳೆಯರ ಏರೋಬಿಕ್ಸ್ ವ್ಯಾಯಾಮ ಮರದಡಿಯಲ್ಲಿ ನಡೆದಿದೆ
ಪಕ್ಕದವನ ಮುಜಗರಕ್ಕೆ ಕೇರುಮಾಡದವನೊಬ್ಬ
ಗಡಗಡ ಹೂಸು ಬಿಡುತ್ತಾನೆ
ಅಪರಿಚಿತ ಸಂಗಾತಿಗಳು ಇಂಥವರು

ಇಗೋ ವಿಶಾಲಹಸಿರಿನ ನಡುವೆ ಒಬ್ಬ
ಚಕ್ಕಮಕ್ಕಳ ಕುಳಿತ ಅರೆನಿಮೀಲಿತ ವ್ಯಕ್ತಿ ಧೇನಿಸುತ್ತಿದ್ದಾನೆ
ಎಫ್. ಎಮ್. ಅರಗಿಣಿಯ ಉವಾಚ ಆಲಿಸುತ್ತಾ!
ಹಿನ್ನೆಲೆಗೆ ಹಕ್ಕಿಗಳ ಚಿಲಿಪಿಲಿ
ನೀರವದಲ್ಲಿ ನುಗ್ಗುವ ಪಿಸುಗಾಳಿ ಸಾಕಾಗುವುದಿಲ್ಲವೇ?
ಒಳಗೊಳಗೆ ನನ್ನ ಪೇಚು

ಮತ್ತೊಬ್ಬ ಶಮೀವೃಕ್ಷಕ್ಕೆ ಪ್ರದಕ್ಷಿಣೆ ಹಾಕುತ್ತಿದ್ದಾನೆ
ಎಡಗೈಯಲ್ಲಿ ಮೊಬೈಲು ಹಿಡಿದು ನಿನ್ನೆಯ
ಅಬ್ಬರದ ವ್ಯಾಪಾರವನ್ನ ಬಡಬಡಿಸುತ್ತಾ !!
ಭಕ್ತಿ ಎಂಥ ಬವಣೆಗೆ ಸಿಕ್ಕಿ ನರಳುತ್ತಿದೆ?

ಸಾಕು ಗಾಳಿ ನೂಕುವ ಆಟ
ಬೆವರಿ ಕುಸಿದರೆ ಕಲ್ಲುಬೆಂಚಿನ ಮೇಲೆ
ಪಕ್ಕ ನಿವೃತ್ತರ ಮೆಲುಕು ವೃತ್ತಾಂತ ನಿತಾಂತ
ಚಕ್ಕನೆದ್ದು ಚಂಕಮನವನ್ನಾಶ್ರಯಿಸುವ ನಾನು

೩

ಪತ್ರಿಕೆ ಓದುವುದು ಎಂದರೆ ನಿನ್ನೆಯ ಲೋಕವನ್ನೊಮ್ಮೆ
ರಿವೈಂಡ್ ಮಾಡುವುದು
ಸಿನಿಮಾವೊಂದರ ಪ್ರೇರಣೆಯಿಂದ ಬಾಲಕನ ಆತ್ಮಹತ್ಯೆ
ಪ್ರೇಯಸಿಗಾಗಿ ಹೆಂಡತಿಯ ಕೊಲೆ, ಲಂಚಕೋರರ ಸೆರೆ
ಭಿನ್ನಮತ ಪರಿಹಾರದಲ್ಲಿ ಮುಳುಗಿದ ರಾಜಕಾರಿಣಿಗಳು
ಅಧಿಕಾರಸ್ಥರ ಮೋಜು
ಕುಡಿವ ನೀರು ಸರಬರಾಜಿನಲ್ಲೂ ಮಾಫಿಯಾ ಹಾವಳಿ ಇತ್ಯಾದಿ
ಲೋಕ ಸ್ವಸ್ಥವಾಗಿಲ್ಲ ಎಂಬ ದೃಢೀಕರಣ

ಎದ್ದು ಕಛೇರಿಗೆ ಹೊರಡಬೇಕಲ್ಲ
ಕರೆಂಟಿಲ್ಲ – ಬಿಸಿ ನೀರಿಲ್ಲ
ಗ್ಯಾಸಿನ ಒಲೆಯ ಮೇಲೆ ತಂಬಿಗೆ ನೀರು
ಹೆಂಡತಿಗೆ ಕಿರಿಕಿರಿ ಸಾಕು – ಮುಂಜಾವಿನ ವರದಿ
ಮುಗಿಯುತ್ತಿದೆ ಇಂದಿನ ಬೆಳಗೂ

* * * *

ಆಕರ: ಬುದ್ಧ ಬೆಳದಿಂಗಳು– ಮೂಡ್ನಾಕೂಡು ಚಿನ್ನಸ್ವಾಮಿ

# 3.2 ಅಗಸರ ಅಣ್ಣೆಮ್ಮ

**ಚೆನ್ನಣ್ಣ ವಾಲೀಕಾರ**

ಮಹಾತ್ಮಾಗಾಂಧೀಜಿಯವರ ಆಶೆಯ ಪ್ರಕಾರ ಹಳ್ಳಿಗಳ ಏಳಿಗೆಗಾಗಿ ಶಿಕ್ಷಕನಾಗಲು ಲಾ ಮಾಡುವುದು ಬಿಟ್ಟು ಬಿಎಡ್ ಮಾಡಿದೆ. ಸರಕಾರಿ ನೌಕರಿ ಸಿಗುವುದಕ್ಕೆ ಇನ್ನೂ ತಡವಿದ್ದುದರಿಂದ ಸದ್ಯ ಖಾಸಗಿ ಶಾಲೆ ಸೇರೋಣವೆಂದು ಹುಡುಕಾಡುತ್ತಿರುವಾಗ ಮುದ್ದಳ್ಳಿಯ ಹೈಸ್ಕೂಲ್‌ನಲ್ಲಿ ಒಂದು ಜಾಗ ಖಾಲಿ ಇರುವುದು ತಿಳಿದುಬಂತು. ಹೋದ ದಿನವೇ ನನ್ನನ್ನು ಶಾಲೆಗೆ ಸೇರಿಸಿಕೊಂಡರು. ಬಿಎಡ್ ಆದವನೆ ಮನೆತನಕ ಬಂದಾಗ ಯಾರು ಬಿಡುವರು?

ನಗರ ಪಟ್ಟಣಗಳಿಂದ ದೂರ ಬಹುದೂರವಾದ ಊರು ಮುದ್ದಳ್ಳಿಯಾಗಿತ್ತು. ಹೆಸರೇನೂ ಮುದ್ದಾದ ಹಳ್ಳಿ – ಮುದ್ದಳ್ಳಿಯಾಗಿತ್ತು. ನಾನಲ್ಲಿಗೆ ಹೋದ ಒಂದೆರಡು ತಿಂಗಳೊಳಗಾಗಿ ಇದು ಮುದ್ದಳ್ಳಿಯಲ್ಲ ಪೆದ್ದಳ್ಳಿ ಎಂದು ಅನಿಸತೊಡಗಿತು. ಊರಹೊರಗೆ ಕಟ್ಟಿಸುತ್ತಿರುವ ಶಾಲಾ ಕಟ್ಟಡ ಇನ್ನೂ ಪೂರ್ಣಗೊಳ್ಳದ್ದರಿಂದ ಶಾಲಾ ಸಂಸ್ಥೆಯ ಅಧ್ಯಕ್ಷರಾದ ಗೌಡರ ಗೋದಾಮಿನಲ್ಲಿ ನಡೆಸಲಾಗುತ್ತಿತ್ತು. ಇದರಿಂದ ನಮಗೆ ವಾರಕ್ಕೆ ಎರಡು ದಿವಸ ರಜೆ ಸಿಗುತ್ತಿತ್ತು. ಒಂದು ಸರಕಾರಿ ಲೆಕ್ಕದ ಪ್ರಕಾರ ರವಿವಾರ, ಸಂತೆಯ ದಿನವಾದ ಸೋಮವಾರ. ಆ ದಿವಸ ಸುತ್ತಮುತ್ತ ಹಳ್ಳಿಯ ರೈತರು ಜೋಳ, ತೊಗರೆ, ಅಗಸೆ, ಸಜ್ಜಿ, ಎಳ್ಳು, ಅಲಸಂದಿ, ಹೆಸರು, ಕುಬುಸಿ, ಉದ್ದು, ಗೋಧಿ ಮಾರಲು, ಕಾಟಾ ಮಾಡಲು ಬರುತ್ತಿದ್ದರು. ರವಿವಾರ ಶಾಲೆ ಇದ್ದು ಸೋಮವಾರ ಒಂದೇ ದಿವಸ ರಜೆ ಕೊಡಬೇಕೆಂದರೆ ಒಕ್ಕಲಿಗರು ರವಿವಾರ ದಿವಸವೇ ತಮ್ಮ ಸಾಮಾನುಗಳನ್ನು ಬಂಡಿಯಲ್ಲಿ ಹೇರಿಕೊಂಡು ಬಂದು ಗೋದಾಮದ ಮುಂದೆ ಬಿಡುತ್ತಿದ್ದರು. ಹೀಗಾಗಿ ನಿರ್ವಾವಿಲ್ಲದೆ ಎರಡು ದಿವಸ ಹೈಸ್ಕೂಲಿಗೆ ರಜೆ ಕೊಡಬೇಕಾಗುತ್ತಿತ್ತು, ಅದಕ್ಕಾಗಿ ಶನಿವಾರ ಪೂರ್ಣ ದಿವಸ ಇರಬೇಕಾಗುತ್ತಿತ್ತು.

ದೇಶಕ್ಕೆ ಸ್ವಾತಂತ್ರ್ಯ ಬಂದು ಮೂವತ್ತು ವರುಷಗಳಾಗಿದ್ದವು. ಈ ಊರಿಗೆ ಅದು ಬಂದದ್ದು ಗೊತ್ತಾಗಿರಲಿಲ್ಲ. ಶಾಲೆಗೆ ಓದಲು ಬರುವ ಗೌಡ ಕುಲಕರ್ಣಿ, ಸಾಹುಕಾರರ ಮಕ್ಕಳಿಗೆ ಮಾಸ್ತರರಾದವರು ಯಾವ ಪ್ರಶ್ನೆ ಕೇಳುವಂತಿರಲಿಲ್ಲ. ಹಾಗೇನಾದರೂ ಅಪ್ಪಿತಪ್ಪಿ ಕೇಳಿದರೆ ಆ ದಿನ ಊರಲ್ಲಿ ಆ ಮಾಸ್ತರನ ಮೆರವಣಿಗೆ ಆಗುತ್ತಿತ್ತು. ಹಾಗೆ ಆ ಹುಡುಗರು ಓದದಿದ್ದರೂ, ಬರೆಯದಿದ್ದರೂ ಪಾಸು ಮಾಡಬೇಕಾಗುತ್ತಿತ್ತು. ಇಲ್ಲದಿದ್ದರೆ ಅವರ ವಾಲಗ ಮಾಡಲಾಗುತ್ತಿತ್ತು ಏನೇ ಹೇಳುವುದು ಕೇಳುವುದು ಕೆಳಗೇರಿ ಹುಡುಗರಿಗೆ ಮೀಸಲಾಗಿತ್ತು.

ಈ ಊರಿನ ಗೌಡ ಶಾಲಾ ಸಂಸ್ಥೆಗೆ ಅಧ್ಯಕ್ಷನಾಗಿದ್ದರೆ, ಕುಲಕರ್ಣಿ ಕಾರ್ಯದರ್ಶಿಯಾಗಿದ್ದ. ಸಾಹುಕಾರ ಕೋಶಾಧ್ಯಕ್ಷನಾಗಿದ್ದ. ಈ ಮೂರು ಜನರು ಪ್ರತಿಷ್ಠೆಗಾಗಿ ಒಳಗೊಳಗೆ ಕಚ್ಚಾಡುತ್ತಿದ್ದುದರಿಂದ ಇವರ ಸಲುವಾಗಿ ಊರು ಮೂರು ಭಾಗವಾಗಿ ಹೋಗಿತ್ತು. ಈ ಮೂವರ ಮಧ್ಯ ಕಾಲ ಕಾಲದಿಂದಲೂ ಬಂದ ಮನೆತನಗಳ ಜಗಳವಿತ್ತು, ಹೊಟ್ಟೆ ಪಾಡಿಗೆಗಾಗಿ ನೌಕರಿಗೆ ಬಂದ ಶಿಕ್ಷಕರಿಗೆ ಯಾರ ಕಡೆಗಾದರೂ ತೊಂದರೆ ಕಾಡುತ್ತಿತ್ತು.

ಈ ಊರಿನ ಈ ಮೂರು ಪ್ರಮುಖ ಜನರ ಗುಣ ಸ್ವಭಾವ ಲಕ್ಷಣಗಳು ತುಂಬ ವಿಚಿತ್ರವಾಗಿದ್ದವು. ಈ ಮೂವರು ಮಂದಿಕಣ್ಣಿಗೆ ಒಬ್ಬರಿಗೊಬ್ಬರು ದ್ವೇಷಿಸುತ್ತಿದ್ದರು. ಆದರೆ ಇವರೆಂದೂ ಜಗಳವಾಡುತ್ತಿರಲಿಲ್ಲ. ಒಬ್ಬರು ಕೈಹಾಕಿದ್ದಕ್ಕೆ ಇನ್ನೊಬ್ಬರು ಕೈಹಾಕುತ್ತಿರಲಿಲ್ಲ. ಪ್ರತಿವರುಷ ಸಾಹುಕಾರ ಊರ ತಿಪ್ಪೆಗಳನ್ನು ಗುತ್ತಿಗೆ ಹಿಡಿದು ಗೊಬ್ಬರ ತನ್ನ ಹೊಲಕ್ಕೆ ಹೊಡಿಸುವಾಗ ಕುಲಕರ್ಣಿ ಅಡ್ಡ ಬರುತ್ತಿರಲಿಲ್ಲ, ಹೊಳೆದಂಡೆಗೆ ಬೆಳೆದ ಜಾಲಿಗಿಡಗಳನ್ನು ಕುಲಕರ್ಣಿ ಗುತ್ತಿಗೆ ಹಿಡಿದು ಕಡಿಸುವಾಗ ಗೌಡ ಆಡ್ಡ ಬರುತ್ತಿರಲಿಲ್ಲ. ಊರಲ್ಲಿ ನಡೆವ ತಂಟೆ ತಕರಾರು ಜಗಳಗಳನ್ನು ಬಗೆಹರಿಸುವಾಗ ಗೌಡ ಒಬ್ಬರಿಗೆ ಎತ್ತಿ ಒಬ್ಬರಿಗೆ ಇಳಿಸಿ ತಿನ್ನುವಾಗ ಸಾಹುಕಾರ ಅಡ್ಡ ಬರುತ್ತಿರಲಿಲ್ಲ. ಕೆಳಗಿನ ಜನರನ್ನೆಲ್ಲ ತಮ್ಮ ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಈ ಮೂರು ಜನ ಈ ಬಗೆಯ ಆಟ ಆಡುತ್ತಿದ್ದರು.

ನಮ್ಮ ಶಾಲೆ ಮುಂಜಾನೆ ಹತ್ತಕ್ಕೆ ಶುರುವಾಗುತ್ತಿತ್ತು. ಸಂಜೆ ನಾಲ್ಕಕ್ಕೆ ಬಂದಾಗುತ್ತಿತ್ತು. ಮಧ್ಯಾಹ್ನ ಒಂದರಿಂದ ಎರಡರವರೆಗೆ ಊಟಕ್ಕೆ ಬಿಡಲಾಗುತ್ತಿತ್ತು. ಎಂಟನೆಯ ವರ್ಗದಲ್ಲಿ ಐವತ್ತು, ಒಂಬತ್ತನೆಯ ವರ್ಗದಲ್ಲಿ ನಲುವತ್ತು , ಹತ್ತನೆಯ ವರ್ಗದಲ್ಲಿ ಮೂವತ್ತು–ಮೂರು ವರ್ಗ ಸೇರಿ ಒಟ್ಟು ನೂರಾ ಇಪ್ಪತ್ತು ಹುಡುಗರು ಇದ್ದರು. ಈಗ ಚೆಕ್ ಪದ್ಧತಿ ಬಂದರೂ ಹೆಡ್‌ಮಾಸ್ತರ್ ಮಾತ್ರ ಪ್ರತಿನಿತ್ಯ ಸಂಜೆ ಗೌಡ, ಕುಲಕರ್ಣಿ, ಸಾಹುಕಾರರ ಮನೆಗೆ ಹೋಗಿ ಬರುತ್ತಿದ್ದರು. ನಿತ್ಯ ಶಾಲೆಯಲ್ಲಿ ನಡೆದುದನ್ನು ಒಪ್ಪಿಸಿ ಬರುತ್ತಿದ್ದರು. ನನಗೆ ಇದು ತುಂಬ ವಿಚಿತ್ರವಾಗಿ ತೋರುತ್ತಿತ್ತು. ಇದೊಂದು ವರುಷ ಮುಗಿಯಲಿ, ಹೇಗೂ ಬಂದುದಾಗಿದೆ. ಮುಂದಿನ ವರುಷ ಇಲ್ಲಿಗೆ ಬರುವುದು ಬೇಡ ಎಂದು ಒಳಗೊಳಗೆ ಆಲೋಚಿಸತೊಡಗಿದೆ. ಇಲ್ಲಿ ಹೆಸರಿಗೆ ಗಾಳಿ ಬೀಸುವುದು, ಬೆಳಕು ಚಲಿಸುವುದು, ನೀರು ಹರಿಯುವುದು, ಮನೆ ಬೀಳುವುದು, ಹಸಿರು ಚಿಗಿಯುವುದೆಂದೆನಿಸುತ್ತಿತ್ತು. ಆದರೆ ಜನರ ಮನಸ್ಸಿನ ಗವಿಮಾತ್ರ ಕಗ್ಗತ್ತಲೆಯಿಂದ ತುಂಬಿಕೊಂಡಿದೆ ಎಂದೆನಿಸಿತು.

ಹೊಲಗೇರಿ ಮಾದರಗೇರಿ ಮಧ್ಯ ಖಾಲಿ ಇರುವ ಜಾಗದಲ್ಲಿ ಮುಂಬಯಿಯಿಂದ ಬಂದ ಪಾಡೇವಾರ ಶಿವಪ್ಪ ಮನೆಕಟ್ಟಿಸುವುದು ನೋಡಿ ಗೌಡ ಅಲ್ಲಿಗೆ ಓಡಿಹೋದನು. ಕುಲಕರ್ಣಿ ಸಾಹುಕಾರರನ್ನು ಇಲ್ಲಿಗೇ ಕರೆಸಿದನು. ಗುಟ್ಟಾಗಿ ದೂರ ಕರೆದುಕೊಂಡು ಹೋಗಿ, 'ಇಲ್ಲಿ ಮನೆ ಕಟ್ಟಿಸಲು ಅವಕಾಶ ಕೊಡಬಾರದು. ಈ ಎರಡು ಕೇರಿಗಳು ಯಾವಾಗಲೂ ದೂರದಲ್ಲಿಯೇ ಕಚ್ಚಾಡುತ್ತಾ ಇರಬೇಕು.

ಈ ಎರಡು ಕೇರಿಗಳು ಒಂದಾದರೆ ಮುಂದಿವರು ಒಂದಾಗಿ ನಮ್ಮ ಮಾತು ಕೇಳುವುದಿಲ್ಲ ತಿರುಗಿ ಬೀಳುವರು' ಎಂದಾಗ ಅವರು 'ನೀವು ಹೇಳಿದಂತೆ ಕೇಳುವವು' ಎಂದರು. ಅವರನ್ನು ಕರೆದುಕೊಂಡು ಶಿವಪ್ಪನಲ್ಲಿಗೆ ಬಂದು "ಇಲ್ಲಿ ಮುಂದ ಗಾರ್ಡನ್ ಮಾಡಬೇಕಾಗ್ಯಾದ, ಆದ್ದರಿಂದ ನೀ ಮನೆ ನಿಮ್ಮ ಕೇರಿ ಹಿಂದೆ ಇರೋ ಜಾಗದಾಗ ಕಟ್ಟಿಸಿಕೊ' ಎಂದು ಹೇಳಿ ಹೋದರು. ಅವರಾಡಿದ್ದ ಕಾನೂನಾಯಿತು. ಹೇಳಿದ್ದೆ ಪಂಚಾಯತ್ ಆಯಿತು.

ಹಾಗೆ ಹೆಸರಿಗೆ ಪೊಲೀಸ್ ಸ್ಟೇಶನ್ ಇತ್ತು. ಈ ಊರಿಗೆ ಬರುತ್ತಿದ್ದ ಎಲ್ಲ ಸಬ್‌ಇನ್ಸ್ಪೆಕ್ಟರ್‌ಗಳು ಈ ಊರಿನ ಈ ಮೂರು ಪ್ರಮುಖರು ಹೇಳಿದಂತೆ ಕೇಳುತ್ತಿದ್ದರು. ಈ ಮೂರು ಜನರ ಮಾತಿಗೆ ಅಡ್ಡ ಬರುತ್ತಿರಲಿಲ್ಲ, ಅವರು ಹೇಳಿದವರನ್ನು ಒಳಗೆ ಹಾಕುತ್ತಿದ್ದರು. ಬಿಡು ಎಂದವರನ್ನು ಬಿಡುತ್ತಿದ್ದರು. ಇವರಿಗೆ ಎದುರುಹಾಕಿಕೊಂಡು ಯಾಕೆ ಬರುವ ಲಾಭ ತಪ್ಪಿಸಿಕೊಳ್ಳಬೇಕೆಂದು ಇಲ್ಲಿಗೆ ಬಂದಂಥ ಎಲ್ಲ ಸಬ್‌ಇನ್ಸ್ಪೆಕ್ಟರ್, ಕಾನ್‌ಸ್ಟೇಬಲ್‌ಗಳು ಈ ಮೂವರು ಹೇಳಿದಂತೆ ಕೇಳುತ್ತಿದ್ದರು. ಬಾಲ ಮುದುರಿಕೊಂಡು ಇರುತ್ತಿದ್ದರು. ಈ ಮೂವರ ಮನೆಯಿಂದ ಬರುವ ದವಸ ಧಾನ್ಯಕ್ಕಾಗಿ ಬಾಯಿಮುಚ್ಚಿಕೊಂಡಿರುತ್ತಿದ್ದರು.

ಒಂದು ದಿವಸ ಹಾಡಹಗಲೇ ಖಾನಾವಳಿ ಸಂಗಪ್ಪ ಕೊಡಬೇಕಾಗಿದ್ದ ಸಾಲ ಕೊಡಲಾಗದಕ್ಕೆ ಸಾಹುಕಾರ ಅವರ ಮನೆಯನ್ನು ಲೂಟಿ ಮಾಡಿಸಿದರೂ ಪೊಲೀಸರು ಕೇಳಲಿಲ್ಲ. ಕೊಟ್ಟ ಸಾಲ ಬೇಗ ಕೊಡಲಿಲ್ಲವೆಂದು ಗೌಡ, ಮಿಡ್ಲಸ್ಕೂಲ್ ಮಾಸ್ತರನೊಬ್ಬನಿಗೆ ಎತ್ತಿನಗೂಟಕ್ಕೆ ಕಟ್ಟಿಹಾಕಿ ಹೊಡೆದರೂ ಒಬ್ಬರೂ ಕೇಳಲಿಲ್ಲ. ಮನೆಗೆ ಬಂದು ನೋಡಿ ಹೋಗಲು ನಿರಾಕರಿಸಿದ್ದಕ್ಕೆ ಸರಕಾರಿ ಡಾಕ್ಟರರಿಗೆ ಕುಲಕರ್ಣಿ ಮೆಟ್ಟಿನಿಂದ ಹೊಡೆಸಿದರೂ ಒಬ್ಬರೂ ಕೇಳಲಾರದ್ದು ನೋಡಿ ನನಗೆ ಇದು ಊರೊ ಅಡವಿಯೊ ಎಂಬ ಚಿಂತೆ ಹತ್ತಿತು. ಒಂದಾರು ತಿಂಗಳಲ್ಲಿ ಊರು ಸಾಕುಸಾಕಾಗಿ ಹೋಯಿತು. ಅದರಲ್ಲೂ ಕೊನೆಗೆ ಅಲ್ಲಿಂದ ಬರುವಾಗ ನಡೆದ ಘಟನೆ ನನ್ನ ಮನಸ್ಸಿಗೆ ದೊಡ್ಡ ಗಾಯ ಮಾಡಿತು.

* * *

ಈ ಊರಿಗೆ ಬಂದಾಗ ನನ್ನ ಕಿವಿಗೆ ಬಿದ್ದ 'ಅಣ್ಣೆಮ್ಮ' ಪದದ ಬಗ್ಗೆ ಭಾಷಾ ಶಾಸ್ತ್ರಜ್ಞನಾದ ನನಗೆ ಆಲೋಚನೆ ಆರಂಭವಾಯಿತು. ಅಣ್ಣೆಮ್ಮನೆಂಬ ದೇವತೆ ಇದ್ದಾಗಲೂ ಮೂಲ ರೂಪ ಹೇಗೆ ಹುಟ್ಟಿತ್ತೆಂಬುದು ಪೀಡಿಸತೊಡಗಿತು. ಹುಡುಗರಿಗೆ ಪ್ರೀತಿಯಿಂದ ಅಣ್ಣ ಅನ್ನುವಂತೆ ಹುಡುಗಿಗೆ ಪ್ರೀತಿಯಿಂದ ಅಣ್ಣಿ ಎನ್ನುತ್ತಿರಬೇಕು. ಈ ಅಣ್ಣಿಗೆ ಮುಂದೆ ಅಣ್ಣೆಮ್ಮನೆಂದು ಕರೆದಂತೆ ಕಾಣುವುದು. ಅಗಸರ ಬಸಪ್ಪನಿಗೆ ಹುಟ್ಟಿದ ಮಕ್ಕಳೆಲ್ಲ ಸತ್ತು ಸತ್ತು ಹೋಗಿದ್ದವು. ಕೊನೆಗೆ ಒಬ್ಬಳೇ ಮಗಳು ಉಳಿದದ್ದರಿಂದ ಪ್ರೀತಿಯಿಂದ ಅಣ್ಣಿ ಅಣ್ಣಿ ಎಂದು ಕರೆಯುತ್ತಿದ್ದರು. ಮುಂದೆ ಈ ಅಣ್ಣಿಯೇ ಆಣ್ಣೆಮ್ಮನೆಂದಾಯಿತು. ಅಣ್ಣಮ್ಮ ಲೋಕದ ಹೆಸರಿಗೆ ತಕ್ಕಂತೆ ಇರಲಿಲ್ಲ. ಆಕೆ ಮಣ್ಣೆಮ್ಮನಾಗಿದ್ದಳು. ನಿತ್ಯ ಏಳುವುದು, ಮನೆಗೆಲಸ ಮಾಡುವುದು, ತಾಯ್ತಂದೆ ತಂದ ಬಟ್ಟೆಗಳನ್ನು ಊರ ಹೊಳೆಗೆ ಅವರ ಜೊತೆಗೆ ಒಯ್ಯುವುದು. ಒಗೆದು ಮಧ್ಯಾಹ್ನ

ಒಣಗಿಸುವುದು, ಸಂಜೆ ಹೊತ್ತು ತಂದು ಊರ ಜನರ ಆಯಾ ಮನೆಗಳಿಗೆ ಮುಟ್ಟಿಸುವುದು, ಊರವರು ಕೊಟ್ಟ ರೊಟ್ಟಿಗಳನ್ನು ತೆಗೆದುಕೊಂಡು ಮನೆಗೆ ತಂದು ತಿನ್ನುವುದು. ಚಳಿಗಾಲ ಇರಲಿ, ಮಳೆಗಾಲ ಇರಲಿ, ಬೇಸಿಗೆ ಕಾಲ ಇರಲಿ, ಇದು ಅಣ್ಣೆಮ್ಮನ ನಿತ್ಯದ ಕರ್ತವ್ಯವಾಗಿತ್ತು. ರಾಶಿಕಾಲದಲ್ಲಿ ತಾಯ್ತಂದೆಗಳ ಜೊತೆಗೆ ಹೊಲದ ಮೇಲೆ ಹೋಗುತ್ತಿದ್ದಳು. ಕುಂಚಿಯಲ್ಲಿ ಇಲ್ಲವೇ ಚೀಲದಲ್ಲಿ ಜೋಳ, ತೊಗರಿ, ಸಜ್ಜ , ಗೋಧಿ, ಪುಂಡಿ, ನವಣಿ, ಎಳ್ಳು ,ಹೆಸರು, ಅಲಸಂಡಿ, ಉದ್ದು ತಮ್ಮ ಹೊಲದಲ್ಲಿ ಹೀಗೆ ಬೆಳೆದುದರಲ್ಲಿ ನಾಲ್ಕೆಂಟು ಸೇರು ರೈತರು ಕೊಟ್ಟಿದ್ದನ್ನು ತೆಗೆದುಕೊಂಡು ಮನೆಗೆ ಬರುತ್ತಿದ್ದಳು. ಅಣ್ಣಮ್ಮ ಪಾದರಸದಂಗಿದ್ದಳು. ಕುಂತಲ್ಲಿ ಕೂಡುತ್ತಿರಲಿಲ್ಲ, ನಿಂತಲ್ಲಿ ನಿಲ್ಲುತ್ತಿರಲಿಲ್ಲ. ಆಕೆ ಅವ್ವನ ಗುಣದವಳಾಗಿದ್ದಳು. ಆಕೆಗೆ ಯಾವಾಗಲೂ ಒಂದು ಕೆಲಸ ಬೇಕು ಕೆಲಸ ಇಲ್ಲದಿದ್ದರೆ ಬೇಚೈನ್ ಆಗತ್ತಿದ್ದಳು.

ಪಾತರಗಿತ್ತಿ ಪಕ್ಕದಂಗೆ ಚೆಲುವ ಇರುವ ಅಣ್ಣಮ್ಮ ಪ್ರತಿನಿತ್ಯ ಸಂಜೆ ಮುಂಜಾನೆ ತಮ್ಮ ಮನೆಗೆ ಬಂದು ಹೋಗುವುದು ಗೌಡನ ಮಗ ನೋಡಿದನು. ಅವನಿಗಿನ್ನೂ ಲಗ್ನವಾಗಿರಲಿಲ್ಲ. ಲಗ್ನ ಮಾಡಬೇಕೆಂದು ಗೌಡ ಓಡಾಡುತ್ತಿದ್ದನು. ತಮ್ಮ ಮನೆತನಕ್ಕೆ ಯೋಗ್ಯಳಾದ ಕನ್ಯ ಬೇಕೆಂದು ಅವನು ಲೆಕ್ಕ ಹಾಕುತ್ತಿದ್ದನು. ಹೀಗಾಗಿ ಕನ್ಯಾ ಹುಡುಕುವುದು ತಡವಾದಂತೆ ಗೌಡನ ಮಗನ ಚೆಲ್ಲಾಟ ಹೆಚ್ಚಾಗುತ್ತ ನಡೆಯಿತು. ಗೌಡನಿಗೊ ಇರಲಿಕ್ಕೆ ಒಬ್ಬನೇ ಮಗನು. ಲಾಡದಂತೆ ಬೆಳೆದಿದ್ದನು. ಅವನು ಮಾಡಿದ್ದೆ ಮಾರ್ಗ, ಆಳಿದ್ದೆ ಅರಸೊತ್ತಿಗೆ, `ಪಾರಿಯಲ್ಲಿರುವ ಸೈಕಲ್ಲುಗಳ ಬೆಲ್ಲು ಬಾರಿಸಬೇಕೆನ್ನುವ, ಹವಾ ಬಿಡಬೇಕೆನ್ನುವ, ವಿಚಾರ ಮಾಡಿದಂತೆ ಆಕೆಯನ್ನು ಕಂಡಾಗಲೆಲ್ಲ ಗೌಡನ ಮಗನಿಗೆ ಏನೇನೋ ಅನಿಸುತ್ತಿತ್ತು. ಮೈನೆರೆಯಲು ಇನ್ನೊಂದಾರು ತಿಂಗಳಿತ್ತು, ಅವನಿಗೆ ಎಷ್ಟು ತಡೆಹಿಡಿಯಬೇಕೆಂದರೂ ಜೀವ ಕೇಳಲಿಲ್ಲ. ಒಂದು ಸಂಜೆ ಆಕೆ ಎಂದಿನಂತೆ ಬಟ್ಟೆ ಹಾಕಲು ಬಂದಳು. ಬಟ್ಟೆ ಹಾಕಿ ರೊಟ್ಟಿ ತೆಗೆದುಕೊಂಡು ಹೋಗುತ್ತಿದ್ದಾಗ ಗೌಡನ ಮಗ ಹಿಂದೆ ಹೋದನು. ಆಗ ಸಣ್ಣ ಕತ್ತಲಾಗುತ್ತಿತ್ತು, ಯಾರೂ ಇಲ್ಲದ್ದು ನೋಡಿ ಆಕೆಯನ್ನು ಹಿಡಿದನು. ಕುಬುಸಕ್ಕೆ ಕೈಹಾಕಿದಾಗ ಆಕೆ ಗಸಕ್ಕನೆ ತಿರುಗಿ ಕಾಳಿಯಂತಾಗಿ ಅವನ ಕೈಗೆ ಮಾಂಸ ಕಿತ್ತು ಬರುವಷ್ಟು ಕಚ್ಚಿ ಹಾರುತ್ತ ಓಡಿದಳು. ಅಣ್ಣಮ್ಮ ಕಚ್ಚಿದೇಟಿಗೆ ಗೌಡನ ಮಗ 'ಸತನಪೋ ಸತನಪೊ' ಎಂದು ನೆಲಕ್ಕೆ ಬಿದ್ದನು. ಮನೆ ಜನರೆಲ್ಲರೂ ಹೌಹಾರಿ 'ಏನಾಯ್ತು? ಏನಾಯ್ತು' ಎಂದು ಓಡಿಬಂದರು. ಬಲಗೈಯಿಂದ ರಕ್ತ ಧಳದಳ ಸೋರುತ್ತಿತ್ತು. ಕತ್ತಿಯಿಂದ ಕಡಿದಷ್ಟು ಮಾಂಸ ಹೊರಬಂದಿತ್ತು. ಎಲ್ಲರೂ ಸುತ್ತುಮುತ್ತಾಗಿ ಕೇಳುತ್ತಿದ್ದಾರೆ. ಏನು ಹೇಳುವುದು? ಬಿದ್ದಲ್ಲಿಯೇ ನೋಡಿದನು. ಎದುರಿಗೆ, ಎದುರು ಬಂದವರಿಗೆ ಕಚ್ಚುವ ಏಳುಗೇಣಿನ ಕುದುರೆ ಕಾಣಿಸಿತು. ತತ್‌ಕ್ಷಣವೇ ಕುದುರಿ ಎಪೊ ಕುದಿರಿ ಎಪೂ ಎಂದು ಚೀರತೊಡಗಿದನು. ಆಗಿಂದಾಗಲೇ ಯಾದಗಿರಿಯಲ್ಲಿರುವ ತಮ್ಮ ಆಡತಿಗೆ ಫೋನ್ ಮಾಡಿ ಕಾರು ತರಿಸಿ ಕಾರಿನಲ್ಲಿ ಹಾಕಿಕೊಂಡು ಕಲಬುರ್ಗಿ ಆಸ್ಪತ್ರೆಗೆ ತಂದು ಹಾಕಿದರು. ಗುಣವಾಗುವವರೆಗೆ ಒಂದೆರಡು ವಾರ ಅಲ್ಲಿದ್ದು

ಊರಿಗೆ ಬಂದನು. ಊರಿಗೆ ಬಂದ ನಂತರ ತನಗೆ ಕಚ್ಚಿ ಗೋಳಾಡಿಸಿದ ಆಗಸರ ಅಣ್ಣಮ್ಮನ ಮೇಲೆ ತನ್ನ ಸೇಡು ತೀರಿಸಿಕೊಳ್ಳಬೇಕೆಂದು ಅರಗಚ್ಚಾದ ಹಾವಿನಂತೆ ಆಕೆಗಾಗಿ ಡಾವ್ ಹಾಕಿ ಕುಳಿತನು.

ಅಣ್ಣಮ್ಮ ಗೌಡರ ಮನೆಯಿಂದ ಉಸುರು ಬಿಡುತ್ತ ಹಾರುತ್ತ ಬಂದವಳೆ ಮನೆಯ ಬಾಗಿಲು ಮುಚ್ಚಿ ನಡೆದ ಸಂಗತಿಯನ್ನು ತಾಯ್ತಂದೆಗಳಿಗೆ ಹೇಳಿದಳು. ಅವರು ಈ ಸುದ್ದಿ ಕೇಳಿ ಹೆದರಿದರು. ತಾವು ಬಡವರು, ಹಿಂದೆ ಮುಂದೆ ಯಾರೂ ಇಲ್ಲದವರು, ಗೌಡರು ಇದ್ದವರು. ಅಧಿಕಾರಸ್ಥರು. ಊರಲ್ಲಿ ಅವರು ಹೇಳಿದ್ದೇ ರಾಜ. ಹಗಲಿಗೆ ರಾತ್ರಿ, ರಾತ್ರಿಗೆ ಹಗಲೆಂದು ಅವರು ಹೇಳಿದರೆ ಊರ ಜನ ಹಾಗೆ ಹೇಳುತ್ತಿದ್ದರು. ಯಾರೂ ಎದುರಾಗಿ ಅವರಿಗೆ ಮಾತನಾಡುತ್ತಿರಲಿಲ್ಲ, ಗೌಡ ಊರಿಗೆ ಹೊರಟರೆ, ಊರಿಗೆ ಹೋಗಿ ಹಿಂತುರಿಗಿ ಬಂದರೆ, ಹೊಲಕ್ಕೆ ಹೊರಟರೆ ದಾರಿಯಲ್ಲಿ ಕುಳಿತವರು ಅವರು ಹೋಗುವತನಕ ಎದ್ದು ನಿಲ್ಲುತ್ತಿದ್ದರು. ಗೌಡ ಹಬ್ಬ ಮಾಡೆಂದರೆ ಹಬ್ಬ ಮಾಡುತ್ತಿದ್ದರು. ಹುಣ್ಣಿಮೆ ಮಾಡೆಂದರೆ ಹುಣ್ಣಿಮೆ ಮಾಡುತ್ತಿದ್ದರು. ತನ್ನ ಮಾತು ಮೀರಿದವರಿಗೆ ಕರಿನೀರು ತರುತ್ತಿದ್ದನು ಗೌಡ,

ಅಣ್ಣೆಮ್ಮನ ತಾಯ್ತಂದೆಗಳಿಗೆ ಗೌಡ ಈ ಹಿಂದೆ ಊರಲ್ಲಿ ಮಾಡಿದ ಘಟನೆಗಳು ಕಣ್ಣೆದುರಿಗೆ ಬಂದವು. ತನ್ನ ಹೊಲದಲ್ಲಿ ಹೊಕ್ಕ ಎತ್ತು ಎಮ್ಮೆ ಆಡು, ಆಕಳುಗಳನ್ನು ಹೇಳದೆ ಕೇಳದ ಮನೆ ಸೇರಿಸಿಕೊಳ್ಳುತ್ತಿದ್ದನು. ಈ ನಿಯಮದ ಪ್ರಕಾರ ಪಕ್ಕದೂರಿನ ಗೌಡನ ಎತ್ತುಗಳು ಬಂದು ಹೊಕ್ಕವು, ಅವುಗಳನ್ನು ಹಿಡಿದು ತಂದು ಆಳುಗಳು ಮನೆಯಲ್ಲಿ ಕಟ್ಟಿಹಾಕಿದರು. ಪಕ್ಕದೂರಿನ ಗೌಡನೆಷ್ಟೇ ಬಂದು ವಿನಂತಿಸಿಕೊಂಡರೂ ಹೇಳಿದರೂ ಕೇಳಿದರೂ ಎತ್ತುಗಳನ್ನು ಬಿಡಲಿಲ್ಲ. 'ಈ ಎತ್ತಿನ ಕಾಲಾಗ ಬೇಕಾದೋಟು ಕೋರ್ಟು ಕಚೇರಿ ಆಗ್ಲಾಕ, ಜೀವಜಾನ ಹೋಗ್ಲಾಕ, ನನ್ನ ಮನಿನೇ ಇದರ ಕಾಲಾಗಲೂಟ್ಯಾಗಲಿ, ಎತ್ತು ಮಾತ್ರ ಕೋಡೋದು ಸುಳ್ಳ' ಎಂದು ಹಠಹಿಡಿದು ಕುಳಿತಾಗ ಬಂದಗೌಡರು ಮೂಕರಾಗಿ ಸುಮ್ಮನೆ ಏನೋ ತೋಚದೆ ಹೋದರು. ಇದರ ಲಾಭಹಾನಿಗಳ ಬಗ್ಗೆ ಅಲೋಚಿಸುತ್ತ ನಡೆದರು.

ಇನ್ನೊಮ್ಮೆ ಒಬ್ಬನು ಏಳುಗೇಣಿನ ಕುದುರೆ ಸವಾರಿ ಮಾಡುತ್ತ ಬರುತ್ತಿದ್ದನು. ಗೌಡನಮಗ 'ಎಪ್ಪಾ ಆ ಕುದುರೆ ಬೇಕೂ, ಆ ಕುದುರೆ ಬೇಕೂ ಎಂದು ಬೇಡತೊಡಗಿದಾಗ ಕೇಳುವುದೇನು? ತನ್ನ ಆಳುಗಳಿಗೆ ಹಚ್ಚಿ ತನ್ನ ಮನೆಗೆ ಆ ಕುದುರೆ ಸಹಿತ ಅದರ ಸವಾರನನ್ನು ಕರೆಸಿಕೊಂಡನು. ಅವನು ಮಾರಾಟ ಮಾಡಲು ಸಿದ್ದನಿಲ್ಲದಾಗ ಏನ ನೋಡ್ಲಾ ಕತ್ತಿರಿಲೆ, ಕುದುರಿ ಒಳಗ ಕಟ್ರ, ಯಾರೇನ ಮಾಡ್ತಾರ ನೋಡ್ತೀನಿ?" ಎಂದಾಗ ಆ ಸವಾರ ಅಂಜಿ ಅವರು ಹೇಳಿದ್ದಷ್ಟಕ್ಕೆ ಕುದುರೆ ಮಾರಿ ಹೋದದ್ದು ಊರಿನವರಷ್ಟೇ ಅಲ್ಲ, ಸುತ್ತಮುತ್ತಿನ ಹಳ್ಳಿ ಜನ ಕೇಳಿ ಗಡಗಡ ನಡುಗಿಹೋಯಿತು.

ಇದಾದ ಒಂದಾರು ತಿಂಗಳಲ್ಲಿ ಅಣ್ಣಮ್ಮ ಮೈನೆರೆದಳು. ದೊಡ್ಡವಳೆನಿಸಿದಳು. ಈ ಸುದ್ದಿಗೌಡನ ಮಗನ ಕಿವಿಗೆ ಬಿತ್ತು ಕಿವಿಗೆ ಗಂಧರ್ವಗಾನ ಕೇಳಿದಂಗಾಯಿತು. ಬಾಯಿಗೆ ಜೇನು ರಸ ಸುರಿದಂಗಾಯಿತು.

ಕಣ್ಣಿಗೆ ಕಾಮನಬಿಲ್ಲು ಕಂಡಂಗಾಯಿತು. ಅವಳನ್ನು ಇಲ್ಲಿಂದ ಹಾರಿಸಿಕೊಂಡು ಹೋಗಬೇಕೆಂದನು. ಆದರೆ ಈಗಿನಂತೆ ಸರಕಾರಿ ರೋಡುಗಳಿರಲಿಲ್ಲ. ಬಸ್ಸುಗಳಿರಲಿಲ್ಲ. ಅದಕ್ಕಾಗಿ ತನ್ನ ಕಿಲಾರಿ ಎತ್ತುಗಳಿಗೆ ಸಜ್ಜು ಮಾಡಿದನು. ತನ್ನ ಮಾತು ಕೇಳುವ ಇಬ್ಬರು ಆಳುಗಳಿಗೆ ಹಿಡಿದನು. ಒಂದು ಬಂಡಿಗೆ ಛತ್ತು ಹಾಸಿದನು. ತನ್ನ ಬಲೆಯಲ್ಲಿ ಯಾವಾಗ ಆ ಬೇಟೆ ಬೀಳುವುದೆಂದು ಹಾದಿ ಕಾಯುತ್ತ ಕುಳಿತನು

ಮನೆಯ ಅಂಗಳದಲ್ಲಿ ನಿತ್ಯ ಸಂಜೆ ಕೂಡಿಸತೊಡಗಿದರು. ನೆರೆದ ಸುಮಂಗಲೆಯರು ಮೈನೆರೆದ ಹಾಡು ಹಾಡ ತೊಡಗಿದರು.

ಏನುಟ್ಟು ಮೈಯನೆರೆದೆ ನಮ್ಮ ಸುಖದೇವಿ ಏನುಂಡು ಮೈಯನೆರೆದೆ

ಸಾಲಕೀಚಕನೆಂಬ ಗೊಂಬಿ ತಾ ಹಿಡಿಕೊಂಡು ರಂಬಿ ತಾ ಕುಳಿತಿದ್ದಾಳೆ

ಹೀಗೆ ಬಿಟ್ಟೂಬಿಡದೆ ಐದು ದಿವಸ ಕೂಡಿಸಿ ಹಾಡಿಸಿದರು. ಕೊನೆಯ ದಿನ ಬಡವರಾದರೂ ಚಿಂತೆಯಿಲ್ಲ ಪದ್ಧತಿಯಂತೆ ಹೆಚ್ಚಲ್ಲದಿದ್ದರೂ ಒಂದೆರಡು ಸೇರು ಬ್ಯಾಳಿಗೆ ಹಾಕಿ ಹೋಳಿಗೆ ಮಾಡಿ ಕೇರಿಯೊಳಗಿನ ನಾಲ್ಕುಜನ ಮುತ್ತೈದೆಯರಿಗೆ ಕರೆಸಿ ಊಟ ಮಾಡಿಸಿ ಕಳಿಸಿದರು. ಮನೆ ದೇವರಿಗೆ ನಮಸ್ಕಾರ ಮಾಡಿಸಿ ಎಬ್ಬಿಸಿದರು.

ಐದು ದಿವಸ ಆದ ಕೂಡಲೆ ಆರನೆಯ ದಿವಸಕ್ಕೆ ಅಣ್ಣಮ್ಮ ಹೊಟ್ಟೆಪಾಡಿನ ಭರ್ತಿಗಾಗಿ ಎದ್ದಳು. ಬಟ್ಟೆ ತೆಗೆದುಕೊಂಡ ತಾಯ್ತಂದೆಗಳ ಜೊತೆಗೆ ಹೊಳೆಗೆ ಹೊರಟಳು. ಹೊಳೆಗೆ ಹೋದ ಮೇಲೆ ಒಂದೆರಡು ಬಟ್ಟೆ ಮನೆಯಲ್ಲಿ ಬಿಟ್ಟು ಬಂದದ್ದರ ನೆನಪಾಯಿತು. ಕೂಡಲೇ ತರಲು ಮನೆಗೆ ಹೊರಟಾಗ ದಾರಿಯಲ್ಲಿ ಗೌಡರ ಬಂಡಿ ಬಂದದ್ದು ನೋಡಿ ದೂರ ಸರಿದಳು. ಮೊದಲೇ ಹೇಳಿದಂತೆ ಗೌಡರಾಳುಗಳು ಟಣ್ಣನೆ ಹಾರಿ ಬಂದು ಹಾಹಾಂ ಅನ್ನುವುದರೊಳಗಾಗಿ ಅಣ್ಣಮ್ಮನನ್ನು ರಗಡಾಸಿ ಎತ್ತಿಕೊಂಡು ಬಂಡಿಯಲ್ಲಿ ಹಾಕಿಕೊಂಡು ಬಾಯಿಗೆ ಬಟ್ಟೆ ತುರುಕಿ ಕೈಕಾಲು ಕಟ್ಟಿ ಛತ್ತು ಹಾಕಿದ ಬಂಡಿಗೆ ಶಾಲು ಹೊಚ್ಚಿಹಾರಿಸುತ್ತ ನಡೆದರು. ಇದನ್ನು ಒಗೆಯಲು ಹೊರಟವರಲ್ಲಿ ಒಂದಿಬ್ಬರು ನೋಡಿದರು. ಅವರು ಹೊಳೆಗೆ ಹೋಗಿ ಬಟ್ಟೆ ಒಗೆಯುತ್ತಿದ್ದ ಅಣ್ಣಮ್ಮನ ತಾಯ್ತಂದೆಗಳಿಗೆ ಸುದ್ದಿ ಮುಟ್ಟಿಸಿದರು. ಈ ಸುದ್ದಿ ಕೇಳಿ ಅವರು ಒಗೆವ ಬಟ್ಟೆ ಅಲ್ಲಿಯೇ ಬಿಟ್ಟು, "ಲಬ್ ಲಬ್ ಹೊಡ್ಕೊಳ್ಳುತ್ತಾ ಊರಿಗೆ ಬಂದು ಅಂಗಳದಲ್ಲಿ ಬಿದ್ದು ಗೋಳಾಡತೊಡಗಿದರು.

ಹಾಂ ಹಾಂ ಅನ್ನುವುದರೊಳಗಾಗಿ ಊರ ಜನ ಸೇರಿತು. ನಡೆದುದೆಲ್ಲ ಗೊತ್ತಾಯಿತು. 'ಬೆಕ್ಕಿನ ಕೊರಳೊಳಗೆ ಗಂಟೆ ಕಟ್ಟಬೇಕ್ಯಾರು? ಗೌಡನ ಮಗನಿಗೆ ಯಾರು ಹೇಳಬೇಕು?' ಎಂಬ ಚಿಂತೆ ಎಲ್ಲರಿಗೂ ಹತ್ತಿತು. ನಮ್ಮದು ನಮಗು ಮನಾರದಾ, ಈ ಕೆಲ್ಸ ಆಗ್ಲಂದು ತೊಗೊಂಡು ಏನ ಮಾಡಬೇಕಾಗ್ಯಾದ?' ಎಂದು ಒಬ್ಬ. 'ಊರ ಸುದ್ದಿ ತೊಗೊಂಡು ಮುಲ್ಲಾ ಬಡವಾಗಿದ್ದನಂತ ಹಂಗಾಗೋದು ಬ್ಯಾಡಪೊ' ಎಂದು ಇನ್ನೊಬ್ಬ. 'ಗಂಡ ಹೆಂಡತಿ ನಡುಕೂಸು ನುಗ್ಗಾಗೋದು ಯಾಕತ್ತೆ? ಎಂದು ಇನ್ನೊಬ್ಬ, ಹೀಗೆ

ಅಲ್ಲಿ ಸೇರಿದವರಲ್ಲಿ ಒಂದೊಂದು ಬಗೆಯ ಮಾತನಾಡುತ್ತ ತಮ್ಮ ತಮ್ಮ ಮನೆ ಕಡೆಗೆ ಹೊರಟರು. ಅಣ್ಣಮ್ಮನ ತಾಯ್ತಂದೆಗಳಾದ ಬಸಪ್ಪ ಮಾಳವ್ವರು ಬಿದ್ದು ಬಿದ್ದು ಅಳುವುದು ನೋಡಿ ಕೆಲ ಹಿರಿಯರ ಕರುಳು ಕರಗಿತು. ಅವರಲ್ಲಿ ಒಬ್ಬರು, 'ಯಾವ ಊರಿಗಿ ಹೋಗ್ಯಾರಂತ ಗೊತ್ತಾದರೆ ಅಲ್ಲಿಗಿ ಹೋಗ್ಲಾಕ ಬರ್ತಾದ' ಎಂದರೆ, 'ಅದು ಗೊತ್ತಾದ ಮ್ಯಾಲ ಹೋಗೋಣ' ಎಂದು ಇನ್ನೊಬ್ಬರು ಅಂದರು.  ಅದರಂತೆ ಮಾತು ನಿರ್ಧಾರವಾಯಿತು

ಬಾಯಿಗೆ ಅರುವೆ ತುರುಕಿ ಕೈಕಾಲು ಕಟ್ಟಿದ್ದರಿಂದ ಅಣ್ಣಮ್ಮ ಎಷ್ಟೇ ಒದ್ದಾಡಿದರೂ ಅದು ಒಬ್ಬರಿಗೂ ಗೊತ್ತಾಗಲಿಲ್ಲ. ಬಂಡಿಗೆ ಛತ್ತು ಬಿಗಿದು ಅದಕ್ಕೆ ಶಾಲು ಹೊಚ್ಚಿದ್ದರಿಂದ ಒಳಗಡೆ ಗೌಡರ ಹೆಣ್ಣುಮಕ್ಕಳಿದ್ದಾರೆಂದು ಜನ ತಿಳಿಯತೊಡಗಿದರು. ಮಧ್ಯಾಹ್ನ ಹಾರುತ್ತಾ ಹೊರಟಿದ್ದ ಬಂಡಿ ಸಂಜೆಯಾಗುವುದರೊಳಗಾಗಿ ಒಂದೂರಿಗೆ ಬಂದು ನಿಂತಿತು. ಅದು ಗೌಡನ ತಂಗಿ ಊರಾಗಿತ್ತು, ಅಳಿಯ ಒಂದು ಹೆಣ್ಣು ತೆಗೆದುಕೊಂಡು ಬಂದಿರುವುದು ತಿಳಿದು ಅವನತ್ತೆ ಅವನಿಗೆ ತನ್ನ ಮನೆ ಮೇಲಿರುವ ಅಟ್ಟದ ಮನೆ ಕೊಟ್ಟಳು. ಆಗ ಪೂರ್ಣ ಕತ್ತಲಾಗಿತ್ತು, ಆಳುಗಳಿಂದ ಬಂಡಿಯೊಳಗಿಂದ ಹೊರಿಸಿಕೊಂಡು ಗೌಡನಮಗ ಅಣ್ಣೆಮ್ಮನನ್ನು ಅಟ್ಟದ ಮನೆಗೆ ತಂದು ಕೈಕಾಲು ಬಿಚ್ಚಿಸಿ ಬಾಯಿಗಿಟ್ಟಿದ್ದ ಅರಿವೆ ತೆಗೆಸಿ ಹಾಕಿಸಿದನು. ಆಳುಗಳಿಗೆ ಹೊರಗೆ ಬಾಗಿಲಿಗೆ ಕಾಯಲಿಟ್ಟು ತಾನು ಅಣ್ಣೆಮ್ಮನ ಜೊತೆ ಒಳಗುಳಿದನು. ಅಣ್ಣೆಮ್ಮನೆಷ್ಟೆ ಹಾರಾಡಿದರೂ, ಚೀರಾಡಿದರೂ ಗದ್ದಲ ಮಾಡಿದರೂ ಗೌಡನ ಮಗ ಕೇಳಲಿಲ್ಲ. ಆ ಊರಿನಲ್ಲಿ ಒಬ್ಬರೂ ಸಹಾಯಕ್ಕೆ ಬರಲಿಲ್ಲ. ಎಲ್ಲರೂ ಕೇಳಿಯೂ ಕೇಳದಂತೆ ಸುಮ್ಮನಿದ್ದರು. ಬೆಟ್ಟ ಬೆಳಗಾನ ವಿರೋಧಿಸಿದ ಅಣ್ಣೆಮ್ಮ ಮುಂಜಾನೆ ಹೊತ್ತಿಗೆ ಹಾಸಿಗೆ ಮೇಲೆ ಸುಮ್ಮನೆ ಮಲಗಿಕೊಂಡಳು.

ಮರುದಿನ ಸಂಜೆ ಊರಿಮಂದಿಗೆ ಗೌಡನಮಗ ಅಗಸರ ಅಣ್ಣಮ್ಮನನ್ನು ತನ್ನತ್ತೆ ಊರಿಗೆ ತೆಗೆದುಕೊಂಡು ಹೋಗಿರುವನೆಂದು ತಿಳಿದುಬಂತು. ಊರಿನ ಮಾನ ಉಳಿಸಲು ಅವರು ಬಂಡಿ ಕಟ್ಟಿಕೊಂಡು ಅವನತ್ತೆ ಊರಿಗೆ ಬಂದರು. ಏನೋ ನಾಲ್ಕು ಮಂದಿ ತಿಳಿಸಿ ಆಕೆಯನ್ನು ಕರೆದುಕೊಂಡು ಬಂದು ಎಲ್ಲಾದರೂ ಮದುವೆ ಮಾಡಿ ಕೊಡಬೇಕೆಂದು ಲೆಕ್ಕ ಹಾಕಿದ್ದರು.

ತನ್ನೂರಿನ ಹಿರಿಯರು ಬಂದದ್ದು ತಿಳಿದು ಅವನತ್ತೆ ಮನೆಗೆ ಬರಮಾಡಿಕೊಂಡಳು. ಅವರು ಹೇಳಿದ್ದನ್ನೆಲ್ಲ ಕೇಳಿದಳು. ಒಂದುಕಡೆ ಅಳಿಯನ ಮೇಲಿನ ಪ್ರೀತಿ, ಇನ್ನೊಂದು ಕಡೆ ಊರಿನ ಅಭಿಮಾನ, ಕೊನೆಗೆ ಆಕೆಗೆ ಊರಿನ ಅಭಿಮಾನ ಹೆಚ್ಚಾಯಿತು. ಅಟ್ಟದ  ಮೇಲಿದ್ದ ಅಳಿಯನಿಗೆ ಕರೆಸಿ ಹೇಳಿದಳು. ಈಗ ನಂದೆಲ್ಲ ಕೆಲಸ ಆಗ್ಯಾದ, ಬೇಕಾದ್ರೆ ಕರಕೊಂಡು ಹೋಗ್ಲಾಕ' ಎಂದು ತನ್ನಭಿಪ್ರಾಯ ಅವನು ತಿಳಿಸಿದನು. ಅದರಂತೆ ಅಣ್ಣೆಮ್ಮನಿಗೆ ಅಲ್ಲಿಗೆ ಕರೆಸಿ ಕೇಳಿದರು. ನಂದೆಲ್ಲಾ ಈಗ ಆಗ್ಯಾದ, ನಾ ಈಗ ಊರಿಗಿ ಬಂದು ಏನು ಮಾಡಲಿ? ಈ ಗೌಡ ನನಗೊಮ್ಮೆ ಮುಟ್ಟಿದ ಮ್ಯಾಲ ನಾ ಇನ್ನ ಇವನಕ್ಕಿ, ಇಂವಾ ಎಲ್ಲಿ ಇಡತಾನೊ ಅಲ್ಲಿರತೀನಿ, ನೀವಿನ್ನು ಊರಿಗಿ ಹೋಗ್ರಿ, ನನ್ನ ಹೆಸರಿಗಿ ಬರಬ್ಯಾಡ್ರಿ, ನನ್ನ ತಾಯ್ತಂದೆಗೆ ನಾ ಸತ್ತಿನಂಥ

ಹೇಳ್ರಿ" ಎಂದಾಗ ಅವರಿಗೆ ಮಾತೆ ಬರಲಿಲ್ಲ. 'ಈಕೆ ಹೇಳೋದು ಖರೆ ಅದಾ, ನಡಿರಿ, ಊರಿಗೆ ಹೋಗಮು" ಎಂದು ಬಂದವರು ಹಿಂತಿರುಗಿದರು.

ಅಣ್ಣಮ್ಮನಾಡಿದ ಮಾತುಗಳು ಊರೆಲ್ಲಾ ಅದವು, ಕೆಲವರು ಆಕೆ ತೆಗೆದುಕೊಂಡ ನಿರ್ಧಾರ ಸರಿ ಎಂದರೆ ಇನ್ನು ಕೆಲವರು, "ಬುದ್ಧಿಗೇಡಿ, ಗೌಡರ ಸುಖ ಏನ ಕಂಡಾಳೊ! ಮುಂದ ನೋಡ್ಕೋತಾ ಹೋಗ್ಲಿ" ಎಂದು ಊರಲ್ಲಿ ನಾನಾ ಜನ ನಾನಾ ಬಗೆಯಿಂದ ಆಡತೊಡಗಿದರು. ಅಣ್ಣಮ್ಮನ ತಾಯ್ತಂದೆಗಳು ನಡೆದುದೆಲ್ಲ ಕೇಳಿ ನೆಲಹಿಡಿದು ಬಿದ್ದರು. ನೆಲ ಹಿಡಿದವರು ಮೇಲೇಳಲಿಲ್ಲ. ಒಂದೆರಡು ತಿಂಗಳಲ್ಲಿ ಕಣ್ಣು ಮುಚ್ಚಿದರು. ತಾಯ್ತಂದೆಗಳು ಸತ್ತ ಸುದ್ದಿ ಅಣ್ಣೆಮ್ಮನಿಗೆ ಹೇಳಿಕಳಿಸಿದರೂ ಆಕೆ ಮಣ್ಣಿಗೆ ಬರಲಿಲ್ಲ. "ನಾ ಊರ ಬಿಟ್ಟ ದಿನಾನೆ ಸತ್ತಿನಿ ಸತ್ತಾಕಿ ಹ್ಯಾಂಗ ಬರತಾಳ? ಎಂದು ಹೇಳಿದ್ದು ಜನರಿಗೆ ಮತ್ತಷ್ಟು ಗಾಬರಿ ಹುಟ್ಟಿಸಿತು. ಕೆಲವರು ಆಗಸರ ಬಸಪ್ಪ ಮಾಳವ್ವರ ಸಾವಿನ ಬಗ್ಗೆ ಚಿಂತಿಸಿದರೆ ಇನ್ನು ಕೆಲವರು ಗೌಡನಮಗ ಗೂಳಿಯಂತೆ ನುಗ್ಗಿ ಅಣ್ಣೆಮ್ಮನ ಬಾಳುವ ಹಾಳುಮಾಡಿದ್ದಕ್ಕೆ ಒಳಗೊಳಗೆ ಹಲ್ಲುಕಡಿಯತೊಡಗಿದರು.

* * *

ಊರ ಹಿರಿಯರ ಜೊತೆಗೆ ಅಣ್ಣಮ್ಮ ಬರಲು ಒಪ್ಪದಿದ್ದಾಗ ಒಂದು ತಿಂಗಳ ನಂತರ ತನ್ನತ್ತೆ ಮನೆಯಲ್ಲಿಯೇ ಬಿಟ್ಟು ಗೌಡನಮಗ ಬಂದನು. ತನ್ನದಿನ್ನೂ ಲಗ್ನವಾಗಿಲ್ಲ, ತನ್ನ ಕೈಯಲ್ಲಿ ಇನ್ನೂ ಮನೆ ಅಧಿಕಾರ ಬಂದಿಲ್ಲ. ತನ್ನ ಲಗ್ನಾದ ಮೇಲೆ, ಅಧಿಕಾರ ಬಂದ ಮೇಲೆ ಅಣ್ಣಮ್ಮನಿಗೆ ಊರಿಗೆ ತಂದು ಮನೆ ಮಾಡಿ ಇಟ್ಟರಾಯಿತೆಂದು ಲೆಕ್ಕ ಹಾಕುತ್ತ ಊರಿಗೆ ಬಂದಿದ್ದನು. ಗೌಡನ ಮಗನಾದುದರಿಂದ ಯಾರೂ ಏನೂ ಅನ್ನಲಿಲ್ಲ.

ಇನ್ನಷ್ಟು ಸಡಿಲುಬಿಟ್ಟರ ಮಗ ಪೂರ್ಣ ಹಾಳಾಗುವನೆಂದು ಗೌಡ ತರಾತುರಿ ಮಾಡಿ ತಮ್ಮ ಬಳಗದಲ್ಲಿರುವ ಹೆಣ್ಣನ್ನು ನೋಡಿ ತಿಂಗಳೊಪ್ಪತ್ತಿನಲ್ಲಿ ಮದುವೆ ಮಾಡಿದನು. ಮೊದಲು ವಾರಕ್ಕೊಮ್ಮೆ ಬಂದು ಹೋಗುತ್ತಿದ್ದವನು ಮುಂದೆ ತಿಂಗಳಿಗೊಮ್ಮೆ ಬಂದು ಹೋಗತೊಡಗಿದನು. ಈಗ ಅಣ್ಣಮ್ಮನಿಗೆ ಸಣ್ಣಾಗಿ ಗಿಡಕ್ಕೆ ಹತ್ತಿದ ಹುಳುವಿನಂತೆ ಚಿಂತೆ ಆರಂಭವಾಯಿತು. ಮುಂದೆ ಮೂರು ತಿಂಗಳಿಗೊಮ್ಮೆ ಬರಲಾರಂಭಿಸಿದಾಗ ಆಕೆಯ ಚಿಂತೆ ಚಿತೆಯಾಗಿ ಬಿಟ್ಟಿತು. ತನ್ನ ಒಡಲಿನ ರಕ್ತವಾಗಿದ್ದ ತಾಯ್ತಂದೆಗಳು ಸತ್ತ ಚಿಂತೆ ಒಂದು ಕಡೆಗಾದರೆ, ತನ್ನ ಬಾಳುವ ಹಾಳು ಮಾಡಿದ ಗೌಡರ ಮಗ ತನ್ನನ್ನು ಮರೆತು ತನ್ನತ್ತೆಯ ಮನೆಯಲ್ಲಿ ಬಿಟ್ಟಿದ್ದು ಒಂದೇಸವನೆ ಕಬ್ಬಿಣಕಾಸಿ ಸುಟ್ಟಂಗಾಗತೊಡಗಿತು.

"ನನ್ನ ಕೈಯಾಗ ಅಧಿಕಾರ ಬಂದ್ರುಪ್ಪ ನಿನಗ ಕರಸಗೋತೀನಿ, ಅಲ್ಲಿತನಕ ಸುಮ್ಮಕಿರು" ಎಂದು ಹೇಳಿದ್ದು ಅಣ್ಣೆಮನಿಗೆ ಕುಂತಲ್ಲಿ ನಿಂತಲ್ಲಿ ಪ್ರತಿಧ್ವನಿಸತೊಡಗಿತು. ಅವನಪ್ಪ ಸತ್‌ತರ, ಅಧಿಕಾರ ಬರುವುದು, ಅವನಪ್ಪ ಸದ್ಯ ಸಾಯುವಂತಿಲ್ಲ. ಅಧಿಕಾರ ಬರುವಂತಿಲ್ಲ. ಅಧಿಕಾರ ಬರದ ಹೊರತು ತನ್ನನ್ನವನು

ಊರಿಗೆ ಕರೆದುಕೊಂಡು ಹೋಗಿ ಮನೆಮಾಡಿ ಇಡುವಂತಿಲ್ಲ ಎಂದು ಗುಂಗುಹುಳುವಿನಂತೆ ಚಿಂತಿತಳಾದಳು.

ಆದರಲ್ಲೂ ಇತ್ತೀಚೆಗೆ ಅವನ ಲಗ್ನವಾದ ನಂತರ ಅವನತ್ತೆ ಅಣ್ಣಮ್ಮನಿಗೆ ಸರಿಯಾಗಿ ನೋಡಿಕೊಳ್ಳುವುದು ಬಿಟ್ಟಳು. ತನ್ನ ಕುಲದವಳಾಗಿದ್ದರೆ ಅಡಿಗೆ ಮನೆಯೊಳಗೆ ಕರೆದುಕೊಂಡು ಸರಿಯಾಗಿ ನೋಡಿಕೊಳ್ಳುತ್ತಿದ್ದಳೇನೊ? ಈಕೆ ಅಗಸರವಳಾದ ಕಾರಣ ಅಡುಗೆಮನೆಯೊಳಗೆ ಬಿಡುತ್ತಿರಲಿಲ್ಲ. ಅವರಿವರೆದುರು ಅವನತ್ತೆ ಇದಕ್ಕೆ ನಾನು ಸುಮ್ಮನೆ ಕೂಳು ಹಾಕಬೇಕಲ್ಲಾ ಅಂತೀನಿ?" ಎಂದು ಅಂದಾಡಿದ್ದು ಈಕೆಯ ಕಿವಿಗೆ ಬಿತ್ತು. ಅಂದಿನಿಂದ ಊಟ ಹೋಗುವುದು ಕಡಿಮೆಯಾಯಿತು. ಆವತ್ತು ಊರ ಹಿರಿಯರ ಜೊತೆಗೆ ಹೋಗಿದ್ದರೆ ಯಾವನಾದರೂ ಒಬ್ಬನ ಜೊತೆಗೆ ಆರಾಮವಾಗಿ ಲಗ್ನಾಗಿ ಇರಬಹುದಾಗಿತ್ತು. ಇದರಿಂದ ತನ್ನ ತಾಯ್ತಂದಗಳೂ ಉಳಿಯಬಹುದಾಗಿತ್ತು. ತನ್ನ ಬಾಳುವೆಯೂ ಸರಿಯಾಗಿರುತ್ತಿತ್ತು. ಈಗೇನ್ಹೋಗಿ ಏನಾಯಿತಲ್ಲಾ ಎಂದು ತನ್ನ ಮೈಪರಚಿಕೊಳ್ಳತೊಡಗಿದಳು. ಕಣ್ಣಿಗೆ ಕಣ್ಣು ಹಲ್ಲಿಗೆ ಹಲ್ಲು ತಿನ್ನತೊಡಗಿದಳು.

ಈ ಸಲ ಗೌಡನ ಮಗ ಬಂದಾಗ ಒಂದು ನಿರ್ಣಯ ಆಗಬೇಕು. ಇಲ್ಲದಿದ್ದರೆ ಇಲ್ಲಿಂದ ಎಲ್ಲಿಗಾದರೂ ಓಡಿ ಹೋಗಬೇಕೆಂದು ಮಾಡಿದಳು. ಲಗ್ನವಾದ ಮೇಲೆ ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ಬರುತ್ತಿದ್ದವನು ಬರುತ್ತಾ ಬರುತ್ತಾ ನಾಕ್ ತಿಂಗಳಿಗೊಮ್ಮೆ ಐದು ತಿಂಗಳಿಗೊಮ್ಮೆ ಬರಲಾರಂಭಿಸಿದ್ದು ನೋಡಿ ಅಣ್ಣಮ್ಮ ಹಾವಿನಂತೆ ಭುಸ್ ಗುಟ್ಟತೊಡಗಿದಳು. ಅಳಿಯನ ಪ್ರೀತಿಗಾಗಿ ಅವನತ್ತೆ ಸೀರೆ ಕುಬುಸ ತರುತ್ತಿದ್ದರೂ ಉಣಲಿಕ್ಕೆ ಹಾಕುತ್ತಿದ್ದರೂ ಪ್ರೀತಿಯಿಂದ ಕಾಣಲಾರದ್ದು ಅಣ್ಣೆಮ್ಮನಿಗೆ ಕಿಚ್ಚಿನಲ್ಲಿ ಇಟ್ಟಂಗಾಗಿತ್ತು. ಪ್ರೀತಿಯಿಂದ ನೋಡಲಾರದಾಗ ಏನುಂಡರೇನು, ಏನುಟ್ಟರೇನು? ಎಂದು ಅಣ್ಣಮ್ಮ ಹಾರಾಡತೊಡಗಿದ್ದಳು. 'ನೀ ಏನೆ ಅನ್ನು, ಈ ಸಾರಿ ನನಗೆ ಊರಿಗೆ ಕರಕೊಂಡು ಹೋಗಬೇಕು. ಮನೆಮಾಡಿ ಇಡಬೇಕು" ಎಂದು ವಟವಟಿ ಹಚ್ಚಿದ್ದು ನೋಡಿ ಅವನು ಒಂದು ಮಾತಾಡಿ ಗಪ್ಪಾಗಿ ಮಲಕೊಂಡನು.

'ನಮ್ಮಪ್ಪ ಇರೋತನ್ಕ ನೀ ಇಲ್ಲೆ ಇರಬೇಕು, ಇಲ್ಲದಿದ್ದರೆ ನಿನ್ನ ಕಂಡಬುದ್ಧಿ ಕಂಡಕೊ" ಎಂದಾಗ ಅಣ್ಣೆಮ್ಮನ ಪಿತ್ತ ನೆತ್ತಿಗೇರಿತು. ಅವನಿಗಾಗಿಯೇ ತಾನು ಪತಿವ್ರತಾ ಸ್ತ್ರೀಯಂತೆ ಒಂದು ವರುಷದಿಂದ ಹುಟ್ಟಿದೂರು ಬಿಟ್ಟು, ಬಂಧುಬಳಗ ಬಿಟ್ಟು ತಾಯ್ತಂದೆಗಳನ್ನು ಕಳೆದುಕೊಂಡು ಇವನು ಹೇಳಿದಂತೆ ಕೇಳಿಕೊಂಡು ಇದ್ದಾಗ ಊರಿಗೆ ಕರೆದುಕೊಂಡು ಹೋಗೆಂದರೆ ನಿನ್ನ ಕಂಡ ಬುದ್ದಿ ಕಂಡಕೊ ಎಂದು ಹೇಳಿದ್ದು ಕೇಳಿ ಕಡ್ಡಿಗರ್ಭಟ ಬಿದ್ದಂಗಾಯಿತು. ಇವನಪ್ಪ ಇನ್ನೂ ಇಪ್ಪತ್ತು ವರುಷ ಇರುವವನು, ಸಾಯುವವನಲ್ಲ, ಅಲ್ಲಿಯವರೆಗೆ ನಾನು ಇಲ್ಲಿ ಬಿದ್ದಿರಬೇಕು? ನನ್ನ ಬಾಳುವೆ ಗತಿಯೇನು ಎಂದು ಬೆಟ್ಟ ಬೆಳಗಾನ ಗೋಳಾಡತೊಡಗಿದಳು.

ಆಗ ಬೇಸಿಗೆಯಾಗಿತ್ತು. ಒಳಗೆ ಕುದಿಸುವುದೆಂದು ಅಟ್ಟದ ಮನೆಯ ಮೇಲೆ ಗಾದಿಗೆ ಹಾಸಿಕೊಂಡು ಮಲಕೊಂಡಿದ್ದರು. ಇವನ ಸಲುವಾಗಿ ತಾಯ್ತಂದೆಗಳು ಸತ್ತರು. ತಾನು ಪರದೇಶಿಯಾಗಬೇಕಾಯಿತು. ತನ್ನಪ್ಪ ಸತ್ತ ಮೇಲೆ ಊರಿಗೆ ಕರೆದುಕೊಂಡು ಹೋಗುತ್ತೇನೆ ಎನ್ನುವ ಇವನಿಗೇನ ಸಾಯ ಹೊಡೆದರೆ ತನಗೆ ಹರಾಹುರಿಯಾಗುವುದೆಂದು ತನ್ನೂರು ಸೇರಿ ಕೂಲಿ ನಾಲಿ ಮಾಡಿಕೊಂಡು ಇರಬಹುದೆಂದು ಲೆಕ್ಕ ಹಾಕುತ್ತ ಆಕಾಶ ನೋಡಿದಳು. ಚಿಕ್ಕೆಗಳು ಇಳಿಯುತ್ತ ಹೊರಟಿದ್ದವು. ಬೆಳ್ಳಿಚುಕ್ಕೆ ಮೂಡಿತ್ತು. ಬೆಳಗಾಗಲು ಒಂದು ತಾಸು ಉಳಿದಿತ್ತು. ಎದ್ದು ನಿಂತು ನೋಡಿದಳು. ಎಲ್ಲಾ ಜನ ಮಲಗಿದ್ದರು. ಕೆಳಗೆ ನೋಡಿದಳು. ಮೇಲಿನಿಂದ ಬಿದ್ದರೆ ಯಾರೂ ಉಳಿಯುವುದಿಲ್ಲವೆಂಬ ವಿಚಾರ ಬಂದ ಕೂಡಲೇ ಗಸಕ್ಕನೆ ಹಾಸಿಗೆಯ ಮೇಲೆ ಮಲಗಿದ್ದ ಗೌಡನ ಮಗನಿಗೆ ದಬ್ಬಿ ಬಿಟ್ಟಳು. ಒಂದೇ ಕ್ಷಣದಲ್ಲಿ ಮೇಲೆ ಜೀವದಿಂದ ಇದ್ದವನು, ಕೆಳಕ್ಕೆ ಬಿದ್ದಾಗ ತಲೆಯೊಡೆದುಹೋಯಿತು. ರಕ್ತ ಸೋರಿಟ್ಟಿತು. ತಲೆ ಒಡೆದಾಗ ಜೋರಾಗಿ ಕೂಗಿಕೊಂಡದ್ದಕ್ಕೆ ಮಲಕೊಂಡವರೆಲ್ಲರೂ ಗಾಬರಿಗೊಂಡು ಎದ್ದು ಕುಳಿತರು. ಇದು ತನ್ನ ಮೇಲೆ ಬರಬಾರದೆಂದು ಅಣ್ಣೆಮ್ಮ ಲಬೋ ಲಬೋ ಹೊಯ್ದುಕೊಳ್ಳ ತೊಡಗಿದಳು. ಊರು ಕೇರಿ ಜನ ಹೌಹಾರಿ ಓಡಿಬಂದರು. ಬೆಳಗಾಗುವುದರೊಳಗಾಗಿ ಈ ಸುದ್ದಿ ಸುತ್ತುಮುತ್ತಲಿನ ಹಳ್ಳಿಗಳಿಗೂ ಮುಟ್ಟಿತು. ಪೊಲೀಸರು ಬಂದರು. ಹೆಣದ ಪಂಚನಾಮೆ ಮಾಡಿ ತಾಲ್ಲೂಕು ದವಾಖಾನೆಗೆ ಬಂಡಿಯಿಂದ ಕಳಿಸಿದರು. ಪಕ್ಕದಲ್ಲಿ ಮಲಗಿದ್ದ ಆಗಸರ ಅಣ್ಣೆಮ್ಮ ಈ ಕೆಲಸ ಮಾಡಿರಬೇಕೆಂದು ಗೌಡ ಪೊಲೀಸರಿಗೆ ಹಣ ಬಾಯಿಗೊತ್ತಿ ಈಕೆಗೆ ಮರಣ ದಂಡನೆಯಾಗುವಂತೆ ಮಾಡಬೇಕೆಂದು ಗಂಟುಬಿದ್ದನು. ತಾಲ್ಲೂಕ ಆಸ್ಪತ್ರೆಗೆ ಹೆಣ ಒಯ್ದು ಮೇಲೆ ಗೌಡನ ದಾರಿನ ಪ್ರಕಾರ ಪೊಲೀಸರು ಅಣ್ಣಮ್ಮನನ್ನು ಬಂಧಿಸಿ ಕಲಬುರ್ಗಿ ಜೇಲಿಗೆ ತೆಗೆದುಕೊಂಡು ಹೋದರು. ಅಣ್ಣಮ್ಮ ಅಂಜದೆ ಅಳುಕದೆ ಕಲ್ಲಾಗಿದ್ದದು ನೋಡಿ ಎಲ್ಲರೂ ಆಶ್ಚರ್ಯಪಟ್ಟರು.

* * *

ಗೌಡನ ಮಗ ಸತ್ತ ಸುದ್ದಿ ಊರಲ್ಲಿಯ ಕೆಳಗೇರಿ ಜನಕ್ಕೆ ಹಬ್ಬದೂಟವಾಗಿತ್ತು. ಒಂದೇ ಸಲಕ್ಕೆ ಅಣ್ಣೆಮ್ಮ ಮ್ಯಾಗೇರಿಯವರ ಹಲ್ಲು ಮುರಿದಿರುವಳೆಂದು ಜನ ಆಡಿಕೊಳ್ಳತೊಡಗಿತ್ತು. ಗೌಡನ ಜೊತೆಗೆ ಕುಲಕರ್ಣಿ ಸಾಹುಕಾರರ ಸೊಕ್ಕು ಮುರಿದು ಹೋಗಿತ್ತು. ಇಲ್ಲಿತನಕ ಬಾಲಮುದುಡಿಕೊಂಡಿದ್ದ ಊರಜನ ಈಗ ನಿರ್ಭಿತರಾಗಿ ಮಾತನಾಡುವುದು, ತಿರುಗಾಡುವುದು ನೋಡಿ ಇವತ್ತು ಈ ಊರಿಗೆ ಸ್ವಾತಂತ್ರ ಬಂತೆಂದು ನಾನು ಕುಣಿದಾಡತೊಡಗಿದೆ. ಅಗಸರ ಅಣ್ಣೆಮ್ಮನನ್ನು ನಾನು ಇನ್ನೂ ತನಕ ನೋಡಿರಲಿಲ್ಲ. ಆಕೆಯನ್ನು ಈ ಊರಿನಿಂದ ಗೌಡನ ಮಗ ಒಯ್ದು ನಂತರ ಇಲ್ಲಿಗೆ ಬಂದಿದ್ದು. ಈಗಾಕೆ ಕಲಬುರ್ಗಿ ಜೇಲಿನಲ್ಲಿದ್ದದ್ದು ತಿಳಿಯಿತು. ಇನ್ನೂ ಎಫ್‌ಐಆರ್ ಕೋರ್ಟಿಗೆ ಕೊಡಲಾರದ್ದು ತಿಳಿಯಿತು. ಯಾತಗಿರಿ ಸಬ್‌ಇನ್ಸ್ಪೆಕ್ಟರ್ ನನ್ನ ಬಾಲ್ಯ ಸ್ನೇಹಿತನಾಗಿದ್ದ. ನೂರಾರು ವರುಷಗಳಿಂದ ಭಯದ ಗವಿಯಲ್ಲಿ ಗಾಳಿಬೆಳಕು

ನೀರಿಲ್ಲದೆ ಸತ್ತ ಈ ಊರಿನ ಜನವನ್ನು ಅಣ್ಣನ್ನ ಉಳಿಸಿರುವಾಗ ಆಕೆಯನ್ನು ನಾನು ಉಳಿಸಬೇಕೆಂದು ಲೆಕ್ಕಹಾಕಿದೆ. ಹೇಗೂ ಶಾಲೆಗೆ ಬೇಸಿಗೆ ರಜೆ ಆರಂಭವಾಗಿದೆಯೆಂದು ನೇರವಾಗಿ ಯಾತಗಿರಿಗೆ ಹೊರಟೆ.

ನಾನು ಬಂದಾಗ ಗೆಳೆಯ ಸಬ್‌ಇನ್ಸ್ಪೆಕ್ಟರರು ಮನೆಯಲ್ಲಿ ಇರಲಿಲ್ಲ. ಇದೇ ಕೆಲಸಕ್ಕಾಗಿ ಕಲಬುರ್ಗಿಗೆ ಹೋದುದಾಗಿ ಮನೆಯಲ್ಲಿ ಹೆಣ್ಣು ಮಕ್ಕಳು ತಿಳಿಸಿದರು. ಅಲ್ಲಿರುವ ಪೇಪರೋದುತ್ತಾ ಕುಳಿತು ತಾಸಾಗಿರಲಿಲ್ಲ, ಸಬ್‌ಇನ್ಸ್ಪೆಕ್ಟರರು ಬಂದರು. ಪಟ್‌ಪಟ್ ಇಳಿಯುತ್ತಿರುವಾಗ ನನ್ನನ್ನು ನೋಡಿ ಖುಷಿ ವ್ಯಕ್ತಪಡಿಸಿದರು. ಆಗ ಸಂಜೆಯಾಗಲಿತ್ತು. ಅದೇ ಪಟ್‌ಪಟಿಯ ಮೇಲೆ ಕೂಡಿಸಿಕೊಂಡು ಅಯ್‌ಬಿಗೆ ಕರೆದುಕೊಂಡು ಹೋದರು. ಒಂದು ರೂಮು ತೆರೆಸಿ ಊಟಕ್ಕೆ ಆರ್ಡರ್ ಮಾಡಿ ಕುಳಿತಾಗ ನಾನು ಆ ಮಾತು ಎತ್ತಿದೆ. ಆಕೆಯನ್ನು ನೀವು ಹೇಗಾದರೂ ಮಾಡಿ ಉಳಿಸಬೇಕು. ಆ ಊರಿನಲ್ಲಿ ಯಾವ ಅಂಬೇಡಕರ್, ಮಾರ್ಕ್ಸ್ ಮಾಡಲಾರದ ಕೆಲಸ ಆಕೆಯೊಬ್ಬಳೆ ಮಾಡಿದ್ದಾಳೆ. ಆಕೆ ಮಾಡಿದ ಈ ಕೊಲೆಯಿಂದ ಕೆಳಜನರನ್ನು ಹತ್ತಿಕ್ಕಿದ್ದ ಮ್ಯಾಗೇರಿಯವರ ಲಾಡ್ಯಾ ಈಗ ಸಡಿಲಾಗಿದೆ. ಆಕೆ ಹೊರಗಾದ ಮೇಲೆ ಆಕಿಗೊಂದು ದಂಡಿಗೆ ಹಚ್ಚೋಣ, ಒಂದು ವೇಳೆ ಆಕೆಗ್ಯಾರೂ ಲಗ್ನ ಆಗಾಕ ಮುಂದ ಬರದಿದ್ರ ನಾನೇ ಲಗ್ನ ಆಗ್ತಿನಿ. ಏನಂದ್ರಿ?' ಎಂದಾಗ.. ಸಬ್‌ಇನ್ಸ್ ಪೆಕ್ಟರರು ಮುಸಿಮುಸಿ ನಗತೊಡಗಿದರು. ಆಗಲಿ, ನಿಮ್ಮ ಪ್ರೀತಿಗಾಗಿ ಆಕೆಗೆ ಬೇಗ ಬಿಡುಗಡೆ ಮಾಡತೀನಿ, ಆಯಿತಾ" ಎಂದು ಊಟ ಮಾಡಿ ನನಗೆ ಮಲಗಲು ಹೇಳಿ ಮುಂಜಾನೆ ಕಲಬುರ್ಗಿಗೆ ಪಟ್‌ಪಟಿ ಮೇಲೆ ಹೋಗೋಣವೆಂದು ತಿಳಿಸಿ ಮನೆಗೆ ಹೋದರು.

ರಾತ್ರಿಯಲ್ಲಿ ನಾನು ಆರಾಮವಾಗಿ ನಿದ್ದೆ ಮಾಡಿದೆ. ಬೆಳಿಗ್ಗೆ ಬೇಗ ಎದ್ದು ಸಿದ್ಧನಾಗುತ್ತಿರುವಾಗ ಸಬ್‌ಇನ್ಸ್ಪೆಕ್ಟರರು ಬಂದರು. ಬೆಳಗಾನ ಆಕೆಯ ಬಿಡುಗಡೆಗಾಗಿ ಎಫ್‌ಐಆರ್ ತಯಾರಿಸಿದ್ದು ತೋರಿಸಿದರು. ಮಾಳಿಗೆಯ ಮೇಲೆ ಮಲಕೊಂಡಾಗ ಉರುಳಿಬಿದ್ದು ಸತ್ತಿರುವನೆಂಬ ವರದಿ ಓದಿ ತುಂಬಾ ಖುಷಿಯಾಯಿತು. ಮೊದಲು ಈ ವರದಿ ಕೋರ್ಟಿಗೆ ಹೋಗಿ ಮುಟ್ಟಿಸಿ ಆ ಮೇಲೆ ಅಣ್ಣೆಮ್ಮನಿರುವ ಜೇಲಿಗೆ ಬಂದೆವು. ಜೇಲಿನ ಒಂದು ಕೋಣೆಯೊಳಗೆ ಕುಳಿತಿದ್ದ ಅಣ್ಣೆಮ್ಮನ ನೋಡಿ ನನ್ನ ಕುತ್ತಿಗೆ ನರ ಉಬ್ಬಿ ಬಂದವು. ದುಃಖ ತಡೆಯಲಾರದಷ್ಟಾಯಿತು. ಇನ್ನೂ ಹದಿನಾರು ಹದಿನೇಳು ದಾಟದ ವಯಸ್ಸು. ಇಂಥ ಸುಂದರ, ಮುಗ್ಧ ಅಮಾಯಕ ಹೆಣ್ಣಿಗೆ ಆ ಗೌಡನ ಮಗ ಎಷ್ಟು ಗೋಳಾಡಿಸಿದನಲ್ಲ ಎಂದು ಮರುಗಿದೆ. ನಿಜವಾಗಿ ಫ್ರೆಂಡ್, ಇಂಥ ಕ್ರಾಂತಿಕಾರಿ ಹೆಣ್ಣಿನ ಕೈಹಿಡಿಯೋದರೆಂದರ ನನ್ನ ಭಾಗ್ಯ ಅಂತ ತಿಳಕೋತೀನಿ, ಇಕಿನ ಬೇಗ ಬಿಡುಗಡೆ ಮಾಡಿಸು ಪ್ಲೀಜ್' ಎಂದಾಗ ಗೆಳೆಯ ಸಬ್‌ಇನ್ಸ್ಪೆಕ್ಟರರು ಬಿದ್ದು ಬಿದ್ದು ನಗತೊಡಗಿದರು. ಆಗಾಕೆ ಬಿಡುಗಡೆ ಆದಂತೆ. ನನ್ನ ಕೈ ಹಿಡಿದಂತೆ ಅನಿಸಿತೊಡಗಿತು.

–ಆಕರ: ಸುವರ್ಣ ಕಥಾ ಸಂಕಲನ– ಸಂ: ಕೃಷ್ಣಮೂರ್ತಿ ಹನೂರ, ಬಾನು ಮುಷ್ತಾಕ್

## 3.3 ನಮ್ಮ ಕಾರವಾರ

**ಗಿರಡ್ಡಿ ಗೋವಿಂದರಾಜ**

ನಾವು ಹುಬ್ಬಳ್ಳಿಯಿಂದ ಕಾರವಾರ ಬಸ್ಸು ಹತ್ತಿದೆವು. ಕಲಘಟಗಿಯವರೆಗೆ ನನಗೆ ಪರಿಚಯದ ಹಾದಿ. ಅಲ್ಲಿಂದ ತುಸು ದೂರದಲ್ಲೇ ಸಹ್ಯಾದ್ರಿಯ ಸೆರಗು ಆರಂಭವಾಗುತ್ತದೆ. ಎತ್ತ ನೋಡಿದರೂ ಕಣ್ಣು ಸೋಲುವಷ್ಟು ದೂರ ಹಬ್ಬಿ ಹರಡಿರುವ ಹಸುರು ನೆಲ. ಬರುಬರುತ್ತ ಕಾಡು ದಟ್ಟವಾಗುತ್ತದೆ. ಘಟ್ಟಗಳನ್ನು ಏರಿಕೊಂಡು ಸಿಮೆಂಟಿನ ನೀಳಹಾದಿಯಲ್ಲಿ ಬಸ್ಸು ವೇಗವಾಗಿ ಚಲಿಸುತ್ತಿತ್ತು. ಹಾಗೆಯೇ ವೇಗವಾಗಿ ಹಿಂದೆ ಸರಿದು ಹೋಗುವ ನಿಬಿಡವಾದ ಕಾನನ ಹಾದಿಯ ಎರಡೂ ಬದಿಗೂ ಹಬ್ಬಿರುವ ದಟ್ಟಡವಿಯನ್ನು ಕೊರೆದುಕೊಂಡು, ಹಾಗೆ ಹೊರಳಿ, ಹೀಗೆ ತಿರುಗಿ, ಒಮ್ಮೆ ಕೆಳಗೆ ಮುಖಮಾಡಿ, ಇನ್ನೊಮ್ಮೆ ಮೇಲಕ್ಕೆ ಮಾಡಿ ಪಯಣಿಗರನ್ನು ತೂಗಿ ತೂಗಿ ಚಲಿಸುತ್ತಿರುತ್ತದೆ ಬಸ್ಸು.

ಚೆಲುವೆಯ ಉಂಗುರುಗೂದಲಿನಂತೆ ಮಾಲೆಮಾಲೆಯಾಗಿ ಹಬ್ಬಿಕೊಂಡಿರುವ ಬೆಟ್ಟಗಳು, ಗಗನ ಚುಂಬಿಯಾದ ವೃಕ್ಷಗಳು ಅವುಗಳನ್ನೇರಿ ಹೋಗಿ, ಎದುರುಬದುರು ನಿಂತುಕೊಂಡು ಮುಖಮುಖ ನೋಡಿಕೊಳ್ಳುತ್ತಿವೆ. ಎಂಥ ಹಸುರು ಅದು! ಹಾಗೆಯೇ ಕಿರವತ್ತಿಯ ಬಳಿಯ ಕಾನನಗಳನ್ನು ದಾಟಿ, ಎಲ್ಲಾಪುರದ ಪುಟ್ಟ ಬೆಟ್ಟಗಳನ್ನೇರಿ ಮುಂದೆ ಹೋಗಬೇಕು. ಆಳವಾದ ಕೊಳ್ಳಗಳು, ಅವುಗಳ ಅಂಚಿನಲ್ಲೇ ಬಸ್ಸಿನ ಹಾದಿ, ಕೆಳಗೆ ನೋಡಿದರೆ ತಲೆ ತಿರುಗಬೇಕು. ಈ ಆಳವಾದ ಕಂದರಗಳಲ್ಲಿ ಬಿದಿರುಮಳೆಗಳು ಇಳಿದು ಹೋಗಿ ಸುಳಿಯುತ್ತಿರುವ ತಂಗಾಳಿಯಲ್ಲಿ ಕೊಳಲೂದುತ್ತಿವೆ. ಪೊದೆಪೊದೆಯಾಗಿ ಬೆಳೆದ ಕೇದಗಿಯ ಬನಗಳಿಂದ, ಚಂದನದ ಮರಗಳಿಂದ ಮಂದವಾದ ವಾಸನೆ ತೀಡಿ ಬರುತ್ತಿದೆ. ಸಂಸ್ಕೃತ ಕಾವ್ಯಗಳಲ್ಲಿ ಹೇರಳವಾಗಿ ಬರುವ ಮಲಯ ಪರ್ವತದ ಪ್ರದೇಶ ಇದೇ. ಇಂತಹ ಚೆಲುವಿಗೆ ಸೌಂದರ್ಯಾರಾಧಕರಾದ ನಮ್ಮ ಕವಿಗಳು ಮಾರು ಹೋಗಿದ್ದರೆ ಅದರಲ್ಲಿ ಆಶ್ಚರ್ಯವಾದರೂ ಏನು?

ಅರಬೈಲಿನ ಆ ಘಟ್ಟಗಳ ಚೆಲುವು ಅಪೂರ್ವ ಚೆಲುವು, ಮತ್ತೆ, ತೇಗ, ಬಿದಿರುಮಳೆ ಇವುಗಳ ಹುಚ್ಚು ಹಸಿರು ಬೆಟ್ಟಗಳಲ್ಲೆಲ್ಲಿ ಪಸರಿಸಿಕೊಂಡಿದೆ. ಅಲ್ಲಿ ಹಾದಿ ಮಾಡಿಕೊಂಡು ಕಣ್ಣು ಮಿಟುಕಿಸುವ ತೊರೆಗಳು, ಒಂದೆಡೆ ಆಳವಾದ ಕಂದರಗಳಾದರೆ ಇನ್ನೊಂದಡೆ ಗಗನದಾಟ ಮೊಗಬಾಚಿರುವ ತುಂಗಶಿಖರಗಳು. ಗಿರಿಕಂದರಗಳನ್ನೆಲ್ಲ ಒಂದೇ ರೀತಿಯಾಗಿ ಮುಸುಗಿಕೊಂಡಿರುವ ದಟ್ಟ ಹಸಿರು.

ಈ ವೇಳೆಗೆ ಆಗಲೇ ಸೂರ್ಯ ಪಡುವಣ ಗಿರಿಗಳ ಮೇಲೆ ವಿಶ್ರಮಿಸತೊಡಗಿದ್ದ. ಎಡಗಡೆಗೆ ಮೆಟ್ಟಲು ಮೆಟ್ಟಲಾಗಿ ಏರಿಹೋಗಿ ದಿಂಗತವನ್ನು ತಲುಪಿರುವ ಘಟ್ಟಗಳ ಮೇಲೆ ಸೂರ್ಯನ ಮಾಗಿದ ಕಿರಣಗಳು ಚೆನ್ನಾಟವಾಡುತ್ತಿವೆ. ಬಲಗಡೆಗೆ ಕೊಳ್ಳಗಳನ್ನಿಳಿಯುತ್ತ ಕ್ರಮವಾಗಿ ವರ್ಧಿಸುತ್ತಿದ್ದ ನೆಳಲು, ನೆಳಲು–ಬೆಳಕುಗಳ ಈ ಕಣ್ಣುಮುಚ್ಚಾಲೆಯನ್ನು ನೋಡುವುದಕ್ಕೆ ಕಣ್ಣು ಸಾಲುವುದಿಲ್ಲ.

ದಟ್ಟಡವಿಯಲ್ಲಿ ದಾರಿ ಮಾಡಿಕೊಂಡು ನಾಗರಹಾವಿನಂತೆ ಬಿದ್ದುಕೊಂಡಿರುವ ದಾರಿಯನ್ನು ಹಿಂದೆ ಹಾಕುತ್ತ, ಬೆಟ್ಟಗಳನ್ನು ಬಳಸಿಕೊಂಡು, ನೂರಾರು ಭಯಾನಕವಾದ ತಿರುವುಗಳನ್ನು ದಾಟುತ್ತ, ಮುಂದೆ ಸಾಗಿತ್ತು ಬಸ್ಸು, ಆ ಕಡೆಗೆ ನೋಡಬೇಕೋ, ಈ ಕಡೆಗೆ ನೋಡಬೇಕೋ ತಿಳಿಯದಂತಹ ಅಪೂರ್ವ ಸೌಂದರ್ಯ ಮೈಚಾಚಿಕೊಂಡು ಮಲಗಿದೆ. ಬಸ್ಸಿನಲ್ಲಿ ಅತ್ತೊಮ್ಮೆ, ಇನ್ನೊಮ್ಮೆ ಓಡಾಡಿ ಆ ಚೆಲುವನ್ನು ಹೀರಿ ಹೀರಿ ತೃಪ್ತರಾದೆವು. "ನೋಡದೋ ಪ್ರಿಯಬಂಧು, ಸಹ್ಯಾದ್ರಿ ಕಾನನಗಳು,ಮಾಂಗದಿ ಸೃಷ್ಟಿ ದೃಶ್ಯ ವೈಕುಂಠವನ ನಮ್ಮಿದ' ಎಂದ ಪುಟ್ಟಪ್ಪನವರ ಕೆಲವು ಸಾಲುಗಳನ್ನು ಮನದಲ್ಲೇ ಕುರುಕಿಕೊಂಡೆ.

ದಾರಿಯಲ್ಲಿ ಎರಡು ಪುಟ್ಟ ಜಲಪಾತಗಳೂ ಕಾಣಿಸಿಕೊಂಡವು. ಇನ್ನೂ ನಮಗೆ ಕಾಣದ ಆಚೆ, ಈಚೆ ಮೊರೆಯುತ್ತಿರುವುವು ಎಷ್ಟೋ ಏನೋ! ಸಂಜೆಯ ಹಕ್ಕಿಗಳು ಹಾರಾಡಿ, ಹಾಡಿ, ದಣಿದು ಬಂದು ಗುಂಪು ಗುಂಪಾಗಿ ಗೂಡಿಗೆ ತೆರಳುತ್ತಿವೆ. ಅಲ್ಲಿ ಇಲ್ಲಿ ನಿಂತ ನೀರು ಸೋಗಲಾಡಿ ಹಣ್ಣಿನಂತೆ ತೆರೆಯ ನಿರಿಯ ಚಿಮ್ಮಿ ಚಿಮ್ಮಿ, ಮತ್ತೆ ಮತ್ತೆ ತೀಡಿಕೊಳ್ಳುತ್ತಿದೆ. ಸುತ್ತಲಿನ ಗಿಡಮರಗಳು ಬಾಗಿ ಆ ನೀರಿನಲ್ಲಿ ತಮ್ಮ ಪ್ರತಿಬಿಂಬವನ್ನು ನೋಡಿಕೊಳ್ಳುತ್ತಿವೆ. ಎಲ್ಲೋ ತುಸು ಸಮತಟ್ಟಾದ ನೆಲದಲ್ಲಿ ಅಷ್ಟಿಷ್ಟು ಭತ್ತದ ಗದ್ದೆಗಳು, ಶಾಲಿಯ ತಿಳಿಹಸಿರು ಬನಗಳು ಪ್ರಕೃತಿಯ ವೈಭವ-ವಿಲಾಸವನ್ನು ಕಂಡು ಏನೇನೋ ಆಡಿಕೊಳ್ಳುತ್ತಿವೆ. ಅಡಿಕೆ, ತೆಂಗುಗಳ ಗರಿಗಳು ಸಳಸಳ ಸದ್ದು ಮಾಡುತ್ತ ಸಂಧ್ಯಾರವಿಯ ಬೆಳಕಿನಲ್ಲಿ ಮಾರ್ಪೊಳೆದು ಚಿನ್ನದ ಕರವಾಲಗಳನ್ನು ನೆನಪಿಸುತ್ತಿವೆ. ಭತ್ತದ ಗದ್ದೆಗಳಿದ್ದಲ್ಲಿ ನಾಲ್ಕಾರು ಪುಟ್ಟ ಗುಡಿಸಲು. ಅಷ್ಟಷ್ಟೇ ಒಂದೊಂದು ಊರು. ಲಂಗೋಟಿ ಹಾಕಿ, ಬರಿ ಮೈಯಿಂದ ಹೊಲಗಳಲ್ಲಿ ಓಡಾಡುತ್ತಿದ್ದರು ಇಲ್ಲಿಯ ನಿವಾಸಿಗಳು. ಈ ಜನರ ಬದುಕು ನಿಜವಾಗಿ ಎಂತಹ ಸೌಭಾಗ್ಯಶಾಲಿ! ದಿನನಿತ್ಯ ವಿರಾಟ್‌ಪ್ರಕೃತಿ, ತನ್ನ ಮಂದಹಾಸದಿಂದ ಈ ಜನರನ್ನು ಲಾಲಿ ಹಾಡಿ, ತನ್ನ ಉಡಿಯ ತೊಟ್ಟಿಲಲ್ಲಿ ಚುಕ್ಕು ತಟ್ಟಿ ಮಲಗಿಸುತ್ತಾಳೆ; ಆದರೆ... ಯಾರಿಗೆ ಗೊತ್ತು ? ಮಲೆನಾಡಿನ ಈ ನಿರ್ಜನ ವನಗಳಲ್ಲಿ ಬಡ ಗುಡಿಸಿಲುಗಳಲ್ಲಿ ಆಧುನಿಕ ಸೌಕರ್ಯಗಳಿಲ್ಲದೆ ಕಳೆಯಬೇಕಾಗಿರುವ ಅವರ ಬದುಕಿನಲ್ಲಿ ಏನೇನು ಕಷ್ಟ-ನಿಷ್ಟುರಗಳಿವೆಯೊ! ದೂರದ ಮಾತು ಯಾವಾಗಲೂ ಚೆಂದ, ಅನುಭವಿಸಿ ನೋಡಿದಾಗಲೇ ನಿಜಸ್ಥಿತಿಯ ಅರಿವಾಗುವುದು.

ಅಂಕೋಲಾದಲ್ಲಿ ಬಸ್ಸು ಬಹಳ ಹೊತ್ತು ನಿಂತು, ಕತ್ತಲಾಗಿಯೇ ಮುಂದೆ ಹೊರಟುದರಿಂದ ನಾವು ನಿರಾಶರಾದೆವು. ದೂರದ ಪ್ರವಾಸದ ದಣಿವು ಬೇರೆ, ಕಾರವಾರಕ್ಕೆ ಬಂದಾಗ ರಾತ್ರಿಯ ಗಂಟೆ ಎಂಟಾಗಿತ್ತು. ನಾವು ಹೊರಟ ವಿಷಯವನ್ನು ನಮ್ಮ ಕಾರವಾರದ ಗೆಳೆಯರಿಗೆ ತಿಳಿಸಿರಲಿಲ್ಲವಾದ್ದರಿಂದ, ಅವರ ಕೋಣೆಯನ್ನು ಹುಡುಕುವುದು ತುಸು ಕಷ್ಟದ ಕೆಲಸವೇ ಆಯಿತು. ಅಂತೂ ಒಂಬತ್ತು ಗಂಟೆಗೆ ಅವರ ಕೋಣೆ ಸಿಕ್ಕಿತು. ಅವಸರವಸರವಾಗಿ ಊಟ ಮಾಡಿದವು. ಕಡಲನ್ನು ನೋಡಬೇಕೆಂದು ನಾವು ತುಂಬ ಆತುರರಾಗಿದೆವು ಬೆಳುದಿಂಗಳ ದಿನಗಳು, ಕಡಲ ತೆರೆಗಳ ಮೊರೆತ ಅಲ್ಲಿಗೂ ಕೇಳಿಬರುತ್ತಿತ್ತು. ಹಾಗೆಯೇ ಕಡಲ ಕಡೆಗೆ ತಿರುಗಾಡಿಕೊಂಡು ಬರಲು ಹೊರಟೆವು, ತೆಂಗು, ಗಾಳಿಮರಗಳ ನೀಳವಾದ ನೆರಳು ಕಡಲ

ತೀರದ ಮೇಲೆ ಒರಗಿಕೊಂಡಿತ್ತು. ಆ ನೆಳಲನ್ನು ದಾಟುತ್ತ, ತೆಳುಮಳಲನ್ನು ತುಳಿಯುತ್ತ ಕಡಲಿನ ಹತ್ತಿರ ಹತ್ತಿರ ಬಂದವು.

ಕಡಲಿನ ಬಗ್ಗೆ ನಾನೇನೋ ತುಂಬ ಅದ್ಭುತ ಕಲ್ಪನೆಗಳನ್ನು ಕಟ್ಟಿಕೊಂಡಿದ್ದೆ, ಮೈಲುಗಟ್ಟಲೆ ಉದ್ದಗಲಗಳುಳ್ಳ ಮಳಲ ರಾತ್ರಿ ಆನೆಯ ಗಾತ್ರದ ತೆರೆಗಳು, ಧಡು ಎಂದು ಅಪ್ಪಳಿಸುವ ತೆರೆಗಳ ಆದ್ಭುತ ಶಬ್ದ, ದೂರ...ಬಹು ದೂರದವರೆಗೂ ಹಬ್ಬಿರುವ ವಿಶಾಲ ಜಲನಿಧಿ.. ಅದೊಂದೂ ಸತ್ಯವೆಂದು ತೋರಲಿಲ್ಲ. ನನಗೆ ಕಾರವಾರದ ಕಡಲು ತುಂಬ ಪ್ರಶಾಂತವಾದುದು, ಸುತ್ತಲೂ ಬಳಸಿರುವ ಬೆಟ್ಟಗಳನ್ನು ಒತ್ತಿಕೊಂಡು ಸಾಗರದ ನೀರು ಒಳಸೇರಿರುವುದರಿಂದ ಸಮುದ್ರದ ಅಬ್ಬರ ಅಷ್ಟಾಗಿ ಕಾಣಬರುವುದಿಲ್ಲ ಇಲ್ಲಿ. ನಾನು ನೋಡಿರುವ ಅಣೆಕಟ್ಟಿನ ತೆರೆಗಳಿಗಿರುವಷ್ಟು ರಭಸವೂ ಈ ತೆರೆಗಳಿಲ್ಲ. ಸಾಗರದಲ್ಲಿ ಅಲ್ಲಲ್ಲಿ ಪುಟ್ಟ ಪುಟ್ಟ ನಡುಗಡ್ಡೆಗಳಿವೆ. ಅವುಗಳಲ್ಲೊಂದು ತೀರದಿಂದ ಸುಮಾರು ಏಳು ಮೈಲು ಅಂತರದಲ್ಲಿದೆ. ಅದು ತುಂಬ ಸುಂದರವಾದ ಸ್ಥಳವೆಂದು ನನ್ನ ಗೆಳೆಯರು ಹೇಳಿದರು. ಶಾಲೆಯ ಮಕ್ಕಳು ವನಭೋಜನಕ್ಕೆಂದು ಅಲ್ಲಿಗೆ ಹೋಗುತ್ತಾರಂತೆ. ಅಲ್ಲಿ ಅನೇಕ ಬೆಟ್ಟದ ಗಾತ್ರದ ಬಂಡೆಗಳಿವೆಯಂತೆ. ಅಲ್ಲಿ ಒಂದು ಬೆಳಕಿನ ಮನೆ (Light house) ಕೂಡ ಇದೆ. ದೂರದ ಹಡಗುಗಳಿಗೆ ದಾರಿ ತೋರಿಸಲು ಅದನ್ನು ಹಾಕಿದ್ದಾರಂತೆ. ಅದರ ಬೆಳಕು ರಾತ್ರಿಯೆಲ್ಲ ಅಲ್ಲಿಯ ಕಂಬದ ಮೇಲೆ ಸುತ್ತುತ್ತಿರುತ್ತದೆ.

ನಾವು ಮಳಲಿನ ಮೇಲೆ ಮಲಗಿಕೊಂಡು ಏನೇನೋ ಮಾತನಾಡಿದಪ್ಪು, ಬಹಳ ದಿನಗಳ ಮೇಲೆ ಗೆಳೆಯರ ಭೇಟಿ ಎಂದರೆ ಕೇಳುವುದಿದೆಯ? ಆಗಾಗ ಬೆಳಕಿನ ಮನೆಯ ಮೇಲೆ ಸುತ್ತುಹಾಕುತ್ತಿದ್ದ ಶೋಧಕ ದೀಪ(Search light)ದ ಬೆಳಕು ನಮ್ಮ ಮೇಲೂ ಮಂದಪ್ರಕಾಶವನ್ನು ತೂರಿ ಮರೆಯಾಗುತ್ತಿತ್ತು. ತಂಗಾಳಿ ಸುಖವಾಗಿ ನೀಡುತ್ತಿತ್ತು, ಮಾದಕವಾದ ಬೆಳುದಿಂಗಳು ಬೇರೆ,

ಸರಿರಾತ್ರಿ. ಸಾಗರದ ತೆರೆಗಳ ಸದ್ದು ಮಂದವಾಗತೊಡಗಿತ್ತು. ಮಳಲ ದ0ಡೆಯುದ್ದಕ್ಕೂ ಬೆಳೆದಿರುವ ತುಂಗತರುಗಳು ಮೌನವಾಗಿದ್ದವು. ಕ್ಷಿತಿಜದ ಸುತ್ತಲೂ ಬೆಟ್ಟಗಳು ಕಡಲ ನಡುವೆ, ಮುಗಿಲ ಮೈಯ ಕೆಳಗೆ ಸದ್ದು ಮಾಡದ ಒರಗಿಕೊಂಡಿವೆ. ದೂರದಲ್ಲಿ ಎಲ್ಲೋ ಒಂದಡೆ ನೀಲ ಬಾನು ಸಾಗರದ ಜೊತೆಗೆ ಬೆರೆದು, ಮುಗಿಲೇ ಸಾಗರವಾಗಿ ಭೂಮಿಯ ಮೇಲೆ ಚಾಚಿಕೊಂಡಂತಿದೆ. ಮೇಲೆ ತಾರೆಗಳ ಬಳಗ, ಪ್ರಕೃತಿಯ ತೂಗುತೊಟ್ಟಿಲಲ್ಲಿ ಮಲಗಿ ಸುಖವಾಗಿ ನಿದ್ದ ಹೊಳಗಿರುವ ಕಾರವಾರದ ಮಗುವಿಗೆ ಗುಬ್ಬಿಯ ಚಟ್ಟಾಗಿ ತೂಗಾಡುತ್ತಿದೆ. ನಾನು ಪರವಶನಾಗಿ ಹೋದೆ

ತುಸು ಹೊತ್ತು ಹಾಗೆಯೇ ಕುಳಿತಿದ್ದು ಮೇಲೆದ್ದು ಮನೆಯ ಕಡೆಗೆ ಹೊರಟೆವು. ದಂಡೆಯ ಮೇಲಿದ್ದ ಗಾಳಿಯ ಮರವೊಂದಕ್ಕೆ ಬಹಳ ಎತ್ತರದಿಂದ ಒಂಟಿಯಾದ ಒಂದು ಬೇರು ನೇತುಬಿದ್ದಿತ್ತು. ಅದನ್ನು ಹಿಡಿದು ತೂಗಾಡಿದೆವು. ಮಕ್ಕಳಂತೆ ನಾನು–ನೀನೆಂದು ಜಗಳವಾಡಿದವು, ಆ ಬೇರು ಹಿಡಿದು

ಬೀಕುಹೊಡೆಯಲು, ಪ್ರಕೃತಿಯ ವಿರಾಟ ಸ್ವರೂಪ ಉಂದೆಡೆ, ಸಮುದ್ರದ ಗಂಭೀರ ಮೌನ ಒಂದೆಡೆ, ಇಂಥ ಭವ್ಯ ವಾತಾವರಣದಲ್ಲಿ ಮನುಷ್ಯ ಮಗುವಲ್ಲದೆ ಇನ್ನೇನಾದಾನು?

ಮರುದಿನ ಬೆಳಗಾಗುತ್ತಲೇ ಚಹ ತೆಗೆದುಕೊಂಡು ಮತ್ತೆ ಕಡಲಿಗೆ ಹೋದೆವು. ಸೂರ್ಯನಿನ್ನೂ ಸಹ್ಯಾದ್ರಿಯ ಗಿರಿಶಿಖರಗಳನ್ನು ದಾಟಿ ಬಂದಿರಲಿಲ್ಲ, ಅರುಣಾರುಣ ಛಾಯೆ ಬಾನಿನಲ್ಲಿ ಚಿತ್ರ ವಿಚಿತ್ರ ಚಿತ್ರಗಳನ್ನು ಬಿಡಿಸತೊಡಗಿತ್ತು. ಕಡಲ ತೆರೆಗಳಿಗೆ ಹತ್ತಿ ಹತ್ತಿಕೊಂಡೇ ನಿಂತೆವು. ಕಡಲಕರೆಯನ್ನು ಬಳಸಿ ನಿಂತಿದೆ ಸುತ್ತು, ಕಡೆಗೂ ಅಪೂರ್ವ ನಿಸರ್ಗಶ್ರೀ, ಕಡಲದೊರೆ ತನ್ನ ನಿಡುದೋಳುಗಳನ್ನು ಚಾಚಿ, ಅವಳನ್ನು ತನ್ನೆದೆಗೆ ಹಗುರಾಗಿ ಒತ್ತಿಕೊಂಡು, ತೆರೆಯ ತುಟಿಗಳಿಂದ ಅವಳನ್ನು ಚುಂಬಿಸಬೇಕೆಂದು ಮು0ದೆ ಮುಂದ ತರುತ್ತಾನೆ. ಮೊಲೆಯ ನಗು, ಮುಖದಲ್ಲಿ ಲಾಸ್ಯವಾಡುತ್ತಿದೆ. ತುಟಿಗಳನ್ನು ಹತ್ತಿರ ಹತ್ತಿರ ತಂದು, ಇನ್ನೇನು ಮುದ್ದಿಸಬೇಕು, ಅಷ್ಟರಲ್ಲಿ ರವಿಯನ್ನು ಕಂಡು ನಾಚಿ ಒಮ್ಮೆಲೆ ತುಟಿಗಳು ಕಂಪಿಸುತ್ತವೆ. ಮತ್ತೆ ಹಿಂದೆ ಸರಿಯುತ್ತಾನೆ. ಮತ್ತೆ ನಿಸರ್ಗರಮಣಿ ತನ್ನ ಲಾಸ್ಯಲಾವಣ್ಯಗಳಿಂದ ಅವನನ್ನು ಆಕರ್ಷಿಸಿಕೊಳ್ಳುತ್ತಾಳೆ. ಮತ್ತೆ ಅದೇ ಆಟ. ಪ್ರಕೃತಿ ಪುರುಷರ ಚಿರಂತನ ಯೌವನದ ಈ ಸಂತೆ ಅನಾದಿಕಾಲದಿಂದಲೂ ನಡೆದೇ ಇದೆ. ರಾತ್ರಿಯ ನೀಲ ಬಾನಲಿ ಚಂದ್ರ ತೂಗುತ್ತಿರಲು, ಚಿಕ್ಕೆ ಕಾವಲಾಗಲು, ಸಮುದ್ರರಾಜ ಉಕ್ಕೇರಿಬಂದು ಅವಳನ್ನು ತನ್ನ ತೋಳಬಂದಿಯನ್ನಾಗಿ ಮಾಡಿಕೊಳ್ಳುತ್ತಾನೆ. ಈ ಭಾವವನ್ನು ಹಿಡಿದು ಊರಿಗೆ ಬಂದ ಮೇಲೆ ನಾನೊಂದು ಕವಿತೆಯನ್ನು ಬರೆದೆ.

ಮೀನುಗಾರರು ತಮ್ಮ ಬಲೆಗಳನ್ನು ಸಿದ್ಧಪಡಿಸಿಕೊಂಡು ದೋಣಿಗಳನ್ನು ಕಡಲಿಗಿಳಿಸುತ್ತಿದ್ದರು. ಆಗಲೇ ಹೊರಟುಹೋಗಿದ್ದ ಅನೇಕ ಚಿಕ್ಕಪುಟ್ಟ, ನಾವೆಗಳು ಕಡಲಿನಲ್ಲಿ ಬಹು ದೂರದವರೆಗೆ ಚದುರಿಹೋಗಿದ್ದುವು. ನಾವಿಕರ ಹಾಡು, ಸಾಗರ ತರಂಗಗಳಗುಂಟ ಅಲೆಯಲೆಯಾಗಿ ತೇಲಿಬರುತ್ತಿದ್ದುವು. ಕವಿ ಬೇಂದ್ರೆಯವರ

ದಿನದಿನ ಕಡಲಿಗೆ ಹೋಗುವೆನೋ
ತೆರೆಗಳ ಲೀಲೆಯ ನೋಡುವೆನೊ...

ಎಂದು ಆರಂಭವಾಗುವ 'ಪಡುವಲ ಕಡಲ ಅಂಬಿಗರ ಹಾಡು' ಎಂಬ ಕವಿತೆ ನೆನಪಿಗೆ ಬಂತು. ನನಗೆ ನೆನಪಿದ್ದಷ್ಟು ಸಾಲುಗಳನ್ನು ಅಲ್ಲಿ ಹಾಡಿದೆ, ನನ್ನ ಕರ್ಕಶ ಕಂಠದಿಂದ.

ಅಲ್ಲಿಂದ, ಅಲ್ಲಿಯೇ ಎಡಗಡೆಗಿದ್ದ ಡೆಪ್ಯೂಟಿ ಕಮಿಶನರ್ ಬಂಗ್ಲೆ ಇರುವ ಪುಟ್ಟ ಬೆಟ್ಟವನ್ನೇರಿ ಹೋದೆವು, ಬ್ರಿಟಿಷ್ ಅಧಿಕಾರಿಗಳಿಗಾಗಿ ವಿಶೇಷ ವೆಚ್ಚದಿಂದ ಇಲ್ಲಿ ಕಟ್ಟಡಗಳನ್ನು ಕಟ್ಟಿದ್ದರಂತೆ. ಇಲ್ಲಿ ನಿಂತರೆ ಕಾರವಾರದ ಹಿಂದೆ ಇರುವ ಸಹ್ಯಾದ್ರಿಯ ಉತ್ತುಂಗ ಶಿಖರಗಳ ನೋಟ ಸುಂದರವಾಗಿ ಕಾಣುತ್ತದೆ. ಮಂಜು ಹರಿಯದ ಮುನ್ನ ಆ ದೃಶ್ಯಗಳನ್ನು ನೋಡಬೇಕು. ಏನೇ ಆದರೂ ಕಾರವಾರವನ್ನು ಕಟ್ಟಿದವರು

ನಿಜವಾಗಿಯೂ ಮಹಾ ರಸಿಕರು, ಇತ್ತ ಕಡಲು, ಅತ್ತ ಕಾನನ, ಸುತ್ತಲೂ ಗಿರಿಸಾಲುಗಳು, ಎತ್ತೆತ್ತಲೂ ಭವ್ಯವಾದ ಹಸಿರಿನಿಂದ ಆಚ್ಛಾದಿತವಾದ ಭೂಮಿ, ಅಂತೆಯೇ ಆಚಾರ್ಯ ಶ್ರೀಯವರು ಕಾರವಾರವನ್ನು 'ಚೆಲುವಿನ ಕಣಿ' ಎಂದು ಕರೆದಿರಬೇಕು.

ಆಗಲೇ ಬಿಸಿಲೇರತೊಡಗಿತ್ತು. ಬಿಸಿಲೆಂದರೆ ಕಾರವಾರವನ್ನೇ ನೆನೆಸಿಕೊಳ್ಳಬೇಕು. ಕಡಲ ತೀರದ ಊರುಗಳಲ್ಲಿ ಸಾಮಾನ್ಯವಾಗಿರುವ ಜಿಗಿಜಿಗಿ ಬಿಸಿಲು, ಗಾಳಿಯಂತೂ ಎಲ್ಲೋ ತಲೆಮರೆಸಿಕೊಂಡು ಹೋಗಿತ್ತು. ಹತ್ತಿರ ಕಡಲಿದ್ದೂ, ಅಷ್ಟೆಲ್ಲ ಹಸಿರು ಇದ್ದರೂ ವಿಪರೀತ ಸೆಕೆ ಕಾರವಾರದಲ್ಲಿ, ಅಷ್ಟಕ್ಕೆ ತಿರುಗಿ ಬಂದು, ಊಟ ಮಾಡಿ, ಒಂದೆರಡು ಗಂಟೆ ವಿಶ್ರಾಂತಿ ತೆಗೆದುಕೊಂಡೆವು. ಸೆಕೆ ಇನ್ನೂ ಅಸಹನೀಯವಾಗಿತ್ತು. ತಣ್ಣೀರಿನ ಸ್ನಾನ ಎಷ್ಟೋ ಹಿತವೆನಿಸಿತು. ಆ ಮೇಲೆ ಚಹ ತೆಗೆದುಕೊಂಡು ಮತ್ತೆ ಹೊರಟೆವು,

ಡೆ. ಕಮಿಶನರ್ ಬಂಗ್ಲೆಯಿಂದ ತುಸು ದೂರದಲ್ಲೇ ಮುಂದೆ ಬಂದರದ ಸ್ಥಳವಿದೆ. ಕಾರವಾರ ನೈಸರ್ಗಿಕ ಬಂದರವಂತೆ, ಝುಕೋಸ್ಲಾವಾಕಿಯಾಕ್ಕೆ ರವಾನೆಯಾಗಬೇಕಾಗಿದ್ದ ಬಳ್ಳಾರಿ, ಹೊಸಪೇಟೆಗಳಿಂದ ಬಂದಿದ್ದ ಮ್ಯಾಂಗ್ನೀಸ್ ಅದಿರನ್ನು ರಾಶಿ ಹಾಕಿದ್ದರು. ಹಡಗು ಬಂದಾಗ ದಂಡೆಯಿಂದ ಸುಮಾರು ಎರಡು ಮೈಲು ಅಂತರದಲ್ಲಿ ನಿಲ್ಲುವುದಂತೆ. ಇಲ್ಲಿಂದ ಮತ್ತೆ ಯಂತ್ರಗಳನ್ನು ಜೋಡಿಸಿರುವ ನಾವೆ(Launch)ಗಳ ಮುಖಾಂತರ ಅದಿರನ್ನು ಹಡಗಿಗೆ ಸಾಗಿಸಬೇಕು. ಒಂದು ಹಡಗು ಮುಂಬಯಿ, ಮಂಗಳೂರುಗಳ ನಡುವೆ ವಾರಕ್ಕೊಂದು ಸಲ ಓಡಾಡುತ್ತದಂತೆ. ಮಂಗಳೂರಿನಿಂದ ಮುಂಬಯಿಗೆ ಹೋಗಬೇಕಾದ ಹಡಗು ಆ ರಾತ್ರಿ ಬರುವುದಿದ್ದುದರಿಂದ, ಪ್ರಯಾಣಿಕರು ಆಗಲೇ ಬಂದು ನೆರೆಯತೊಡಗಿದ್ದರು. 'ಹಡಗನ್ನು ನೋಡಬಹುದಲ್ಲಾ' ಎಂದು ನಮಗೆಲ್ಲ ತುಂಬ ಆನಂದವಾಯಿತು.

ಅಷ್ಟರಲ್ಲಿ ಸಂಜೆಯ ರವಿಯ ಸುವರ್ಣರಂಜಿತ ಕಿರಣಗಳಿಂದ ಸುತ್ತಲಿನ ಸೃಷ್ಟಿ ಪುನೀತವಾಗಿತ್ತು. ಪಡುವಣ ಕಡಲಲ್ಲಿ ಸೂರ್ಯ ಕಾಲುಗಳನ್ನಿಳಿಯಬಿಟ್ಟು ನಗುತ್ತಲಿದ್ದ. ನಾವಿಕರು ದೋಣಿಗಳನ್ನು ದಡದತ್ತ ಸಾಗಿಸತೊಡಗಿದ್ದರು. ಹಿಡಿದು ತಂದ ಮೀನುಗಳನ್ನು ಹೆಂಗಸರು ಬುಟ್ಟಿಯಲ್ಲಿ ತುಂಬಿಕೊಂಡು ಮನೆಗೆ ನಡೆದಿದ್ದರು. ಪಡುವಣ ಕಡಲಿಂದ ಮೇಲೆದ್ದು ಬರುತ್ತಿದ್ದ ತುಂಡುಮೋಡಗಳನ್ನು ಸಂಜೆಯ ರವಿ ಕುಶಲ ಚಿತ್ರಶಿಲ್ಪಿಯಂತೆ ವಿವಿಧ ರೀತಿಗಳಲ್ಲಿ ಬಣ್ಣಕೊಟ್ಟು ಬದಲಿಸುತ್ತಿದ್ದ ರೀತಿ ನಮ್ಮನ್ನು ಬೆರಗುಗೊಳಿಸಿತು. ಸಂಜೆಯ ತಿಳಿಗಾಳಿ ಬೀಸತೊಡಗಿದ್ದರಿಂದ ವಾತಾವರಣ ಹಿತವಾಗತೊಡಗಿತ್ತು. ದೂರದಿಂದ ಸರಳರೇಖೆಯಲ್ಲಿ ಸಾಗಿ ಬಂದು ನೊರೆಯನ್ನು ಚೆಲ್ಲುತ್ತ ತಡಿಯ ಮೇಲೆ ನಿಧಾನವಾಗಿ ಉರುಳಿಕೊಂಡು ತಿರುಗಿ ಹೋಗುತ್ತಿದ್ದ ತೆರೆಗಳ ಲೀಲೆ ಮೋಹಕವಾಗಿತ್ತು, ತುಸು ಹೊತ್ತು ನಾವೂ ಆ ತೆರೆಗಳೊಡನೆ ಆಟವಾಡಿದೆವು.

ಮರುದಿನ ಬೆಳಗಿಗೆ ಒಂದು ಟ್ಯಾಕ್ಸಿ ಮಾಡಿಕೊಂಡು ಕೋಡಿಬಾಗಕ್ಕೆ ಬಂದವು. ಕೋಡಿಬಾಗ ಅತ್ಯಂತ ಸುಂದರವಾದ ಸ್ಥಳ. ಕಾರವಾರ ನಗರದ ಉತ್ತರದ ಕೊನೆಯ ಭಾಗ ಅದು. ಸಹ್ಯಾದ್ರಿಯ ಬೆಟ್ಟಗಳನ್ನೂ, ದಟ್ಟವಾದ ಕಾಡುಗಳನ್ನೂ ಲೆಕ್ಕಿಸದೆ ತನ್ನಿನಿಯನಾದ ಸಮುದ್ರ ರಾಜನನ್ನು ಕೂಡಲೆಂದು ಆತುರವಾಗಿ ಬಂದ ಶಾಲ್ಮಲೆ(ಕಾಳಿ) ಇಲ್ಲಿ ತನ್ನ ಬಯಕೆ ಈಡೇರಿತೆಂದು ಹರ್ಷದಿಂದ ಬೀಗಿಹೋಗಿದ್ದಾಳೆ. ಪರಮಾತ್ಮನನ್ನು ಕಾಣಲೆಂದು ಹಂಬಲಿಸುವ ಭಕ್ತ, ಎದುರಾಗುವ ಎಡರುಗಳನ್ನೆಲ್ಲ ದಾಟಿ ದೇವಸಾನ್ನಿಧ್ಯವನ್ನು ಪಡೆಯುವಂತೆ ತೋರಿತು ನಮಗೆ, ಸಾಗರ–ಶಾಲ್ಮಲೆಯರ ಈ ಅಪೂರ್ವ ಸಮ್ಮಿಲನವನ್ನು ಕಂಡು, ನಾವೆಲ್ಲ ಹರ್ಷಪಟ್ಟೆವು. ನದಿಯು ತುಸು ಹಿಂದೆ ಗುಡ್ಡಗಳ ಓರೆಯಲ್ಲಿ ಮರೆಯಾಗಿದೆ. ಈಚೆಗೆ ಕಾರವಾರಕ್ಕೆ ಒತ್ತಿ ಬೆಳೆದಿದ್ದ ತಂಗಿನ ಬನಗಳ ಸೊಬಗು ಇನ್ನೂ ಮನೋಹರವಾಗಿತ್ತು.

ನದಿಯ ಆಚೆಗೆ ಸದಾಶಿವಗಡ, ನದಿಯ ಮುಖವನ್ನು ದಾಟಿ ಅಲ್ಲಿಗೆ ಹೋಗಲು ನಾವೆಗಳ ವ್ಯವಸ್ಥೆಯಿದೆ. ನಾವೆಯಲ್ಲಿ ಕುಳಿತು ಕೈಚಾಚಿ ನದಿಯ ನೀರಲ್ಲಿ ಬೆರಳಾಡಿಸುತ್ತಿದ್ದ ಹಾಗೆಯೆ ದಡ ಬಂದೇಬಿಟ್ಟಿತು.

ಸದಾಶಿವಗಡ ಮರಾಠರ ಕಾಲದಲ್ಲಿ ಹೆಸರಾದ ಒಂದು ಕೋಟೆಯಂತೆ. ಈಗ ಕೋಟೆ ಹಾಳಾಗಿದೆ. ಊರಿಗೆ ಹತ್ತಿರವೇ ಒಂದು ಪುಟ್ಟ ದಿನ್ನೆಯಿದೆ. ಅದನ್ನೇರಿ ತುದಿಗೆ ಹೋದೆವು. ಅಲ್ಲಿ ಕೋಟೆಯ ಒಂದೆರಡು ಅವಶೇಷಗಳು ಕಣ್ಣಿಗೆ ಬಿದ್ದವು. ಈ ದಿನ್ನೆಯ ಮೇಲೆ ನಿಂತು ನೋಡಿದರೆ, ಸುತ್ತಲಿನ ನೋಟ ಬಲು ಸುಂದರವಾಗಿ ಕಾಣಿಸುತ್ತದೆ. ದೂರದವರೆಗೆ ಹರಡಿ ಕೊಂಡಿರುವ ಜಲಧಿ ಕೆಳಗೆ ನೆಲಕ್ಕೆ ಒರಗಿಕೊಂಡಂತಿರುವ ತೆಂಗು–ಅಡಿಕೆ–ಗಾಳಿಮರಗಳ ಚಿತ್ರ ವಿನ್ಯಾಸ, ಜುಳುಜುಳು ಸದ್ದು ಮಾಡುತ್ತ ಕಡಲಿನಲ್ಲಿ ಕೂಡುವ ಒಂದೆರಡು ತೊರೆಗಳು ಮಳಲರಾಶಿಯಲ್ಲಿ ನುಸುಳಿಕೊಂಡು ರಜತರೇಖೆಯಂತೆ ಹರಿದು ಬರುವ ದೃಶ್ಯ, ಕಾಳೀ ನದಿಯ ಒನಪು–ವೈಯ್ಯಾರ, ಸಹ್ಯಾದ್ರಿಯ ಗಿರಿಸಾಲುಗಳು, ಸಾಗರದಲ್ಲಿಯ ನಾವೆಗಳು ಎಲ್ಲವನ್ನೂ ನೋಡಬಹುದು.

ಬೆಟ್ಟವನ್ನು ಬಿಟ್ಟು ಬರಲು ಮನಸ್ಸೇ ಆಗಲಿಲ್ಲ. 'ನಾನು ಇಲ್ಲಿಯೇ ಸಾಯುತ್ತೇನೆ' ಎಂದು ನನ್ನ ಗೆಳೆಯರೊಬ್ಬರು ಗಿಡದ ಕೆಳಗೆ ಮಲಗಿಬಿಟ್ಟರು. ಸುತ್ತಿ ಸುತ್ತಿಕೊಂಡು ಬಂದು ಸುತ್ತಲಿನ ಪ್ರಕೃತಿವೈಭವವನ್ನು ಬೇರೆ ಬೇರೆ ಕೋನಗಳಿಂದ ನೋಡಿದಂತೆಲ್ಲ ದಾಹ ಹೆಚ್ಚುತ್ತಲೇ ಇತ್ತು. ಬಿಸಿಲು ಏರತೊಡಗಿದ್ದರಿಂದ ಇಳಿದು ಕೆಳಗೆ ಬಂದೆವು.

ಸದಾಶಿವಗಡದಿಂದ ಮಾಜಾಳಿಗೆ ಎಂಟು ಮೈಲಿನ ಹಾದಿ, ಮಾಜಾಳಿಗೆ ಎರಡೇ ಫರ್ಲಾಂಗು ದೂರದಲ್ಲಿ ಗೋವೆಯ ಗಡಿ, ಅಲ್ಲಿಯವರೆಗೂ ಹೋಗಿಬರೋಣವೆಂದು ಮಾಜಾಳಿಯ ಬಸ್ಸನ್ನು ಏರಿದೆವು.

ಮಾಜಾಳಿ ಒಂದು ಪುಟ್ಟ ಹಳ್ಳಿ. ಅಲ್ಲಿ ಗೋವೆಗೆ ಹೋಗಬೇಕಾದವರನ್ನೆಲ್ಲ ತಪಾಸಣೆ ಮಾಡಲಾಗುತ್ತದೆ. ಸಶಸ್ತ್ರ ಪೊಲೀಸರು ಕಾವಲಿಗೆ ನಿಂತಿರುತ್ತಾರೆ. ನಮ್ಮನ್ನು ಅಲ್ಲಿಂದ ಮುಂದೆ ಬಿಡುವುದಿಲ್ಲವೆಂದು ಹೇಳಿದ್ದರಿಂದ, ಗೋವೆಯ ಗಡಿಯನ್ನು ನೋಡದೆ ನಿರಾಶರಾಗಿ ಅಲ್ಲಿಗೇ ಹಿಂತಿರುಗಿದೆವು.

ಹಡಗು ಹೋಗಿದೆಯೇನೋ ನೋಡಲೆಂದು ಕುತೂಹಲದಿಂದ ಕಡಲಿನತ್ತ ಧಾವಿಸಿದೆವು. ಹಡಗು ಹೊಗೆಯುಗುಳುತ್ತ ಅದೇ ತಾನೇ ಲಂಗರು ಕೀಳತೊಡಗಿತ್ತು. ನಿಧಾನವಾಗಿ ತಿರುಗಿಕೊಂಡು ಮುಂದೆ ಸಾಗಿತು. ಸಾಗುತ್ತ ಸಾಗುತ್ತ ದೂರ ಹೋದಂತೆಲ್ಲ ಸಣ್ಣದಾಗುತ್ತ ನೀಲಸಿಂಧುವಿನಲ್ಲಿ ಬಿಂದುವಾಗಿ ಕರಗಿಹೋಗುವುದನ್ನು ಬಹುಹೊತ್ತು ನೋಡುತ್ತ ನಿಂತಿದ್ದೆವು.

ಆ ದಿನ ಸಂಜೆ ಕಾರವಾರದ ಪೇಟೆಯಲ್ಲಿ ತಿರುಗಾಡಿದೆವು. ಊರು ಅಂಥ ದೊಡ್ಡದೇನೂ ಅಲ್ಲ. ಒಂದು ಪಾಲಿಟೆಕ್ನಿಕ್ ಕಾಲೇಜಿದೆ, ನಾಲ್ಕೈದು ಹೈಸ್ಕೂಲು, ಕೆಲವು ಪ್ರಾಥಮಿಕ ಶಾಲೆಗಳು ಇವೆ. ಕಡಲಿಗೆ ಹೊಂದಿ ಮೀನಿನ ವ್ಯವಸಾಯ ಕೇಂದ್ರ ಒಂದಿದೆ. ಮಾರುಕಟ್ಟೆಯಲ್ಲಿ ಮೀನಿನ ಹೊರತು ಎಲ್ಲ ವಸ್ತುಗಳ ಬೆಲೆಯೂ ತುಂಬ ಜಾಸ್ತಿ, ಗಂಧದ ಹಾಗೂ ದಂತದ ಕೆತ್ತನೆಯ ಕೆಲಸದಲ್ಲಿ ಜನ ನಿಷ್ಣಾತರು, ಅಂಥ ಕೆಲವು ಅಂಗಡಿಗಳನ್ನು ನಾವು ನೋಡಿದೆವು. ಸಮುದ್ರ ದಂಡೆಯ ಮೇಲೆ ಹೊಸಮಾದರಿಯ ತಂಗುಮನೆಯೊಂದನ್ನು ಕಟ್ಟಿದ್ದಾರೆ. ಊರಿಗೆ ಅದೊಂದೇ ಒಳ್ಳೆಯ ಹೋಟಲು.

ಮರುದಿನ ನಾವು ಹುಬ್ಬಳ್ಳಿಯ ಬಸ್ಸನ್ನೇರಿದವು. ಮನಸ್ಸಿಲ್ಲದ ಮನಸ್ಸಿನಿಂದ ಕಾರವಾರದ ಚೆಲುವನ್ನೂ, ಜೀವದ ಗೆಳೆಯರನ್ನೂ ಬಿಟ್ಟು ಹೊರಡುವಾಗ, ಏನನ್ನೋ ಕಳೆದು ಕೊಂಡಂತೆ ನನ್ನ ಮನಸ್ಸು ರಿಕ್ತತೆಯನ್ನು ಅನುಭವಿಸಿತು. ಸಮುದ್ರದ ದಂಡೆಯನ್ನು ಬಳಸಿಕೊಂಡು ಸಾಗಿತ್ತು. ದಾರಿ. ಕೆಲವು ಸಲ ಪುಟ್ಟ ಬೆಟ್ಟಗಳು ಮುನ್ನೀರನ್ನು ಮರೆಮಾಡಿ ಮಾಯವಾಗುತ್ತಿದ್ದವು. ಅಡಿಕೆ ತೆಂಗುಗಳು ತಲೆಬಾಗಿ, ಕೈಬೀಸಿ, 'ಹೋಗಿಬನ್ನಿ' ಎಂದು ಹೇಳಿದವು.

ಎಂಥ ಸುಂದರ ನಾಡಿದು! ಕಾರವಾರದಂಥ ಚೆಲುವ ನಾಡು ಎಲ್ಲ ರಾಜ್ಯಗಳಲ್ಲೂ ಇರುವುದಿಲ್ಲ.

ಏನು ಚೆಲುವಿನ ನಾಡು! ಚೆಲುವು ಚೆಲ್ಲುವ ನಾಡು!
ಕನ್ನಡದ ನಾಡು!
ಏನು ಚಿನ್ನದ ನಾಡು! ನನ್ನೊಲುಮೆಯಾ ನಾಡು!
ನಮ್ಮಿನಿಯ ನಾಡು!

ಎಂದು ಆಚಾರ್ಯ ಶ್ರೀಯವರು ಹೇಳಿದ ಮಾತು ನೆನಪಿಗೆ ಬಂದವು. ಕಾರವಾರದಲ್ಲಿ ಎಲ್ಲವೂ ಇದೆ; ಆದರೆ ಅದನ್ನು ಸರಿಯಾದ ರೀತಿಯಲ್ಲಿ ನಾವು ಬಳಸಿಕೊಂಡಿಲ್ಲ. ಎಲ್ಲ ಸೌಭಾಗ್ಯವಿದ್ದೂ ಅದನ್ನು ಉಣ್ಣಲಾಗದ ನಿರ್ಭಾಗ್ಯರು ನಾವು. ನಿಸರ್ಗವು ಕಾರವಾರಕ್ಕೆ ತಾನಾಗಿ ಒದಗಿಸಿಕೊಟ್ಟುದರ ಸರಿಯಾದ

ಲಾಭವನ್ನು ಪಡೆಯಲಿಕ್ಕೆ ನಾವು ಬಹಳ ಬೆಲೆಯನ್ನೇನೂ ತೆರಬೇಕಾಗಿಲ್ಲ. ಹುಬ್ಬಳ್ಳಿಯಿಂದ ಒಂದು ರೈಲು ದಾರಿ, ಕಡಿಮೆ ವೆಚ್ಚದಲ್ಲಿಯೇ ಆಗಬಲ್ಲ ಸರ್ವಋತುಗಳ ಒಂದು ಬಂದರ, ಕೈಗೆ ಸಿಕ್ಕು ತಪ್ಪಿಸಿ ಕೊಂಡ ನೌಕಾಂಗಣ, ಕಾಳೀನದಿಯ ಜಲವಿದ್ಯುದ್ಯೋಜನ...ಅಂದಿಗೆ ಕಾರವಾರ ಜಿಲ್ಲೆಯ ಅಪಾರ ಸೌಂದರ್ಯ ಸಾರ್ಥಕವಾದೀತು. ಇದರಲ್ಲಿ ಕೇವಲ ಕಾರವಾರ ಜಿಲ್ಲೆಯ ಹಿತದ ಪ್ರಶ್ನೆಯಿಲ್ಲ. ಇಡೀ ನಾಡಿನ ಪ್ರಶ್ನೆಯೇ ಅಡಕವಾಗಿದೆ. ಆದರೆ ಅದೆಲ್ಲ ಎಂದು ನನಸಾದೀತು? ಕಾರವಾರದ ಎಲ್ಲ ಸೌಭಾಗ್ಯವೂ ಹೀಗೇ ಕಾಡುಪಾಲಾಗುವುದು ಎಂದು ನಿಂತೀತು?

ಕಾರವಾರದ ಬಗ್ಗೆ ಏನೂ ಕಳವಳಕ್ಕೆ ಕಾರಣವಿಲ್ಲ. ಇಲ್ಲಿಯ ಜನರಲ್ಲಿ ಇನ್ನೂ ಕನ್ನಡದ ರಕ್ತವೇ ಇದೆ, ಕಾರವಾರದಲ್ಲಿ ನಾನು ನಾಲ್ಕು ದಿನವಿದ್ದರೂ ಎಲ್ಲರೊಡನೆಯೂ ಕನ್ನಡದಲ್ಲೇ ಮಾತನಾಡಿದೆ. ಇಲ್ಲಿಯ ಬಹುಜನರ ಭಾಷೆ ಕೊಂಕಣಿ; ಆದರೆ ಕನ್ನಡವನ್ನು ಮಾತೃಭಾಷೆಯಾಗಿ ಉಳ್ಳವರೂ, ಕನ್ನಡವನ್ನು ಚೆನ್ನಾಗಿ ಬಲ್ಲ, ಕನ್ನಡಪರರಾದ ಕೊಂಕಣಿಗರೂ ಸೇರಿ ನೂರಕ್ಕೆ ಎಂಭತ್ತರಷ್ಟು ಜನ ಇದ್ದಾರೆ. ಅಂಗಡಿಗಳ ಎಲ್ಲ ಫಲಕಗಳೂ ಸಾಮಾನ್ಯವಾಗಿ ಕನ್ನಡದಲ್ಲೇ ಇವೆ. ಇಲ್ಲಿಯ ಮಹಾರಾಷ್ಟ್ರೀಯರ ಚಳವಳಿ ಅರ್ಥವಿಲ್ಲದ್ದು. ಕೆಲವು ಜನ ಕುಹಕಿ ಮರಾಠಿಗರ ಪ್ರಚೋದನೆಯೇ ಅದಕ್ಕೆ ಕಾರಣವೆಂದೂ ನನಗೆ ಅಧಿಕೃತವಾಗಿ ತಿಳಿದು ಬಂತು, ಶುದ್ಧ, ಮಹಾರಾಷ್ಟ್ರೀಯರು ಇಲ್ಲಿ ಬಹು ಸ್ವಲ್ಪ ಜನ ಇದ್ದಾರೆ. ಚಳವಳಿಯ ಕಾಲಕ್ಕೆ ಮಹಾರಾಷ್ಟ್ರದ ಹಳ್ಳಿಗಳಿಂದ, ಅರಿಯದ ಜನರಿಗೆ ಇಲ್ಲದ ಆಮಿಷ ತೋರಿಸಿ, ಇಲ್ಲಿಗೆ ಕರೆತಂದು ಸತ್ಯಾಗ್ರಹ ಮಾಡಿಸಲಾಯಿತೆಂದೂ, ಅದಕ್ಕೆ ಅನೇಕ ಸ್ಥಳೀಯ ಮರಾಠಿಗರೇ ಬೆಂಬಲಕೊಟ್ಟಿರಲಿಲ್ಲವೆಂದೂ ಕೆಲವರು ಹೇಳಿದರು. ಕರ್ನಾಟಕದಲ್ಲಿ ಉಳಿದರೇ ಇಂದಿಲ್ಲ ನಾಳೆ ಇಲ್ಲಿ ಬಂದರೆ, ನೌಕಾಂಗಣ, ರೈಲು, ವಿದ್ಯುದ್ಯೋಜನೆಗಳ ಲಾಭ ತಮಗೆ ತಟ್ಟುವುದೆಂದು ಈಗೀಗ ಇಲ್ಲಿಯ ಜನ ಸರಿಯಾಗಿ ಅರ್ಥಮಾಡಿ ಕೊಂಡಿದ್ದಾರೆ. ಇಲ್ಲಿ ಬಂದರವಾದರೆ ಮುಂಬಯಿ ಬಂದರದ ವ್ಯಾಪಾರಕ್ಕೆ ಧಕ್ಕೆ ತಟ್ಟಿತೆಂದು ಮರಾಠರು ಅಂಜಿಕೊಂಡಿದ್ದಾರೆ. ಅಂತೆಯೇ ಎಂದೋ ಆಗಬೇಕಾಗಿದ್ದ ಬಂದರದ ಕೆಲಸಕ್ಕೆ, ಕಾರವಾರವು ಮುಂಬಯಿ ರಾಜ್ಯದಲ್ಲಿರುವವರೆಗೂ ಅವರು ಕೇಂದ್ರದ ಮೇಲೆ ಒತ್ತಾಯ ತಂದು ಅಡ್ಡಿ ಮಾಡಿದರು. ಈಗಲೂ ಇದೇ ಕಾರಣಕ್ಕಾಗಿಯೇ ಅವರು ಕಾರವಾರವನ್ನು ಕೇಳತೊಡಗಿದ್ದಾರೆ.

ಒಟ್ಟಿನಲ್ಲಿ ಕರ್ನಾಟಕದಲ್ಲಿ ಕಾರವಾರಕ್ಕೆ ಅತ್ಯಂತ ಉಜ್ವಲ ಭವಿಷ್ಯ ಕಾದಿದೆ. ನಮ್ಮ ಸರಕಾರ ಇನ್ನೂ ಹೆಚ್ಚು ಆಸ್ಥೆವಹಿಸಿ ಈ ದಿಸೆಯಲ್ಲಿ ಕೆಲಸ ಮಾಡಿದರೆ ಕಾರವಾರಕ್ಕೂ ಹಿತ ತನ್ಮೂಲಕ ಕರ್ನಾಟಕಕ್ಕೂ ಹಿತ.

**(ಆಕರ: ಸಮಗ್ರ ಸೃಜನ – ಗಿರಡ್ಡಿ ಗೋವಿಂದರಾಜ)**

# 3.4 ದಂತ ವೈದ್ಯರೇ ನಮಸ್ಕಾರ! (ಓದು ಪಠ್ಯ)

**ಭುವನೇಶ್ವರಿ ಹೆಗಡೆ**

ಚಿಕ್ಕಂದಿನಿಂದಲೂ ನನಗೆ ಯಾರನ್ನಾದರೂ ಬೈಯುವಾಗ ಹಲ್ಲುದುರಿಸ್ತೀನಿನೋಡು" ಎಂದೇ ಬೈದು ರೂಢಿ. ಇದಕ್ಕೆ ಪ್ರತಿಫಲವೋ ಎಂಬಂತೆ ನನ್ನ ಸ್ವಂತ ಹಲ್ಲುಗಳನ್ನೇ ಗರಿಷ್ಠ ಪ್ರಮಾಣದಲ್ಲಿ ಉದುರಿಸಿಕೊಳ್ಳಬೇಕಾದ 'ದಂತ ಸ್ಥಿತಿ' ನನಗೊದಗಿಬಂತು. ಮಕ್ಕಳು ಅತ್ತರೆ ಬೆಲ್ಲ ಸಕ್ಕರೆ ತಿನ್ನಲು ಕೊಡುವ ಸಂಪ್ರದಾಯವಿರುವ ನಮ್ಮ ಮನೆಯಲ್ಲಿ ಹಲ್ಲು ನೋವು ಪಿತ್ರಾರ್ಜಿತವಾಗಿ ಬಂದ ಕಾಯಿಲೆ. ಒಂದೊಂದು ದಿನ ಒಂದೊಂದು ದವಡೆ ಬಾತು ಮನೆಯವರೆಲ್ಲ 'ಹನುಮಂತಿ' ಎಂದು ಕರೆಯತೊಡಗಿದ ಮೇಲೆ ನಾನು ದಂತ ವೈದ್ಯರನ್ನು ಸಂಪರ್ಕಿಸಲೇ ಬೇಕಾಯ್ತು.

ಜೊತೆಗೊಂದು ರಕ್ಷಣಾ ಬಾಲವನ್ನು ಕರೆದುಕೊಂಡು ದಂತ ಚಿಕಿತ್ಸಾಲಯವೊಂದರ ಒಳಹೊಕ್ಕೆ. ಹೊರಗಡೆಯ ಬಾಗಿಲು ತೆರೆದಿತ್ತು. ಡಾಕ್ಟರರ ರೂಮಿನ ಬಾಗಿಲು ಮುಚ್ಚಿತ್ತು. ಡಾಕ್ಟರರು ಬಂದಿರಲಿಲ್ಲವಾದ್ದರಿಂದ ಡಾಕ್ಟರರು ಒಳಗಿದ್ದಾರೆ ಕುಳಿತುಕೊಳ್ಳಿ' ಎಂಬ ಬೋರ್ಡಿನ ಕೆಳಗೆ ಬೆಂಚೊಂದರ ಮೇಲೆ ಕುಳಿತೆ. ಆಸ್ಪತ್ರೆಗೆ ಸಂಬಂಧಪಟ್ಟ ಯಾರೂ ಕಾಣುತ್ತಿರಲಿಲ್ಲ. ಅಲ್ಲೇ ಇದ್ದ ಪತ್ರಿಕೆಯಲ್ಲಿ ವಾರ ಭವಿಷ್ಯ ತೆಗೆದು ನೋಡತೊಡಗಿದೆ.

ಅರ್ಧ ಗಂಟೆಯಾಗಿರಬೇಕು. ಇದ್ದಕ್ಕಿದ್ದಂತೆ ಬಿರುಗಾಳಿಯಂತೆ ಓರ್ವ ಮಹಿಳೆ ಒಳನುಗ್ಗಿದಳು. ಅವಳ ಪೇಂಟು ಸೆಂಟು ಸ್ನಂಟು ಇತ್ಯಾದಿಗಳನ್ನು ನೋಡಿದರೆ ಡಾಕ್ಟರರಂತೆ ತೋರುತ್ತಿರಲಿಲ್ಲವಾದರೂ ಆ ದವಾಖಾನೆಯ ಮೇಲೆ ಡಾಕ್ಟರರಿಗಿಂತಲೂ ಅವಳಿಗೇ ಹೆಚ್ಚು ಅಧಿಕಾರವಿರುವಂತೆ ತೋರುತ್ತಿತ್ತು. ಆ ಮನೆಯ ಮಾಲಿಕಿಣಿಯಾಗಿರಬಹುದು. ಡಾಕ್ಟ್ರು ಎರಡು ಮೂರು ತಿಂಗಳಿಂದ ಬಾಡಿಗೆ ಕೊಟ್ಟಿರಲಿಕ್ಕಿಲ್ಲ, ಅದಕ್ಕೇ ಕೋಪದಿಂದ ಹೀಗೆ ನುಗ್ಗಿರಬೇಕು ಎಂದೆಲ್ಲ ಊಹಿಸುತ್ತ ಕುಳಿತೆ.

ಆದರೆ ಅವಳು ಡಾಕ್ಟರರಿಗಾಗಿ ಹುಡುಕದೇ ತನ್ನ ಸೊಂಟದಲ್ಲಿದ್ದ ಕೀಲಿಕೈ ಗೊಂಚಲು ತೆಗೆದು ಕುಳಿತ ದಂತ ಪೀಡಿತರನ್ನೆಲ್ಲ –"ಸ್ವಲ್ಪ ಏಳ್ರೀ, ಕುರ್ಚಿ ಇತ್ತಾಗೆ ಸರಿಸ್ರೀ" ಎಂದು ದಬ್ಬುತ್ತ ಕಪಾಟಿನಲ್ಲಿದ್ದ ಪೊರಕೆ ಬಕೆಟ್ಟು ಇತ್ಯಾದಿ ಸ್ವಚ್ಛತಾ ಸಾಮಗ್ರಿಗಳನ್ನು ತೆಗೆಯತೊಡಗಿದಾಗ ಅಲ್ಲಿದ್ದವರೆಲ್ಲ ಕಣ್ಣರಳಿಸಿದರು. ಅಂತೂ ಸ್ವೀಪರಿಣಿ ಬಲು ರಭಸಗಾರ್ತಿಯಾಗಿ ಎಲ್ಲರ ಗಮನ ಸೆಳೆದಳು.

ಹೊರಗೆ ನಿಂತಿದ್ದ ಯಾರ ಬಳಿಯೋ "ಎರಡು ಟಿಕೆಟ್ಟು ಖರೀದಿಸಿಡು. ನೆಲ ತೊಳೆದು ಈಗ ಬರ್ತಿನಿ ನಾನು" ಎಂದು ಹೇಳಿ ಒಳಬಂದು ಬಡ ಬಡ ಸಪ್ಪಳ ಮಾಡುತ್ತ ಏನೇನೋ ಸಾಮಾನನ್ನ ಎತ್ತಿ ಕುಕ್ಕಿ ದಢಬಡಿಸಿ ನೆಲ ಹೊಡೆಯತೊಡಗಿದಳು. ಬಸಕ್ಕನೇ ನೆಲದ ಮೇಲೆ ನೀರು ಚೆಲ್ಲಿ ಕುಳಿತಿದ್ದವರ ಸೀರೆ ಪ್ಯಾಂಟುಗಳ ಅಂಚನ್ನ ತೋಯ್ಸಿದಳು.

ನಾನು ಬೆಂಚಿನ ಮೇಲೆ ಓದುತ್ತಲೇ ಕುಳಿತಿದ್ದೆ. ಆ ರಭಸಗಾರ್ತಿ ತನ್ನ ಬಳಿಯಿದ್ದ ಕೀಯಿಂದ ಡಾಕ್ಟರು ಕೂಡುವ ರೂಮಿನ ಬಾಗಿಲನ್ನು ತೆಗೆದು ತಳ್ಳಿದಳಿರಬೇಕು. ಅದು ದಢಾರನೇ ಬಂದು ಬೋರ್ಡಿನಡಿಗೆ ಕುಳಿತ ನನಗೆ ಬಂದು ಬಡಿದದ್ದೊಂದೇ ಗೊತ್ತು. ಏನಾಯ್ತಂದು ತಿಳಿಯುವಷ್ಟರಲ್ಲಿ 'ದಂತಾನಾಹುತ'ವೊಂದು ಆಗಿ ಹೋಗಿತ್ತು. ನಾನು ಜಗತ್ತಿನಲ್ಲಿ ಯಾರ ಜತೆಯೇ ಮಾತಾಡುತ್ತಿರಲಿ ತಾನೂ ಹೊರಹಣಿಕಿ ತನ್ನ ಅಸ್ತಿತ್ವ ಪ್ರದರ್ಶಿಸುತ್ತಿದ್ದ ನನ್ನ ಮುಂದಿನ ಗಟ್ಟುಮುಟ್ಟು ಹಲ್ಲೊಂದು ಮುರಿದುಹೋಗಿತ್ತು! ರಕ್ತ ಸುರಿಯತೊಡಗಿತು.

ಅಲ್ಲಿದ್ದ ಜನರೆಲ್ಲ ಕೆರಳಿ "ನೋಡ್ರಿ ಆಯಮ್ಮನ ರಭಸಾನ, ಅನ್ಯಾಯವಾಗಿ ಅವರ ಒಳ್ಳೆ ಹಲ್ಲೆ ಮುರಿದುಹೋಯ್ತು' ಎಂದೆಲ್ಲ ಹೇಳುತ್ತ ಅವಳನ್ನು ತರಾಟೆಗೆ ತೆಗೆದುಕೊಂಡರು. ನನಗೆ ನನ್ನ ಕುಳಿಬಿದ್ದ ದವಡೆ ಹಲ್ಲಿನ ನೋವು ಮರೆತಂತಾಗಿ ಎದುರು ಹಲ್ಲಿನ ನೋವೆ ಅಧಿಕವಾಗಿ ಆಸ್ಪತ್ರೆಗೆ ನಾನು ಬಂದ ಉದ್ದೇಶವೇ ಬದಲಾಗಿಹೋಯ್ತು, ಏನಾದರೇನಂತೆ ಹಲ್ಲು ಕೀಳಿಸಲು ಬಂದ ನಾನು ಹಲ್ಲು ಉದುರಿಸಿಕೊಂಡಿದ್ದೆ.

ಸ್ವೀಪರಿಣಿ ಈಗ ಮೃದುಭಾಷಿಣಿಯಾದಳು. "ಆ ಬಾಗ್ಲು ಅಂಗೈ ಸಲ್ಪ ಎಡವಟ್ಟು ಕಣಮ್ಮ, ಈಗ ಡಾಗುಟ್ರು ಬತ್ತಾರೆ. ಆ ಮುರಿದ ಹಲ್ಲು ತೆಗೆಸ್ಬುಡಿ" ಎಂದು ಒಂದಿಷ್ಟು ಹತ್ತಿಯನ್ನು ರಕ್ತ ಒಸರುತ್ತಿದ್ದ ತುಟಿಯಡಿಗೆ ತುರುಕಿ ತಾನು ಮಿಂಚಿನ ಓಟ ಕಿತ್ತಳು ಸಿನಿಮಾಕ್ಕೆ.

ಡಾಕ್ಟರರು ಬಂದರು. ಯಾರೋ ನಡೆದ ಅನಾಹುತವನ್ನು ಅವರಿಗೆ ತಿಳಿಸಿದರು. ನಾನು ಅವಳಷ್ಟು ಅಂಥವಳನ್ನು ಕೆಲಸಕ್ಕೆ ಇಟ್ಟುಕೊಂಡ ಡಾಕ್ಟರರಷ್ಟು ಬೈಯಬಹುದಿತ್ತು. ಆದರೆ ಅಕ್ಷರಶಃ ಹಲ್ಲುಕಿತ್ತ ಹಾವಿನಂತೆ ಬುಸುಗುಡುವದೊಂದನ್ನುಳಿದು ಇನ್ನೇನೂ ಮಾಡಲಾರದವಳಾಗಿದ್ದೆ. ಡಾಕ್ಟರರು ಸಮಾಧಾನಿಸುವ ಧಾಟಿ ತೆಗೆದರು.

ಈ ಹಲ್ಲು ಹೇಗೂ ಉಬ್ಬು ಹಲ್ಲಾಗಿತ್ತು. ಅದನ್ನ ಪೂರ್ತಿ ತೆಗೆದು ಹೊಸ ಹಲ್ಲು ಇಡೋಣ. ನನ್ನ ಕೆಲಸದವಳು ಮಾಡಿದ ತಪ್ಪಿಗೆ ನಿಮಗೆ ಪುಕ್ಕಟೆ ಚಿಕಿತ್ಸೆ ಮಾಡ್ತೀನಿ" ಎಂದು ಹೇಳಿ ಮುಂದಿನ ಮುರಿದ ಹಲ್ಲನ್ನು ಬೇರು ಸಹಿತ ನಿರ್ಮೂಲನ ಮಾಡಿ ಕಳಿಸಿದರು.

ಹೀಗೆ ಹತದಂತೆಯಾದ ನಾನು ಮನೆಗೆ ಬಂದಾಗ ಎಲ್ಲರೂ ಆರೆ ! ದವಡೆ ಹಲ್ಲು ನೋವು ಅಂದವಳು ಮುಂದಿನ ಹಲ್ಲು ಕೀಳಿಸಿಕೊಂಡು ಬಂದಿದ್ದಾಳೆ. ಇವಳಿಗೆ ಸಮ ಇಲ್ಲದ್ದು ನಿಜ" ಎಂದೆಲ್ಲ ಆಡಿಕೊಂಡರೂ ಉತ್ತರಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ಕ್ರಮೇಣ ಮುಂದಿನ ಹಲ್ಲಿಲ್ಲದ ಕೆಟ್ಟ ಸ್ಥಿತಿಯಲ್ಲೂ ನಿರ್ದಯೀ ದವಡೆ ಹಲ್ಲುಗಳು ಮಾತ್ರ ನೋಯುವ ತಮ್ಮ ಕಾಯಕವನ್ನು ಮುಂದವರಿಸಿಯೇ ಇದ್ದವು. ಆದ್ದರಿಂದ ಮುಖ ಹಲ್ಲುರಹಿತೆಯಾದ ನಾನು ಕುಳಿಬಿದ್ದ ದವಡೆ ಹಲ್ಲಿನ ಚಿಕಿತ್ಸೆಗಾಗಿ ಮತ್ತೊಮ್ಮೆ ದಂತ ವೈದ್ಯರನ್ನು ಸಂಪರ್ಕಿಸಲೇಬೇಕಾಯ್ತು.

ಈ ಬಾರಿ ರಭಸಗಾರ್ತಿಯಿರುವ ಆ ಆಸ್ಪತ್ರೆಗೆ ಹೋಗಲು ಧೈರ್ಯವಾಗದೆ ಬೇರೊಬ್ಬ ದಂತವೈದ್ಯರ ಬೋರ್ಡಿನೊಳಗೆ ಹೋದೆ. ಆಸ್ಪತ್ರೆ ಬಲು ಸುಸಜ್ಜಿತವಾಗಿತ್ತು. ಹಲ್ಲು ನೋವಿನ ಪ್ರಾಣಿ ಕುಳಿತು ಒದ್ದಾಡಲು ಮೇಲೆ ಕೆಳಗೆ ಏರಿಳಿಯಬಲ್ಲ ಕುರ್ಚಿ, ಉದುರಿಸಿದ ಹಲ್ಲುಗಳನ್ನು ಎಸೆಯಲು ಚಲಿಸುವ ಬುಟ್ಟಿ, ಉಗುಳುವ ಬೇಸಿನ್, ದೀಪ, ಕೊಕ್ಕೆ ಕಡ್ಡಿ.... ಎಂದು ಆ ಕೋಣೆ ಒಂದು ಆಪರೇಷನ್ ಥಿಯೇಟರಿನಂತೇ ಕಾಣುತ್ತಿತ್ತು.

ಅತ್ತಿತ್ತ ಓಡಾಡಿಕೊಂಡಿದ್ದ ಡಾಕ್ಟರರು ಬಲು ಚುರುಕಾಗಿದ್ದರು. ಕುರ್ಚಿಯಲ್ಲಿ ನನ್ನನ್ನು ಕೂಡ್ರಿಸಿ ದೀಪ ಹಾಕಿ "ಆ ಎನ್ನಿ" ಎಂದರು. ನಾನು ಬಾಯಿ ತೆರೆದೆ. ಅಷ್ಟರಲ್ಲಿ ಅವರ ಫೋನು ಟ್ರಿಣ್ಣೆಂದಿತು. "ಬಾಯಿ ಮುಚ್ಚಿ" ಎಂದು ಹೇಳದೇ ಫೋನಿನತ್ತ ನಡೆದೇಬಿಟ್ಟರು. ಸುಮಾರು ಹೊತ್ತು ಬಾಯಿ ತೆರೆದೇ ಕುಳಿತ ನಾನು ಬೇಸರ ಬಂದು ಬಾಯ್ಮುಚ್ಚಿದೆ.

ಮತ್ತೆ ಬಂದ ಡಾಕ್ಟರರು ಹೊಸತಾಗಿ 'ಆ' ಎನ್ನಿ ಎಂದರು. 'ಆ' ಎಂದೆ. ಮತ್ತೆ ಕೆಳಗಡೆ ಏನೋ ಗದ್ದಲ ಕೇಳಿಸಿದಂತಾಗಿ ಡಾಕ್ಟರು ಕಿಟಕಿಯಲ್ಲಿ ಬಗ್ಗಿ ನೋಡತೊಡಗಿದರು. ಸಿಟ್ಟು ಬಂದು ನಾನು ನನ್ನ ಬಾಯನ್ನ ಟಪ್ ಎಂದು ಮುಚ್ಚಿ ಎದುರಿಗಿದ್ದ ಕನ್ನಡಿ ನೋಡುತ್ತ ನನ್ನ ಕುಂಕುಮ ಕಾಡಿಗೆ ಎಲ್ಲ ಸರಿಪಡಿಸಿಕೊಳ್ಳುತ್ತ ಕುಳಿತೆ. ಕೆಳಗೆ ಹೋಗುತ್ತಿದ್ದ ಪ್ರೊಸೆಷನ್ ಪೂರ್ತಿ ಹೋಗುವ ತನಕವೂ ಕುರ್ಚಿಯ ಮೇಲೆ ಕೂತ ನನ್ನ ಅಸ್ತಿತ್ವವನ್ನು ಪೂರ್ತಿ ಮರೆತಂತಿದ್ದ ಡಾಕ್ಟರರು ಎಷ್ಟೋ ಹೊತ್ತಿನ ನಂತರ ನನ್ನತ್ತ ಬಂದು "ಹ್ಞಾಂ ಈಗ ಆ ಎನ್ನಿ" ಅಂದರು. ನನ್ನ ಬಾಯಿ ಆ ಎನ್ನಲಿಲ್ಲ ಸ್ವಲ್ಪ ಹಠ ಮಾಡಿತು.

"You should be a co-operative patient you see" ಎಂದರು ಡಾಕ್ಟರರು. "ಅದಕ್ಕಲ್ಲ ಡಾಕ್ಟ್ರೇ ನಾನು 'ಆ' ಎನ್ನುತ್ತಲೇ ನೀವು ಎಲ್ಲೋ ಹೋಗಿಬಿಡುತ್ತೀರಲ್ಲ, ಅದೆಲ್ಲ ಮುಗಿದ ಮೇಲೆ ಆ ಎಂದರಾಯ್ತು ಅಂದ್ಕೊಂಡೆ" ಎಂದೆ. ಎದುರುತ್ತರ ಕೊಡುವ ವಿದ್ಯಾರ್ಥಿಯನ್ನು ಮೇಷ್ಟ್ರು ನೋಡುವಂತೆ ನನ್ನತ್ತ ನೋಡಿ "ಸರಿ ಸರಿ ಈಗ ಆ ಎನ್ನಿ" ಅಂದರು.

ನಾನು 'ಆ' ಎಂದಾಗ ಒಳಗೆ ಇಣುಕಿದ ಡಾಕ್ಟರರು 'ಓಹ್' ಎಂದರು. (ಒಳಗಿನ ದೃಶ್ಯ ಕಂಡು ಬಂದ ಉದ್ಗಾರ)

"ನಿಮ್ಮ ಎಲ್ಲ ದವಡೆ ಹಲ್ಲುಗಳೂ ಹೋಗಿವೆ. ಎಲ್ಲ ಕಿತ್ತು ಮತ್ತೆ ಹಾಕಿಸಬೇಕು. ನನಗೆ ಕಾಂಟ್ರಾಕ್ಟ್ ಕೊಟ್ಟರೆ ಮುನ್ನೂರು ರೂಪಾಯಿಗೆ ಪೂರ್ತಿ ಕೆಲಸ ಮುಗಿಸಿಕೊಡುತ್ತೇನೆ" ಎಂದರು.

"ಕಾಂಟ್ರಾಕ್ಟಿಗೆ ಸಹಿ ಹಾಕುವ ಮುನ್ನ ಮನೆಯಲ್ಲಿ ಕೇಳಬೇಕು. ಈಗ ಈ ಎರಡು ದವಡೆ ಹಲ್ಲು ಕೀಳಿ" ಎಂದೆ.

ನನ್ನೆದುರು ಶಸ್ತ್ರ ಸನ್ನದ್ಧವಾದ ಒಂದು ಟ್ರೇ ಬಂತು. ವಿವಿಧ ಸೈಜಿನ ಚಾಕು ಚೂರಿಗಳು, ಹರಿತವಾದ ಸಲಾಕೆ ಪಿಕಾಸಿಗಳು, ಕತ್ತರಿಗಳು ಚೂಪುಕಡ್ಡಿಗಳು ಮುಳ್ಳುಗಳು.... ಪಂಜಾಬಿಗೆ ವರ್ಗಾಯಿಸಲ್ಪಟ್ಟ ಪೋಲೀಸ್

ಪೇದೆಯಂತೆ ಗಡ ಗಡ ನಡುಗಿದೆ ನಾನು. ಹೀಗೆ ಹೆದರಿದ ಪ್ರಾಣಿಗಳು ತಲೆಯನ್ನು ಅತ್ತಿತ್ತ ಹೊರಳಿಸಬಾರದೆಂಬ ಉದ್ದೇಶದಿಂದಲೇ ಇದೆಯೇನೋ ಎಂಬಂತಿದ್ದ ಎರಡೂ ಕಡೆ ಇಕ್ಕಳದಂತಿರುವ ಕುರ್ಚಿಯಲ್ಲಿ ನನ್ನನ್ನು ಹಿಂದಕ್ಕೆ ದಬ್ಬಿ ಸಿಕ್ಕಿಸಿದರು. 'ಆ' ಎನ್ನಿ 'ಊ' ಎನ್ನಿ 'ಮೇಲೆ ನೋಡಿ' ಕೆಳಗೆ ಬಗ್ಗಿ, ಕಚ್ಚಿಬಿಡಿ ಎಂದೆಲ್ಲ ಏನೇನೋ ಕವಾಯತು ಮಾಡಿಸುತ್ತ ಏನೇನೋ ಸಮೀಕ್ಷೆ ನಡೆಸಿ 'ಸರಿ' ಎಂದರು. ಏನೋ ತೀರ್ಮಾನಕ್ಕೆ ಬಂದರಿರಬೇಕು ಅಂದುಕೊಂಡೆ.

ಡಗಡಗ ಸಪ್ಪಳ ಮಾಡುವ ಯಂತ್ರಕ್ಕೆ ಜೋಡಿಸಿದ್ದ ಒಂದು ದಪ್ಪ ತಂತಿಗೆ ಒಂದು ಸೂಜಿಯಂತಹುದನ್ನು ಸಿಕ್ಕಿಸಿ ತೀರಾ ನನ್ನ ಸಮೀಪ ಬಂದು ಅದನ್ನು ಬಾಯಿಯ ಬಳಿ ತಂದಿದ್ದರು ಅಷ್ಟೆ. ನನ್ನ ಕಾಲ್ಬೆರಳು ಚೂರಾದ ಅನುಭವವಾಯ್ತು ನನಗೆ. ಪ್ರಾಣ ಭಯದಿಂದ "ಅಯ್ಯಯ್ಯೋ" ಎಂದು ಕಿರುಚಿಬಿಟ್ಟೆ.

"ಇನ್ನೂ ಸೂಜೀನ ಬಾಯೊಳಗೇ ಒಯ್ದಿಲ್ಲ ಈಗ್ಲೆ ಭಯದಿಂದ ಕಿರುಚಿದ್ರೆ ಹೇಗ್ರೀ ಎಂತಾ ಹೆದುರುಪುಕ್ಕಲೂರೀ ನೀವು" ಎಂದು ಡಾಕ್ಟರರು ಬೈದಾಗ,

"ಅಯ್ಯಯ್ಯೋ ಬಾಯಿಯ ಕತೆ ಹಾಳಾಗ, ನನ್ನ ಕಾಲ್ಬೆರಳ ಮೇಲೆ ಎಂತದೋ ಮಣ ಭಾರದ ಕಲ್ಲಿನಂತದ್ದು ಬಿತ್ತು ಡಾಕ್ಟ್ರೇ ಏನಾಯ್ತಂತ ಕಾಣೋದಿಲ್ಲ ಬೇರೆ" ಎಂದು ಇಕ್ಕಳದಲ್ಲಿ ಒರಗಿಯೇ ಒರಲಿದೆ. ಡಾಕ್ಟ್ರು ಒಮ್ಮೆಲೆ "ಓ ಸಾರಿ" ಎಂದರು. ಅವರ ಬರಾಬ್ಬರಿ ಬೂಟುಗಾಲು ನನ್ನ ಕಾಲ್ಬೆರಳನ್ನು ಅಪ್ಪಚ್ಚಿ ಮಾಡಿತ್ತು. "ಸಾರಿ ಸಾರಿ" ಎಂದು ಸಾರಿ ಹೇಳುತ್ತಲೇ ಕಾಲ್ತೆಗೆದು ಮುಂದಿನ ಶಸ್ತ್ರಾಸ್ತ್ರ ಪ್ರಯೋಗಕ್ಕೆ ಸಿದ್ಧರಾದರು. (ಈ ಎಲ್ಲದರ ನಡುವೆ ನಾನು 'ಆ' ಎಂಬ ಬಾಯ್ದೆರತದ ಸ್ಥಿತಿಯಲ್ಲೇ ಇದ್ದೆ.)

ಆ ಮುಳ್ಳಿನಂತಹ ಉಪಕರಣಕ್ಕೆ ವಿದ್ಯುತ್ ಬಳಿ ರೊಂಯಂಯ್ಯೋ ಎಂದು ಸಪ್ಪಳ ಮಾಡುತ್ತ ಒಂದೊಂದೇ ದವಡೆ ಹಲ್ಲುಗಳನ್ನು ಕೊರೆಯತೊಡಗಿದರು. ಎಂತದೋ ಒಂದು ಬಗೆಯ ಗ್ಯಾಸೋ ನೀರೋ ಹೇಳಲಾಗದಂಥ ದ್ರಾವಣವೊಂದು ಬಾಯೊಳಗೆಲ್ಲ ತುಂಬಿತು. ಕಟ್ಟಿಗೆಯನ್ನು ತೂತು ಕೊರೆಯುವ ಉಪಕರಣದಂತೆ ಭಾಸವಾಗುತ್ತಿದ್ದ ಆ ಕೊರೆಯುವ ಯಂತ್ರ ಹಲ್ಲಿನೊಳಗಿಂದ ಇಳಿದು ದೇಹದೊಳಗೆ ಇಳಿದು ಕಾಲಲ್ಲಿ ಹೊರಬರಬಹುದೇನೋ ಎಂಬ ಭ್ರಾಮಕ ಭಯ ತಲೆ ತಿರುಗಿದಂತಾಗಿ ಮತ್ತೊಮ್ಮೆ "ಅಯ್ಯಯ್ಯೋ" ಎಂದು ಕಿರುಚಿದೆ. ಕೊರೆಯುವ ಯಂತ್ರ ನಿಂತಿತು. ಎರಡು ಹಲ್ಲು ತುಂಬ ಬೇಕು, ಎರಡು ಕೀಳಬೇಕು ಎಂದು ಹೇಳುತ್ತ ಡಾಕ್ಟರರು ಕಿಡಕಿಯಲ್ಲಿ ಬಗ್ಗಲು ಹೋದರು. ಭಯ ನೋವಿನಿಂದ ಬಳಲಿದ ನಾನು ಕಣ್ಮುಚ್ಚಿ ಒರಗಿದೆ.

ಸ್ವಲ್ಪ ಸಮಯದ ನಂತರ ಮತ್ತೆ ಬಳಿಬಂದ ಡಾಕ್ಟರರು ತಮ್ಮ ಕೈಯಲ್ಲಿ ಏನನ್ನೋ ಮುಚ್ಚಿಟ್ಟುಕೊಂಡಿದ್ದರು. ತಮ್ಮ ಆ ಕೈಯನ್ನು ಹಿಂದುಗಡೆ ಮರೆಯಲ್ಲಿಟ್ಟುಕೊಂಡು ನನ್ನನ್ನು ಏನೇನೋ ಪ್ರಶ್ನೆ ಕೇಳತೊಡಗಿದರು. "ಎಷ್ಟು ಓದಿದೀರಿ?" "ನೌಕರಿ ಮಾಡ್ತಿದೀರಾ?' "ಹಿಂದಿ ಬರುತ್ತಾ?".... ಇಂಥ ಎಲ್ಲ

ಪ್ರಶ್ನೆಗಳು ಈ ದಂತ ವೈದ್ಯರಿಗೆ ಯಾಕೆ ಬೇಕು? (ತಲೆ ವೈದ್ಯರಾದರೆ ಬೇರೆ ಮಾತು) ಎಂದೆನ್ನಿಸಿದರೂ ಮತ್ತೊಮ್ಮೆ 'ಆ ಅನ್ನಿ' ಅನ್ನುವ ತನಕ ಉತ್ತರಿಸಿದೆ. ಈ ನಡುವೆ ಯಾವಾಗಲೋ ಆ ಎನ್ನಿಸಿ ತಾವು ಕೈಯಲ್ಲಿ ಮುಚ್ಚಿಟ್ಟುಕೊಂಡ ಸಿರಿಂಜಿನಿಂದ ನನ್ನ ದಂತಕ್ಕೆ ಪಟ ಪಟ ನಾಲ್ಕಾರು ಕಡೆ ಚುಚ್ಚಿಬಿಟ್ಟರು.

ಇದ್ದಕ್ಕಿದ್ದಂತೆ ನನ್ನ ದವಡೆ ತೆರಿಗೆ ಅಧಿಕಾರಗಳ ಕೈಯಲ್ಲಿ ಕೀಲಿಕೈ ಒಪ್ಪಿಸಿದ ಸಿನಿಮಾ ನಟರಂತೆ ನಿಶ್ಚೇತನಗೊಂಡಿತು. ನಿರ್ಜೀವವೂ ನಿರ್ಭಾಧಿತವೂ ಆಗಿ ನನ್ನ ಅರ್ಧ ಮುಖ ಕಟ್ಟಿಗೆಯ ಕೊರಡಾಗಿ ಹೋಯಿತು.

ಈಗ ಪ್ರಾರಂಭವಾಯ್ತು ಡಾಕ್ಟರರ 'ದಂತ ಉತ್ಖನನ' ಕಾರ್ಯಕ್ರಮ. ಅವರು ಒಂದೊಂದೇ ಉಪಕರಣಗಳನ್ನು ಬಾಯೊಳಗೆ ಒಯ್ಯುತ್ತಲೂ ನನ್ನ ಪ್ರಾಣ ಒಂದೊಂದೇ ಇಂಚಾಗಿ ಹಾರುತ್ತಿತ್ತು. ಆ ಕಡೆ ಈ ಕಡೆ ರೊಂಯ್ ಎನ್ನಿಸಿ ಕಟಕ್ ಎನ್ನಿಸಿ, ಇಕ್ಕಳದಿಂದ ಹಲ್ಲನ್ನು ಮೇಲೆತ್ತಿದರೆ ಸ್ವಸ್ಥಾನ ಮೋಹದಿಂದ ಅದು ಮೇಲೆದ್ದು ಬರುತ್ತಲೇ ಇಲ್ಲ. ಮತ್ತೆ ಚಾಕು, ಮತ್ತೆ ಚೂರಿ, ಮತ್ತೆ ಕಚಕ್.... ನನ್ನ ನಾಲಿಗೆ ಪ್ರಾಣಾಂತಿಕ ಸ್ವರ ಹೊರಡಿಸದ ಹಾಗೆ ಹತ್ತಿ ಹಾಕಿ ತಮ್ಮ ಹೆಬ್ಬೆರಳಿಂದ ಡಾಕ್ಟರರು ಒತ್ತಿ ಹಿಡಿದಿದ್ದರು.

ತಲೆ ಇಕ್ಕಳದ ಕುರ್ಚಿಯಲ್ಲಿ, ನಾಲಿಗೆ ಡಾಕ್ಟರರ ಹೆಬ್ಬೆರಳ ಕೆಳಗೆ, ಹಲ್ಲು ಚಾಕು ಚೂರಿಗಳ ನಡುವೆ, (ಕಾಲ್ಬೆರಳು ಡಾಕ್ಟರರ ಬೂಟಿನಡಿ!).... ಒಟ್ಟಿನಲ್ಲಿ ಇಡೀ ದೇಹ ಡಾಕ್ಟರರ ಕೃಪೆಯಲ್ಲಿ ಎಂಬಂತಾಗಿತ್ತು ಪರಿಸ್ಥಿತಿ.

ಅಂತೂ ದಂತೋತ್ಖನನ ಕಾರ್ಯ ಮುಗಿದು ಹಲ್ಲುಗಳೆಂಬ ಅವಶೇಷಗಳನ್ನು ಹೊರಗೆಳೆದ ದಂತ ವೈದ್ಯರು ಹಲ್ಲುಗಳ ಓಳಿಯಲ್ಲಿ ಹತ್ತಿ ತುರುಕಿದರು. ಅವರ ಉಪಕರಣಗಳ ಓಡಾಟದ ಹಾವಳಿಗೆ ಸಿಕ್ಕು ನನ್ನ ಕಟವಾಯಿ ಗಾಯಗೊಂಡಿತ್ತು. ಮಾತ್ರೆ ಬರೆದು ಕೊಟ್ಟ ಡಾಕ್ಟ್ರು 'ಇನ್ನೆಂಟು ದಿನಕ್ಕೆ ಹೋಲೆಲ್ಲ ಹೀಲಾಗತ್ತೆ ಮತ್ತೆ ಬನ್ನಿ' ಎಂದರು. ಮರುದಿನ ಮತ್ತೆ ನಾನು ಹನುಮಂತಿಯಾಗಿದ್ದೆ.

ಎಂಟು ದಿನವಾದರೂ ನೋವು ಕಡಿಮೆಯಾಗಲಿಲ್ಲ. ಮುಖಕ್ಕೆ ಮನುಷ್ಯಾಕೃತಿಯೂ ಮರಳಲಿಲ್ಲ. ಘನ ಆಹಾರ ತ್ಯಜಿಸಿ ದ್ರವ ಆಹಾರ ಮಾತ್ರ ಸೇವಸಬೇಕಾದ ದಯನೀಯ ಪರಿಸ್ಥಿತಿ ಒದಗಿತು, ಕಂಡವರು ಕಂಡಂತೆ ಹೆದರಿಸತೊಡಗಿದರು.

" ಒಂದು ಚೂರು ಹಲ್ಲೇ ಉಳಿದಿರಬೇಕು"

"ಹತ್ತಿ ಸಿಕ್ಕಿಕೊಂಡಿರಬಹುದು'

"ಹಲ್ಲು ಕಿತ್ತಿದ್ದೇ ಸಮ ಆಗಲಿಲ್ಲ"

"ನಮ್ಮ ಸಂಬಂಧಿಗಳೊಬ್ಬರು ಹಲ್ಲು ಕೀಳಿಸಿದ ನೆವದಲ್ಲಿ ಸತ್ತೇ ಹೋದರು..." ಹೀಗೆಲ್ಲ ಹೆದರಿಸಲ್ಪಟ್ಟ ಮೇಲೆ ಮತ್ತೆ ಓಡಿದೆ ಡಾಕ್ಟರರ ಬಳಿ.

ಯಥಾ ಪ್ರಕಾರ 'ಆ' ಎನ್ನಿ ಎಂದರು. 'ಅಯ್ಯೋ ಹಾಗನ್ನಲು ಆಗದಿದುಕ್ಕೆ ತಮ್ಮ ಬಳಿ ಬಂದಿರುವದು ಎಂದು 'ಆಕಾರ' ರಹಿತಳಾಗಿ ನಿವೇದಿಸಿದೆ. ಸರಿ, ಇವಿಷ್ಟು ಮಾತ್ರೆ ತಗೊಳ್ಳಿ ಬಿಸಿ ನೀರಿನ ಶಾಖ ಕೊಡಿ ಎಂದೆಲ್ಲ ಹೇಳಿ 'ಆ' ಎಂದು ಹೇಳಲು ಪ್ರಾಕ್ಟಿಸ್ ಮಾಡುತ್ತಿರಿ ಬಿಟ್ಟು ಬಿಡಬೇಡಿ ಎಂದು ಅಪ್ಪಣೆ ಕೊಡಿಸಿದರು.

ಅಷ್ಟರನಂತರ– ಈಗ ತಿಂಗಳಿನ ಮೇಲಾಯ್ತು ನನ್ನ ಬಾಯಿ 'ಆ' ಎನ್ನುವ ಸಾಮರ್ಥ್ಯವನ್ನು ಮರಳಿ ಪಡೆದಿಲ್ಲ. ಸಣ್ಣ ಸಾಸಿವೆ ಗಾತ್ರದಿಂದ ತೊಂಡೆಕಾಯಿ ಗಾತ್ರದ ತನಕದ ವಿವಿಧ ಬಗೆಯ ಮಾತ್ರೆಗಳನ್ನು ಗಂಟಲೊಳಗೆ ದಬ್ಬಿ ನೀರು ಸುರಿದಿದ್ದೇನೆ. ದಿನಕ್ಕೆ ಆರು ಬಾರಿಯಂತೆ ಬಿಸಿನೀರ ಶಾಖಕೊಟ್ಟು ಮುಖ ಸುಟ್ಟುಕೊಂಡು ಸುಟ್ ಬರ್ಲಿ' ಎಂದು ಬೈದಿದ್ದೇನೆ.

ಆSS ಎಂದು ಆಕಳಿಸುವದೂ ಅಸಾಧ್ಯವಾಗಿ ಮೂಗಿನ ಮೂಲಕ ಆಕಳಿಕೆಯನ್ನು ಹೊರಹಾಕುವ ವಿಚಿತ್ರ ಅನಿವಾರ್ಯತೆಯನ್ನು ರೂಢಿಸಿಕೊಂಡಿದ್ದೇನೆ. ಅದರಿಂದಾಗುವ ಮುಖ ವಿಕಾರವನ್ನು ನೆನೆನೆನೆದು ಅಳುತ್ತೇನೆ. ದಿನಕ್ಕೊಮ್ಮೆಯಾದರೂ ನನ್ನ ಬಾಯ್ದೆರೆತದ ಸಾಮರ್ಥ್ಯ ಹೆಚ್ಚಿದೆಯೇ ಎಂದು ಪರೀಕ್ಷಿಸಲು ಮನೆಯಲ್ಲಿ ಯಾರೂ ಇಲ್ಲದ ಸ್ಥಳದಲ್ಲಿ ಹೋಗಿ ಗೋಡೆಯ ಕಡೆ ಮುಖ ಮಾಡಿ 'ಆ' ಎನ್ನಲು ಪ್ರಯತ್ನಿಸಿ 'ಅಯ್ಯೋ' ಎಂದು ಒರಲಿ ಈಚೆ ಬರುತ್ತೇನೆ.

"ಇನ್ನೊಮ್ಮೆ ಆ ಮೊದಲ ದವಾಖಾನೆಯ ರಭಸಗಾರ್ತಿಯ ಬಳಿಯೇ ಹೋಗು, ಶಾಕ್ ಟ್ರೀಟ್‌ಮೆಂಟ್ ತೆಗೆದುಕೋ' ಎಂಬ ಸಲಹೆಯನ್ನು ಮನೆಯಲ್ಲಿ ಯಾರೋ ಮುಂದಿಟ್ಟಾಗ ಮೊದಲಿನ ಅನುಭವ ನೆನಪಾಗಿ ಭಯದಿಂದ ಸುಮ್ಮನುಳಿದಿದ್ದೇನೆ.

ಒಟ್ಟಿನಲ್ಲಿ ಈಗ ವರ್ಣಮಾಲೆಯಲ್ಲಿ ಉಳಿದೆಲ್ಲ ಅಕ್ಷರಗಳನ್ನು ಕಷ್ಟಪಟ್ಟು ಉಚ್ಚರಿಸ ಬಲ್ಲೆನಾದರೂ 'ಆ' ಎಂದು ಉಚ್ಚರಿಸಲು ಮಾತ್ರ ಸಾಧ್ಯವೇ ಆಗುತ್ತಿಲ್ಲ. ನಾನು 'ಆ' ಎನ್ನಬಲ್ಲ 'ಆ ಕಾಲ' ಎಂದಿಗೆ ಬಂದೀತೋ ಆ ವೈದ್ಯರವರಿಗೇ ಗೊತ್ತು.

* * * *

ಆಕರ: ನಕ್ಕು ಹಗುರಾಗಿ–ಭುವನೇಶ್ವರಿ ಹೆಗಡೆ

# ಘಟಕ 4. ಜಾಗತೀಕರಣ

ಆಶಯ:

ಜಾಗತೀಕರಣವೆಂಬುದು ಒಂದು ಮುದ್ದಾದ ಮಾಯೆ.ಜಾಣ್ಮೆಯನ್ನು, ಕೌಶಲಗಳನ್ನು, ಅವಕಾಶಗಳನ್ನು ಹಣಕ್ಕೆ ರೂಪಾಂತರಿಸುವುದು ಜಾಗತೀಕರಣಕ್ಕೆ ಅವಶ್ಯಕ ಮತ್ತು ಅನಿವಾರ್ಯ. ಹಣದ ರೂಪಕ್ಕೆ ಸಂಕೇತಕ್ಕೆ ಒಳಗೊಳ್ಳದಿರುವ ಸಾವಿರಾರು ದೃಷ್ಟಿಕೋನಗಳು, ಬದುಕುವ ವಿಧಾನಗಳನ್ನು ಉಳಿಸಿಬೆಳಿಸಿಕೊಂಡು ಪರಂಪರೆಗಳನ್ನು ಅವಸಾನದ ಅಂಚಿಗೆ ತಂದಿರುವುದು ಜಾಗತೀಕರಣಕ್ಕೆ ಸೌಭಾಗ್ಯ ಮತ್ತು ಅದರ ಹೆಗ್ಗಳಿಕೆ. ವಿನ್ಯಾಸಗಳ, ಸಂಸ್ಕೃತಿ–ಆಚಾರ–ವಿಚಾರಗಳ ವಿನಿಮಯ ಸಂಭ್ರಮದ ಸಂಗತಿಗಳೇ. ಆದರೆ ವೈವಿಧ್ಯತೆಯನ್ನು ಅದು ಇರುವ ಹಾಗೆಯೆ ಉಳಿಸಬೇಕಾದದ್ದು ನಮ್ಮ ಜವಾಬ್ದಾರಿ. ಜಾಗತೀಕರಣವೆಂಬ ಬೆಳಕು ತನ್ನ ಗರ್ಭದಲ್ಲಿ ಭೀಕರವಾದ ಕತ್ತಲನ್ನು ಇರಿಸಿಕೊಂಡಿದೆ. ತನ್ನ ಅಧಿಕಾರದ ಪ್ರಾಬಲ್ಯದಿಂದ ಜಾಗತೀಕರಣವು ನಮ್ಮ ಆಹಾರ ಪದ್ಧತಿಯಲ್ಲಿ ಗಮನಾರ್ಹ ಬದಲಾವಣೆಯನ್ನು ತಂದಿದೆ. ನಮ್ಮ ಜೀವನ ಶೈಲಿಯನ್ನು ತನಗೆ ಬೇಕಾದ ಹಾಗೆ ನಿರ್ವಹಿಸುತ್ತದೆ. ದುರಾಸೆ ಹಾಗೂ ಸ್ವಾರ್ಥಗಳು ಸಮುದಾಯಗಳನ್ನು ಭ್ರಷ್ಠಗೊಳಿಸಿ ಬದುಕನ್ನುಅಸಹನೀಯವಾಗಿಸುತ್ತವೆ.

ಭಾರತದ ಜ್ಞಾನ ಶಾಖೆಗಳು, ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನದ ಆವಿಷ್ಕಾರಗಳು, ಕಾನೂನುಗಳು, ಜೀವಿಗಳು ಹಾಗೂ ಜೀವ ಸಂಪನ್ಮೂಲಗಳನ್ನು ಇಲ್ಲಿನ ನೆಲದ, ಪರಿಸರದ ಹುದುಗನ್ನು, ಅದರ ಸ್ಥಿತಿಯನ್ನು ಅರಿತು ಅದಕ್ಕೆ ಪೂರಕವಾಗುವಂತಹ, ಜೀವ ನೆಲೆಯನ್ನು ಇಲ್ಲಿ ಜೀವಿಸುವ ಎಲ್ಲರ ಎಲ್ಲದರ ಎದೆಗೆ ಹತ್ತಿರವಾಗುವಂತೆ ತೊಡಗಿಸಿಕೊಳ್ಳುವುದು ಮಾತ್ರವೇ ಜಾಗತೀಕರಣದ ಸವಾಲನ್ನು ಸಮರ್ಥವಾಗಿ ದಾಟಿಸಬಲ್ಲದು.

–ಡಾ.ಕೆ.ಬಿ.ಸರಸ್ವತಿ

## 4.1 ಸೆಟ್ಟಿಯ ಅಂಗಡಿ

**ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ**

ಬಾ ತಂಗೀ, ಬಾ, ಏನು ಬೇಕಾಗಿತ್ತು?
ಈಗಷ್ಟೆ ಅಂಗಡಿ ಬಾಗಿಲು ಫಡಕು ತೆಗೆದೆ
ನಿನ್ನಿಂದಲೇ ಬೋಣಗಿ
ಶುಭವಾಗಲಿ ತಾಯಿ ನಿನಗೆ ಏನು ಕೊಡಲಿ?
ಎಷ್ಟೊಂದು ಚೀಲ ಹೊತ್ತು ತಂದಿದ್ದೀ,
ಅಷ್ಟು ದಿನಸು ಬೇಕೆ? ಎಂಥಾ ಖರೀದಿ?
ಮನೆಯಲ್ಲಿ ಹಬ್ಬವೋ ಮದುವೆಯೋ? ನಿನ್ನದೋ?
ಯಾಕವ್ವ ನಾಚಿಕೊಳ್ಳುತ್ತಿ....?

ಆಚೆ ಡೊಳ್ಳಾರಿ ಮೇಲೆ ಚಾಪೆ ಹಾಸಿದೆ ನೋಡು, ಕುಳಿತುಕೋ.
ಬೇಕಾದಷ್ಟಿದೆ ದಾಣಿ ಪುಟಾಣಿ ಚುರಮರಿ ಚಾಪುಡಿ ಬೆಲ್ಲ
ಯಾಲಕ್ಕಿ ಕಸಕಸಿ ಮೆಣಸು ಅಷ್ಟೆಲ್ಲ ಇಲ್ಲ
ಆದರೂ, ಇರಲಿ, ಅದೆಲ್ಲ ನೀ ಬೇಡುವಂಥದ್ದಲ್ಲ,
ಇಲ್ಲುಂಟು ನಿನಗೆ ಬೇಕಾಗುವಂಥದ್ದೆಲ್ಲ.
ನೋಡಿಲ್ಲಿ ಜೋಡಿಸಿದ ಮಾಡು ಪೆಟ್ಟಿಗೆ ನಾಗೊಂದಿ ಸಂದಿಗೊಂದಿಗಳು
ನನ್ನೊಂದಿಗೆ ಬೆಳೆದ ಬಂಧು ಸಂಬಂಧಿಗಳು.

ಹೊಸಬಳಂತೆ ಕಾಣುತ್ತಿ
ಈ ಊರಿಗೆ ಓಣಿಗೆ ಕಣ್ಣಿಗೆ.
ದಡ್ಡ ಸೆಟ್ಟಿ ಎಂದೇ ನನ್ನ ಕರೆಯುತ್ತಾರೆ ಮಂದಿ.
ಏನಂದೀ…?
ನಾ ಬಹಳ ಹಳಬ ಈ ಊರ ಮಣ್ಣಿಗೆ,
ಈ ಮೊದಲು ನೋಡಿಲ್ಲ ನಾ ನಿನ್ನ
ಬಂದಿರಲೂ ಬಹುದು ನೀ ಈ ಊರಿಗೆ

ನೋಡಿಲ್ಲ ಈ ಕಡೆ ಬಂದು ನನ್ನ.

ನೀನಿಂದು ಬಂದದ್ದು ಅಪರೂಪ
ಇಲ್ಲಿ
ನಾನು ಕೂಡಾ ಈಗ ಬಹಳ ಅಪರೂಪ.
ಎಂಥೆಂಥ ಪ್ರಣಯಾದ್ಭುತ ಪವಾಡಗಳ ತಳಮಳ
ಸಮರ ಡಂಗುರ ಕೊಂಬು ಕಹಳೆ ಪ್ರಳಯಗಳ ಚಳವಳ
ರಾಜಕೀಯದೇರು ಪೇರು ಉಪವಾಸ ನಾಟಕಗಳ
ಸಾವಿರದ ರಾಕ್ಷಸ ಮಾರುಕಟ್ಟೆಗಳ ಮೆಟ್ಟಿಲು ಹತ್ತಿ
ಇಲ್ಲಿ ಊರಿದ್ದೇನೆ ತಳ
ಇಲ್ಲ ಮುಚ್ಚುಮರ ಎಲ್ಲ ಜಳ ಜಳ
ನಾನು ಪಟ್ಟಣ ಸೆಟ್ಟಿ ಹಳೆಯ ಕುಳ
ಆಗದವರು ಏನೇನೋ ಅನ್ನುತ್ತಾರೆ ತಲೆ ತುಂಬ ತುಂಬಿ ಹುಳ
ಬಿದ್ದಿರಬಹುದು ನಿನ್ನ ಕಿವಿಗೂ.
ಇರಲಿ ಬಿಡು, ಕೇಳಿದ್ದರೂ ಎಲ್ಲ ತಿಳಿದಿದ್ದರೂ
ನನ್ನ ಅಂಗಡಿ ಕಟ್ಟೆ ಹತ್ತಿ ಬಂದಿರುವೆಯಲ್ಲ....
ಅರೆ, ಏನಿದು, ಇನ್ನೂ ಹಾಗೆಯೇ ನಿಂತಿರುವಿಯಲ್ಲ?
ಹೇಳು ಮಗಳೇ, ಏನು ಬೇಕಾಗಿತ್ತು ಎಷ್ಟೆಷ್ಟು ಹೇಳು.
ಈ ಅರಪಾವು ಗಿರಪಾವು ಸೇರು ಚಟಾಕು ತೆಪೇರಿ ಮಾಪು ಅಳಿ ಲೆಕ್ಕ
ಅಳಿದೇ ಹೋಗುವಷ್ಟು ಇತ್ತೀಚೆ ಬದಲಾಗಿವೆ ನೋಡು.
ಅಂದ ಹಾಗೆ, ನಿನ್ನ ಕೈಯಲ್ಲಿ ಇಷ್ಟೊಂದು ಚೀಲ
ತುಂಬಿ ಬಿಡಬಹುದು ನನ್ನ ಭವಿತವ್ಯ ಸಹಿತ ಎಲ್ಲಾ ಕಾಲ.
ನನ್ನ ಅಂಗಡಿಯ ಸಮಸ್ತ ವಸ್ತು–ಒಡವೆ
ತೊರೆದು ಯಾರದೂ ಮುಲಾಜು ಹಂಗು ಗೊಡವೆ
ಹೇರಿ ತರಬೇಕೆಂದು ಹೇಳಿದರೆ ಯಾರಾದರೂ....?
ಕುಳಿತುಕೋ, ಬೆಮರದಿರು, ಸ್ವಲ್ಪ ಸಾವರಿಸಿಕೋ.
ಹೀಗೆ ಮಿಕಿಮಿಕಿ ನೋಡಿ ರಂಗಿನೆಲ್ಲಾ ಬೆಳಕು ಚೆಲ್ಲಬೇಡ,

ನಿನ್ನ ಕಟಿ ಕಟಾಕ್ಷ ಪಲ್ಲಂಗವೇರಿ ಸಾಯಬೇಕೆನ್ನುವರ ಕೊಲ್ಲಬೇಡ.

ವರ್ಷವರ್ಷಗಳಿಂದ ಈ ಊರ ಮಂದಿಗೆ
ಅಂಗಡಿ ಎಂಬುದನ್ನು ಕಲಿಸಿದವನೇ ನಾನು,
ಹಲಹಲವು ವಸ್ತುಗಳ ತರಿಸಿ ಬೆರೆಸಿ ಕೂಡಿಸಿ ಬಾಡಿಸಿ
ಹೊಸತು ಮಿಶ್ರಣ ದ್ರವ್ಯ ಕಲೆಸಿದವನೇ ನಾನು.
ವ್ಯವಹಾರ ವ್ಯಾಪಾರದುದ್ಯೋಗದಲ್ಲಿ ತೊಡಗಿ
ಹೊಸ ಹೊಸ ಊರು ಕೇರಿಗಳನ್ನು ಮುತ್ತಿದೆ
ಮುದ್ದಿಸಿದೆ ಮರ್ದಿಸಿದೆ ನನ್ನವಾಗಿಸಿಕೊಂಡೆ
ಮೆದುವಾಗಿ ಎದೆಗಪ್ಪಿ ತೊಡೆ ನಡುವೆ ತಾಗಿಸಿಕೊಂಡೆ
ನನ್ನ ಅಂಗಡಿ ಆಗ ನಿತ್ಯ ದೀಪಾವಳಿ
ಈಗಲೂ ಸತ್ಯ ಆ ರಾತ್ರಿ ಬೆಳಗುಗಳ ಹಾವಳಿ,

ನನ್ನ ಅಂಗಡಿಯಲ್ಲಿ ಸಿಗುವಂಥ ವಸ್ತು
ಈ ಊರು ಆ ಊರು ಯಾವೂರ ಪೇಟೆಯಲ್ಲೂ ಇಲ್ಲ
ಇದು ಅದ್ಭುತ ಜಗತ್ತು.
ಯಾಕೆ ನೋಡುತ್ತಿ ಹಾಗೆ ಗೋಣೆತ್ತಿ?
ತಡೆ ತೋರಿಸುತ್ತೇನೆ...

ಹಿಂಜಿ ಹಿಂಜಿ ಬಿಡಿಬಿಡಿಸಿ ಹೊಂದಿಸಿಟ್ಟ
ಅರವತ್ತು ವರುಷಗಳ ಮೆತ್ತನ್ನ ಕುತನಿ ಬೆಳದಿಂಗಳ
ಎದೆಯ ಈ ಚೀಲದಲಿ ಬೆಚ್ಚಗಿಟ್ಟಿದ್ದೇನೆ.
ಸೂರ್ಯ ಮಿತ್ರನು ಕೊಟ್ಟ ಸಂಖ್ಯಾತೀತ ಉದಯ ಅಸ್ತಗಳನ್ನು
ಮುಂಜಾವು ಸಂಜಾವು
ಎಳೆ ಬಿಸಿಲು ಇಳಿ ಬಿಸಿಲು ಮಳೆ ಬಿಸಿಲು ತುಣುಕುಗಳ
ಬೆವರು ಹನಿ ಮೆತ್ತಿರುವ ಬಿರು ಬಿಸಿಲ ಬೇಗುದಿಯ ತಳುಕುಗಳ
ತೇಪೆ ತುಂಡುಗಳನ್ನು ಸಿಂಗರಿಸಿ ಹೊಲಿದ ಕೌದಿ

ಹಾಸಿಕೊಂಡು ಕುಳಿತಿದ್ದೇನೆ.

ಬಣ್ಣಬಣ್ಣದ ಮೋಡ, ಕಿರಣ ವಲ್ಲರಿ ಜಾಲ

ಚಂದ್ರಾಮನೊಡನೆ ಜೋಕಾಲಿ ಜೀಕಿ

ಹುಣ್ಣಿಮೆ ಅಮಾಸಿಗಳ ನಗೆ ನಕ್ಕ ಚಿಕ್ಕೆಗಳ ಲೀಲಾ

ಬೀಜ ಮೊಳಕೆ ಚಿಗುರು ನನೆ ಹೂ ನಗೆಗಳು

ಈ ಡಬ್ಬಿಯೊಳಗಿವೆ,

ಹಳ್ಳದ ಸರುವಿನಾಚೆಯ ಹೊಲ ಬದುವು ತೆಂಬಗಳು

ಮಲ್ಲಾಡದ ಮಳೆಗಳು ಮಲೆ ಮರೆಯ ಅಗಣಿತ ನಿಧಾನಗಳು

ಕೊಳ್ಳದೆಡ ಬಲದಲ್ಲಿ ಅವಿತು ಮಟಿದ ಪ್ರಪಾತ ಸಪ್ತ ಸಾಗರಗಳು

ಆಚೆ ಬದಿ ಲೋಡು ದಿಂಬಿಗೆ ಒರಗಿ ವಿರಮಿಸಿವೆ.

ಕೋಗಿಲೆಯಾಗಿ ಕುಕಿಲುವ ಗಿಳಿ, ನವಿಲಾಗಿ ನರ್ತಿಸುವ ಮೊಲ

ನಮ್ಮ ಹಿತ್ತಿಲ ತೋಟದಿ ಸುಳಿದು ರಿಂಗಣಗುಣಿವ ಪಾತರಗಿತ್ತಿ

ಇಲ್ಲಿ ತಕ್ಕಡಿಯ ಕಾಣಿಯ ಮೇಲೆ ಮಲಗಿವೆ.

ಸುಳಿಗಾಳಿಗುಂಟ ಆಲಾಪವಾದ ಮಲ್ಲೇಶಪ್ಪನ ಹಾಡು

ಬಸನದೇವರ ಗುಡಿಯಲ್ಲಿ ದಿನ ದಿನಾ ರಾತ್ರಿ ಘಮಘಮಿಸಿ

ಗುರುಸಿದ್ಧ ಮಾವನ ಭಜನೆ

ಗುರುಪಾದಪ್ಪ ಹೆಜ್ಜೆ ಕಲಿಸಿದ ಹೆಣ್ವಾರ್ಟು ಸಣ್ಣಾಟ

ಹನುಮಂತ ದೇವರ ಜಾತ್ರೆ ಕುಸ್ತಿ ಕಣ

ಆಚೆ ಗರಡಿ ಮನೆ ಕಟ್ಟೆಯ ಮೇಲೆ ಕುಣಿದ ಕಿಳ್ಳಿಕ್ಯಾತರ ಆಟ

ಎಲ್ಲವನ್ನೂ ಎಂದಿನಿಂದಲೋ ಜೋಪಾನವಾಗಿ

ಖಾತೆ ಕಿರ್ದಿ ಚೋಪಡಿಗಳ ಪಾನು ಪಾನಿನ ಕೆಳಗೆ

ಕಾಳಜಿ ವಹಿಸಿ ಬಲು ಹುಶಾರಿಲೆ ಮಡಿಚಿ ಇಟ್ಟಿದ್ದೇನೆ,

ಸಖೀಜನದ ಸುಖದ ಎದೆ ಇರಿತ ಏರಿಳಿತ

ಜಗಳ ಹೊಟ್ಟೆ ಕಿಚ್ಚು ಸಿಟ್ಟು ಆಗಾಗ ತಿಂದ ಚಿಲ್ಲರೆ ಪೆಟ್ಟು

ಹಾಕಿದ ಪೇಚು ಪಟ್ಟು ಮಾಡಿದ ಗರ್ದಿ ಗಮ್ಮತ್ತು

ಎಂಜಲೂಟಗಳು ದೈವ ನೈವೇದ್ಯಗಳು ಪಾನಪ್ರಸಾದಗಳು

ಸಾಮಾನ್ಯವಲ್ಲ ಮಗಳೇ, ನಿನಗೆ ತಿಳಿಯುವುದಿಲ್ಲ,

ಬಹಳ ಎಚ್ಚರಿಕೆಯಿಂದ
ಮಗ್ಗುಲಲ್ಲೇ ಇರುವ ಗಲ್ಲೆಪೆಟ್ಟಿಗೆಯಲ್ಲಿ ಇಟ್ಟುಕೊಂಡಿದ್ದೇನೆ.

ನಿನಗೆ ಹೇಳಿದೆನಲ್ಲ, ಈಗ ನೆಲೆ ಗಟ್ಟಿ, ಊರಿದ್ದೇನೆ ಕಾಲು
ನನ್ನ ಅಂಗಡಿಯಲ್ಲಿ ಇರುವುದೆಲ್ಲಾ ಹದಿನಾರಾಣೆ ಚೊಕ್ಕ ಮಾಲು
ಈಗ ಇದು ನಿನ್ನ ಆಸ್ತಿ, ಅಮೂಲ್ಯ,
ಇದಕೆ ಬೆಲೆಯೇ ಇಲ್ಲ ಆದರೂ ಉಂಟು
ನೀನು ನಿನಗೇ ಹಾಕಿಕೊಳ್ಳುವ ಬೇಲಿ ನಿನ್ನದೇ ದೃಷ್ಟಿ
ನಿನಗೆ ಆಗಲಿ ಸಮಸ್ತ ಸೃಷ್ಟಿ
ಆಗ ಈ ಅಂಗಡಿ ಇಲ್ಲಿರುವ ಸರ್ವ ಸೊತ್ತು
ನಿನ್ನದೇ ಎಂದು
ನಿನ್ನ ಅಂಗೈ ಗೆರೆಗೆ ಗೊತ್ತು.

ಬಾ ತಾಯಿ ಈಚೆ ಕಡೆ, ಈಗ ಇದು ನಿನ್ನದೇ ಅಂಗಡಿ
ಈಗ ಪಟ್ಟಣ ಶೆಟ್ಟಿ ನಿನ್ನ ಗಿರಾಕಿ
ನೀ ಅಂಗಡಿ.

* * * *

ಆಕರ: ಆಯ್ದ ಕವಿತೆಗಳು– ಸಿದ್ಧಲಿಂಗ ಪಟ್ಟಣಶೆಟ್ಟಿ

# 4.2 ಅಕ್ಷರ, ಅನ್ನ, ಅನ್ಯಾಯ

**ಡಾ. ಮೊಗಳ್ಳಿ ಗಣೇಶ್**

**ಅಕ್ಷರ**

ಬಹಳ ಕಾಲದಿಂದ ನಮ್ಮ ಪಾಲಿಗೆ ದಕ್ಕದೇ ಇದ್ದ ಒಂದು ಹಕ್ಕು ಈ ಅಕ್ಷರ. ನಾಲ್ಕು ಅಕ್ಷರ ಕಲಿತರೆ ಈ ನರಕದಿಂದ ಪಾರಾಗುತ್ತೇವೆ ಎಂದು ಹಿರಿಯರು ಹೇಳುವುದಿತ್ತು. ಅಕ್ಷರವು ಬಿಡುಗಡೆಯನ್ನು ಧ್ವನಿಸುವ ಪದ. ಜ್ಞಾನ ಎಂಬ ಅರ್ಥದಿಂದ ನಾವು ಈ ಪದವನ್ನು ಬಳಸುತ್ತಿರಲಿಲ್ಲ. ಕೀಳು ಎಂಬ ಹಣೆ ಪಟ್ಟಿಯ ಜಾತಿಯನ್ನು ಅಳಿಸಲು ಅಕ್ಷರ ಸಹಾಯ ಮಾಡುತ್ತದೆ ಎಂದು ಕೇರಿಯು ಬಲವಾಗಿ ನಂಬಿತ್ತು. ವಿದ್ಯೆಗೆ ಅಕ್ಷರ ಪದವನ್ನು ಸಂವಾದಿಯಾಗಿ ಬಳಸಲಾಗುತ್ತಿತ್ತು.

ಶಾಲೆಯಲ್ಲಿ ಅಕ್ಷರವನ್ನು ಕಲಿಯುವುದು ಓದುವುದು ಬಹಳ ಕಠಿಣವೇ ಆಗಿದ್ದರೂ, ಈ ಅಕ್ಷರಗಳನ್ನು ಹೇಗಾದರೂ ಮಾಡಿ ಕಲಿತೇ ಕಲಿಯಬೇಕು ಎಂಬ ಹಠವೂ ಬರುತ್ತಿತ್ತು. ಓದಲು ಬರೆಯಲು ಬರದ ಈ ದಂಡ ಪಿಂಡ ಹೊಲಗೇರಿಯ ಹೈಕಳಿಂದ ಶಾಲೆಯೇ ಒಂದು ಹೊಲಗೇರಿಯಾಗಿ ಬಿಟ್ಟಿದೆ ಎಂದು ಮಾಸ್ತರು ಕಿಡಿಕಾರಿ ದನಾ ಕಾಯೋಕೆ ಲಾಯಕ್ಕಾಗಿದ್ದೀರಿ ಎಂದು ಹಂಗಿಸುತ್ತಿದ್ದರು. ಮೌಖಿಕ ಪರಂಪರೆಯಿಂದ ಬಂದ ನಮ್ಮ ಹೊಲಗೇರಿಯ ಅನೇಕರು ಇಡೀ ಪುಸ್ತಕವನ್ನು ಪಟ ಪಟನೆ ಅರಳು ಉರಿದಂತೆ ರಾಗಬದ್ಧವಾಗಿ ಹಾಡಿ ಮುಗಿಸುತ್ತಿದ್ದರು. ಪುಸ್ತಕವನ್ನು ನೋಡದೆಯೇ ಮಾಸ್ತರು ಬಾಯಲ್ಲಿ ಹೇಳಿದ್ದನ್ನಷ್ಟೇ ಆಲಿಸಿ ಅಕ್ಷರದ ಹಂಗೇ ಇಲ್ಲದಂತೆ ಪಾಠವನ್ನೆಲ್ಲ ಒಪ್ಪಿಸುತ್ತಿದ್ದರು. ಆ ಪಾಠವನ್ನು ಬರಿ ಎಂದರೆ ಅಕ್ಷರ  ಬರದೆ ಪರಿತಪಿಸುತ್ತಿದ್ದರು. ಮನೆಯವರು ಪಾಠ ಓದು ಎಂದರೆ, ಅಂಗಳದಲ್ಲಿ ಕೂತು ಜೋರಾಗಿ ಲಯಬದ್ಧವಾಗಿ ವಾಚಿಸುವುದನ್ನು ಹಿರಿಯರು ಬಹಳ ಆಸಕ್ತಿಯಿಂದ ಆಲಿಸಿ, ನಮ್ಮ ಮಕ್ಕಳು ಅಕ್ಷರ ಕಲಿತು ಬಿಟ್ಟಿದ್ದಾರೆ ಎಂದು ಪ್ರಾಂಜಲ ರಾಗುತ್ತಿದ್ದರು. ಹೀಗೆ ವಾಚಿಸುವುದನ್ನು ಬಲ್ಲವರು ಕುರುಡು ಪಾಠ ಎಂದು ಕರೆಯುತ್ತಿದ್ದರು. ಪಾಠವನ್ನೇ ನಾವು ಹೈಕಳು ಸಾಮೂಹಿಕವಾಗಿ ಬಾಲ ಗಮಕಿಗಳ ಹಾಗೆ ಒಕ್ಕೊರಲಿನಿಂದ ಓದುವ ಬದಲು ಪಾಠ ವಾಚಿಸುತ್ತಿದ್ದರೆ ಇಡೀ ಊರಿಗೇ ಪಾಠ ಪ್ರವಚನದ ಗದ್ದಲ ಕೇಳಿಸುತ್ತಿತ್ತು.

ಅಕ್ಷರವು ಒಂದು ಅಸಾಧಾರಣವಾದ ಉಪಕರಣ. ನೀನು ನಾಕಕ್ಷರ ಕಲೀದೆ ವೋದ್ರೆ ನಾನು ಯಾವ್ದಾದ್ರು ಬಾವಿಗೆ ಬಿದ್ದು ಜೀವ ಕಳ್ಕತಿನಿ' ಎಂದು ನಮ್ಮ ತಾಯಿ ಅಕ್ಷರಕ್ಕಾಗಿ ಪ್ರಾಣವನ್ನೇ ಮುಡಿಪಿಡಲು ಒತ್ತಾಯಿಸುತ್ತಿದ್ದಳು. 'ನಾಲ್ಕಕ್ಷರ ಕಲುತ್ಕಂದು ನಾಳೆ ದಿನ ಒಂದೊಳ್ಳೆ ದಾರಿಗೋದ್ರೆ ಅದೇ ನನಗೆ ಸ್ವರ್ಗ' ಎಂದು ಕೇರಿಯ ತಾಯಂದಿರು ಮಕ್ಕಳಿಗೆ ಆಗ್ರಹಪಡಿಸುತ್ತಿದ್ದರು. ಅಕ್ಷರವು ನಾಳಿನ ಒಳ್ಳೆಯ ಬದುಕಿನ

ದಿಕ್ಕೂ ಚಿಯಾಗಿ ಕಂಡಿತ್ತು. 'ಅಂಬೇಡ್ಕರ್ ಅವರು ಪ್ರಪಂಚದಲ್ಲಿರೋದ್ನೆಲ್ಲ ವೋದಿ ಪಾಸ್ ಮಾಡಿದ್ದಾರಂತೆ. ಅವರು ನಮ್ಮ ಜ್ಯಾತಿಯೋರ್ಗೆ ಫ್ರೀಯಾಗಿ ವಿದ್ಯಾಬುದ್ಧಿಯ ಕೊಡಿಸವರೆ. ಅದೇ ನಾವು ನಾಲ್ಕಕ್ಷರ ಕಲ್ತು ವಿದ್ಯಾವಂತರಾದ್ರೆ ಜೀತ ಮಾಡುದು ತಪ್ಪೋಯ್ತದೆ' ಎಂದು ಅಷ್ಟಿಷ್ಟು ಓದಿ ಪೇಟೆ ಸೇರಿದ್ದವರು ಹಳ್ಳಿಗಳಿಗೆ ಬಂದಾಗ ತಪ್ಪದೆ ಶಾಲೆಯ ಮಹತ್ವ ವಿವರಿಸುತ್ತಿದ್ದರು. ಅಕ್ಷರವು ಶಾಲೆಯ ಒಂದು ಕಲಿಕಾ ಚಟುವಟಿಕೆ ಮಾತ್ರವಾಗಿರದೆ ನಾಳಿನ ನಮ್ಮ ಭವಿಷ್ಯವನ್ನು ನಿರ್ಧರಿಸುವ ಶಕ್ತಿಯೂ ಆಗಿತ್ತು. ನಮ್ಮ ತಾತ ಬಹಳ ಹಿಂದೆ ಯಾರೊ ಯಾರಿಗೋ ಮರಳ ಮೇಲೆ ಅಕ್ಷರ ಬರೆದು ಕಲಿಸುತ್ತಿದ್ದುದನ್ನು ಕಂಡು, ಬೇಡಿ ತಾನೂ ಕೆಲವು ಅಕ್ಷರ ಕಲಿತು ಬಂದು ಬಹಳ ಕಷ್ಟಪಟ್ಟು ಓದುವುದನ್ನು ಕಲಿತಿದ್ದ, ಅಕ್ಷರ ಕಲಿತರೆ ಗೌರವ ಹೆಚ್ಚು ಎಂದು ಪದೇಪದೆ ಹಿರಿಯರು ಹೇಳಿ ಹೇಳಿ, ಕೇಳಿ ಕೇಳಿ ಕೊನೆಗೆ ನಮಗೂ ಅಕ್ಷರಗಳು ಬಂದಿದ್ದವು. ಅಕ್ಷರವನ್ನು ಯಾರೂ ನಮ್ಮಿಂದ ಕಿತ್ತುಕೊಳ್ಳಲಾಗದು. ಅಕ್ಷರ ಕಲಿತರೆ ಸ್ವಾತಂತ್ರ್ಯವೇ ಬಂದ ಹಾಗೆ ಎಂದು ನಮ್ಮ ತಾತ ನಂಬಿದ್ದ. ನಾಶವಿಲ್ಲದ್ದು, ಮರಣವಿಲ್ಲದ್ದು ಅಕ್ಷರ ಎಂದು ಭಾಷಾ ವಿಜ್ಞಾನಿಗಳು ಹೇಳುವುದಿದೆ. ಅಕ್ಷರ ಎಂದರೆ ಲಿಪಿ ಎಂದೂ ಕೂಡ ಕರೆಯಬಹುದೆಂದು ಆ ಮೇಲೆ ತಿಳಿಯಿತು.

ಬೀಜಾಕ್ಷರ ಪದ ಕೂಡ ವಿದ್ಯೆಯ ಮೂಲ ಪದಕ್ಕೆ ಸಮನಾದುದು. ಶಕ್ತಿ ಶಾರದೆಯೇ ಅಕ್ಷರ ಎಂತಲೂ ಬ್ರಹ್ಮವಾಣಿಯೇ ಅಕ್ಷರ ಎಂತಲೂ ಹೇಳುವುದು ಕಿವಿ ಮೇಲೆ ಬೀಳುವುದಿದೆಯಾದರೂ, ಅಕ್ಷರ ಎಂದರೆ ಅನ್ನ ಎಂದಷ್ಟೇ ಧ್ವನಿ ಸಾಧ್ಯತೆ ನಮ್ಮ ಪ್ರಜ್ಞೆಯಲ್ಲಿದೆ. ಅಕ್ಷರದ ಬಗ್ಗೆ ಕಿಟೆಲ್ ಕೊಡುವ 'ಒಂದು ಸಲದ ಉಚ್ಚಾರಣೆಗೆ ಶಕ್ಯವಾಗುವಷ್ಟರ ಪದಬಾಗ' ಎಂಬ ಈ ವಿವರವು ತಾಂತ್ರಿಕವಾದದು. ಅಕ್ಷರದ ಉಚ್ಚಾರವು ನಮಗೆ ವಾಕ್ ಸ್ವಾತಂತ್ರ್ಯಕ್ಕೆ ಸಮವಾಗಿತ್ತು. ಅಕ್ಷರ ಕಲಿತು ಮಾತನಾಡುವುದು, ಓದುವುದು ಮತ್ತು ಆ ಅಕ್ಷರಗಳನ್ನು ದುಂಡಾಗಿ ಅಂದವಾಗಿ ಬರೆಯುವುದು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಿತ್ತು; ಅಂತೆಯೇ ಅಭಿವ್ಯಕ್ತಿಯ ಸಾಧ್ಯತೆಯನ್ನು ತೆರೆದು ತೋರುತ್ತಿತ್ತು. ಅಕ್ಷರದ ಶುದ್ಧತೆಯ ಬಗ್ಗೆ ನಾವು ಯಾವತ್ತೂ ತಲೆಕೆಡಿಸಿಕೊಳ್ಳಲಿಲ್ಲ. ಉಚ್ಚಾರದ ಬಗ್ಗೆಯೂ ನಮಗೆ ಅಂತಹ ಮಡಿ ಮೈಲಿಗೆ ಏನಿಲ್ಲ. ಮಹಾಪ್ರಾಣಗಳ ಕಡೆಗೆ ನಮಗೆ ಗಮನವೇ ಇರಲಿಲ್ಲ. ಇನ್ನು ಒತ್ತಕ್ಷರಗಳ ಸೂಕ್ಷ್ಮ ಸೀಳುವಿಕೆಯ ಸರಿತಪ್ಪುಗಳ ಗೊಡವೆಗೆ ಹೋದವರಲ್ಲ. ಮೌಖಿಕ ಪರಂಪರೆ ನಮಗೆ ಹೇಗೆ ಕೇರಿಯ ಭಾಷೆಯನ್ನು ಜೀವನ ವಿಧಾನದಿಂದ ಕಲಿಸಿಕೊಟ್ಟಿತ್ತೊ ಅದರ ಆಧಾರದ ಮೇಲೆಯೇ ಲಿಖಿತ ಭಾಷೆಯ ಅಕ್ಷರಗಳನ್ನು ಒಗ್ಗಿಸಿಕೊಂಡಿದ್ದೆವು. ಅಕ್ಷರದ ಆಕೃತಿಗಿಂತ ಅಕ್ಷರದ ಮರೆಯಲಿದ್ದ ನಮ್ಮ ಬದುಕಿನ ಭಾವನೆಗಳೇ ನಮಗೆ ಮುಖ್ಯವಾಗಿದ್ದವು. ಹಾಗಾಗಿಯೇ ನಮ್ಮ ಅಕ್ಷರ ಕಲಿಕೆಯಲ್ಲಿ ಏರು ಪೇರಾಗಿದ್ದರೂ ಅಕ್ಷರದ ಅನುಸಂಧಾನದಲ್ಲಿ, ಅಭಿವ್ಯಕ್ತಿಯಲ್ಲಿ, ಆಲೋಚನೆಯಲ್ಲಿ ಹಾಗು ಅರ್ಥದಲ್ಲಿ ಭಾಷೆಗೆ ತೊಡಕಾಗುವ ಯಾವ ತಪ್ಪನ್ನೂ ಮಾಡಿಲ್ಲ.

ಅಕ್ಷರವು ಮುಟ್ಟಿಸಿಕೊಳ್ಳುವುದಕ್ಕೂ ಸಂಬಂಧ ಪಡುತ್ತದೆ. ಹೇಳಲಾಗದ್ದನ್ನೆಲ್ಲ ತೋಡಿಕೊಳ್ಳಲು ದಾರಿ ತೋರುತ್ತದೆ. ದಮನಿತ ಸಂಗತಿಗಳನ್ನೆಲ್ಲ ದಾಖಲಿಸುತ್ತದೆ. ... ಹಾಗೆಯೇ ಅಲಕ್ಷಿತರ ಪರವಾದ ಒಂದು ಸಾಕ್ಷಿಯೂ ಆಗುತ್ತದೆ. ಅಕ್ಷರದಿಂದ ವಂಚಿತರಾದವರು ಅಕ್ಷರಕ್ಕಾಗಿ ಹಂಬಲಿಸುವುದೇ ಒಂದು ಪಾಡು. ಅಕ್ಷರಸ್ತರು ವಂಚಿಸಬಾರದು ಎಂಬ ನೀತಿಯನ್ನು ಕೇರಿ ಆಗಾಗ ನೆನಪಿಸುವುದುಂಟು, ಅಕ್ಷರ ಕಲಿತವರು ದೂರ ಸರಿಯುವವರು ಎಂಬ ಆರೋಪವೂ ದಿಟವೇ. ಅಕ್ಷರವು ವ್ಯಕ್ತಿಯ ವಿಕಸನದ ಒಂದು ಪಯಣ ಅಂತೆಯೇ ಭಾಷೆಯನ್ನು ವಿಸ್ತರಿಸುತ್ತ ವ್ಯಕ್ತಿ ಭಾಷೆಯೂ ಆಗಿ ಬೆಳೆಯುವ ಒಂದು ಪ್ರಕ್ರಿಯೆ. ಅಕ್ಷರವು ನಾಗರೀಕತೆಯ ಹೆದ್ದಾರಿಯೂ ಹೌದು. ಮನುಷ್ಯರ ವಿಕಾಸ ಪಥದಲ್ಲಿ ಅವರವರ ಅರಿವನ್ನು ಬಹುರೂಪಗಳಲ್ಲಿ ನಿರೂಪಿಸುವ ಮಾಂತ್ರಿಕ ಶಕ್ತಿಯೂ ಹೌದು.

## ಅನ್ನ

ಅವತ್ತು ಮಟ ಮಟ ಮಧ್ಯಾಹ್ನ ಉರಿ ಬಿಸಿಲ ಬಟಾ ಬಯಲ ಹೊಲದಲ್ಲಿ ನಮ್ಮ ಚಿಕ್ಕ ತಾತ ಕಡಲೇಕಾಯಿ ಹೊಲದಲ್ಲಿ ಕಳ್ಳತನ ಮಾಡಲು ತೊಡಗಿ ಸಿಕ್ಕಿಬಿದ್ದು ಹೊಲದೊಡೆಯರು ಹಿಡಿದು ಬಡಿದು ಚಚ್ಚಿ ಆತನ ಬಾಯಿಗೆ ಕಲ್ಲು, ಕಸ, ಮಣ್ಣು ಹಾಕಿ 'ತಿನ್ನು ಅದೆಷ್ಟು ತಿಂತಿಯೊ ತಿನ್ನು' ಎಂದು ತುಳಿದಾಗ: ಯಾತನೆಯಿಂದ "ಅನ್ನಾ ತಿನ್ನೊ ಬಾಯ್ಗೆ ಮಣ್ಣಾಕಬ್ಯಾಡಮ್ಮೊ' ಎಂದು ಬೇಡಿದ. 'ಅನ್ನ ತಿನ್ನೋ ಬಾಯಾ ನಿಂದೂ, ಸೂಳೇ ಮಗ್ನ: ಯೇಲ್ ತಿನ್ನೋ ಬಾಯ್ಕಲಾ ನಿಂದೂ' ಎಂದು ಮುಖದ ಮೇಲೆ ಉಗಿದಿದ್ದರು.

ಅನ್ನದ ಮಾತು ಎಲ್ಲೆಲ್ಲಿಗೆ ನಮ್ಮ ಕೇರಿಯ ಬದುಕನ್ನು ಕೊಂಡೊಯ್ಯುತ್ತದೆ ಎಂಬುದಕ್ಕೆ ಮೇಲಿನದು ಒಂದು ಪುಟ್ಟ ನಿದರ್ಶನ. ಅನ್ನ ಎಂದರೆ ಹಸಿವು ನೆನಪಾಗುವುದು. ಆ ಹಸಿವಿನ ಜೊತೆಯಲ್ಲಿ ಅಪಮಾನ ಸುಳಿಯುವುದು, ಆ ಅಪಮಾನದ ನಡುವಲ್ಲೇ ದುಃಖವೂ ಸಂಕಟವೂ ಕೆಚ್ಚು ಮೆಲ್ಲಗೆ ಭಾವದಲ್ಲಿ ತೇಲಿ ಬರುವವು. ಅನ್ನ ನಮಗೆ ಸಿಗುವುದಿಲ್ಲವಲ್ಲಾ ಎಂಬ ಹತಾಶೆಯೂ ಮೂಡುತ್ತಿತ್ತು.

ದೊಡ್ಡ ಗೌಡರ ಮನೆಯವರ ಅನ್ನದ ಬಗ್ಗೆ ಕಲ್ಪನೆಯ ಕಥೆಗಳು ಆಳುಗಳ ಬಾಯಿಂದ ಕೇಳಿ ಬರುತ್ತಿದ್ದವು. ದೊಡ್ಡವರ ಮನೆಯ ಹಬ್ಬ, ಮದುವೆ, ತಿಥಿಗಳಂದು ಅವರ ಅನ್ನದ ರಾಶಿಯನ್ನು ಕಂಡು ಬೆರಗಾಗುತ್ತಿದ್ದೆವು. ಅನ್ನ ಉಣ್ಣಲು ಪುಣ್ಯ ಮಾಡಿರಬೇಕೆಂದು ಹಿರಿಯರು ನೋವಿನಿಂದ ಹೇಳುವಾಗ ನಾವು ಯಾವ ಪಾಪ ಮಾಡಿದ್ದೇವೊ ಗೊತ್ತಿಲ್ಲವಲ್ಲಾ ಎಂದು ಪರಿತಪಿಸುತ್ತಿದ್ದೆವು, ಅನ್ನದ ಋಣ ನಮಗಿಲ್ಲ ಎಂದೇ ಅನೇಕರು ಮಾತನಾಡುತ್ತಿದ್ದರು. 'ಅನ್ನಾಕಾಣ್ದೋರು" ಎಂದೇ ನಮಗೆ ನಾವೇ ಆ ಮಾತನ್ನು ಸ್ವೀಕರಿಸಿದ್ದೆವು. 'ಅನ್ನಾ ನೀರಿಲ್ದಂಗೆ ಮಾಡಾಕ್ ಬುಡ್ತೀನ್" ಎಂದು ಮೇಲಿನವರು ಆಗಾಗ ನಮ್ಮನ್ನು ಬೆದರಿಸುವುದಿತ್ತು. 'ಅನ್ನ ಹಾಕಿದ ಮನೆಯೆಂದೂ ಆಳಾಗುದಿಲ್ಲ. ಕನ್ರವ್ವಾ' ಎಂದು ನಮ್ಮ ಕೇರಿಯ ಹೆಂಗಸರು

ಗೌಡತಿಯರನ್ನು ಹೊಗಳುವುದಿತ್ತು. 'ಅನ್ನಾ ಹಾಕಿದ ಮನೆಗೆ ಕನ್ನಾ ಹಾಕರೇ' ಎಂಬ ಮಾತೂ ಕೇಳಿ ಬರುತ್ತಿತ್ತು.

ವರ್ಷದಲ್ಲಿ ಒಂದೆರಡು ಬಾರಿ ಅನ್ನ ಬೇಯಿಸುವ ಅವಕಾಶ ಕೆಲವರಿಗಾದರೂ ಕೇರಿಯಲ್ಲಿ ಬರುವುದಿತ್ತು. ಹೊಸಕ್ಕಿ ಅನ್ನ ಮಾಡಿದ್ದನ್ನು ಅದರ ಗಮಲಿನಿಂದಲೇ ತಿಳಿದು ನೆರೆಹೊರೆಯವರು ಆ ಅನ್ನ ಬೇಯುತ್ತಿರುವ ಮನೆಗೆ ಹೋಗಿ ಮುಂಗಡವಾಗಿ 'ನನ್ನೈದ ಚಂಡಿ ಇಡ್ಕಂಡವನೆ ಒಂತುತ್ತನ್ನ ಕೊಡಪ್ಪಾ' ಎಂತಲೋ, ಕೋರುವುದಿತ್ತು. ಕೆಲವರು ಜ್ವರ ಬಂದಾಗ ಅನ್ನ ಬೇಕೆಂದು ಹಠ ಹಿಡಿಯುವುದಿತ್ತು. ಹಾಗೆ ಅನ್ನ ಕೇಳಿದಾಗ ಮೇಲು ಕೇರಿಗೆ ಹೋಗಿ ಬೇಡಿ ತಂದು ಅನ್ನತಿನಿಸಿದ ಮರು ದಿನಕ್ಕೆ ಆ ಜ್ವರ ಮಾಯವಾಗಿರುತ್ತಿತ್ತು. ಅಳಸಿದ ಅನ್ನವನ್ನು ತಂದು ತೊಳೆದು ಉಣ್ಣುವುದು ಒಂದು ಸುಖವಾಗಿತ್ತು. ಅನ್ನಕ್ಕೆ ಬದಲಾಗಿ 'ಬೊನಾ' ಎಂತಲೂ ಅಪರೂಪಕ್ಕೆ ಕರೆಯುವುದಿತ್ತು. 'ಬೋನಾ ಮಾಡಿವ್ನಿ ಬಾ ವುಣ್ಣುವಂತೇ' ಎಂದು ಹೆಂಗಸರು ಬೇಜವಾಬ್ದಾರಿ ಗಂಡರು ಊಟದ ಹೊತ್ತಿಗೆ ಮಾತ್ರ ಬಂದಾಗ ವ್ಯಂಗ್ಯವಾಗಿ ಹೇಳುತ್ತಿದ್ದರು.

ಅನ್ನದ ಬರ ತೀರಿಸಿಕೊಳ್ಳಲೆಂದು ಕೇರಿಯ ಕೆಲವರು ಜೀತಕ್ಕೆ ಸೇರಿಕೊಳ್ಳುತ್ತಿದ್ದರು. ಅಪರೂಪಕ್ಕೆ ಬೇಕಾದ ನೆಂಟರು ಬಂದಾಗ ಏನೇನೊ ಪಾಡು ಪಟ್ಟು ಅಕ್ಕಿ ತಂದು ಅನ್ನ ಮಾಡಿ ಬಡಿಸಬೇಕಾದ ಬಿಕ್ಕಟ್ಟು ಎದುರಾಗುವುದಿತ್ತು. ಎಷ್ಟೇ ಕಷ್ಟ ಇದ್ದರೂ ಬಂದ ನೆಂಟರಿಗೆ ಒಂದು ಹೊತ್ತಾದರೂ ಮುದ್ದೆ ಉಂಡಾದ ಮೇಲೆ ಒಂದಿಷ್ಟು ಅನ್ನವಿಕ್ಕಲೇ ಬೇಕೆಂಬ ನಿಯಮವಿತ್ತು. ಅಂತಹ ಸ್ಥಿತಿಯಲ್ಲಿ ಕೆಲವರು ತಣಿಗೆಯನ್ನೂ ತಾಂಬಟ್ಲನ್ನೊ ಮೇಲುಕೇರಿಗಳಲ್ಲಿ ಅಡವಿಟ್ಟು ಅಕ್ಕಿ ತಂದು ಅನ್ನ ಮಾಡುತ್ತಿದ್ದರು. 'ಇವತ್ತು ನಮ್ಮಟ್ಟಲಿ ಅನ್ನ ಮಾಡ್ತರೆ' ಎಂಬುದನ್ನು ಮೊದಲಾಗಿಯೇ ತಿಳಿದು ಹೈಕಳು ಹೆಮ್ಮೆಯಿಂದ ಹೇಳಿಕೊಳ್ಳುವಾಗ ಉಳಿದ ಬೇರೆ ಮಕ್ಕಳು ಹತಾಶೆಯ ಕಣ್ಣುಗಳನ್ನು ಪಿಳಿಪಿಳಿ ಬಿಡುತ್ತಿದ್ದರು. ಅನ್ನದ ಮಾತಿಗಾಗಿಯೇ ಅತ್ತೆ ಸೊಸೆಯರ ನಡುವೆ ಜಗಳ ಏರ್ಪಡುತ್ತಿತ್ತು. ತನಗೆ ಸೊಸೆ ತಳ ಹಿಡಿದು ಕಪ್ಪಾದ ಅನ್ನವಿಕ್ಕಿದಳೆಂದು ಕೇರಿಯಲ್ಲಿ ಆರೋಪಿಸಿ ದುಃಖಿಸಿದರೆ, ಮತ್ತಾವಳೊ ಸೊಸೆ ತನ್ನ ಬಾಯಿಗೆ ಒಂದಗಳು ಅನ್ನವನ್ನೂ ಉಳಿಸದಂತೆ ಎಲ್ಲವನ್ನೂ ಅವರವರೇ ಉಣ್ಣುವರು ಎಂದು ಸಂಕಟ ಪಡುವುದಿತ್ತು. ಇನ್ನು ಬಲಹೀನ ಮಕ್ಕಳಂತು ಅನ್ನ ಬರದ ಗರ ಹಿಡದಂತೆ ಮೂಲೆ ಸೇರಿಕೊಂಡಾಗ ಗದ್ದೆಗಳಲ್ಲಿ ಕಷ್ಟಪಟ್ಟು ದುಡಿದು ತಂದ ಭತ್ತವನ್ನು ಕುಟ್ಟಿ ಅಕ್ಕಿ ಮಾಡಿ ಅನ್ನ ಬೇಯಿಸಿ ಅಂತಹ ಮಕ್ಕಳ ಮುಂದೆ ದೊಡ್ಡ ತಟ್ಟೆಯಲ್ಲಿ ತುಂಬಿಟ್ಟು ಅನ್ನದ ಬರ ಬಿಡಿಸುವ ಆಚರಣೆಯನ್ನು ಮಾಡುತ್ತಿದ್ದರು.

ಅನ್ನ ಎಂದರೆ ಕೇವಲ ಹಸಿವಿನ ಕಿಚ್ಚಿಗೆ ತಂಪು ನೀಡುವ ಒಂದು ಸುಖ ಎಂದಷ್ಟೇ ಭಾವಿಸಬೇಕಿಲ್ಲ. ಅನ್ನದ ಅರ್ಥವನ್ನು ಬದುಕಿನ ಹೋರಾಟವಾಗಿ ನಮ್ಮವರು ತಿಳಿದಿದ್ದಾರೆ. ಅನ್ನದ ಪದಶಃ ಅರ್ಥ ಸೀಮಿತವಾದುದು; ಆದರೆ ಅನ್ನಕ್ಕಾಗಿ ಬದುಕಿನ ಅನೇಕ ಸವಾಲುಗಳಿಗೆ ಒಳಗಾಗಿ ಅಸ್ತಿತ್ವ

ರೂಪಿಸಿಕೊಳ್ಳುವುದು ಒಂದು ಜೀವನ ವಿಧಾನವೇ ಆಗಿರುತ್ತದೆ. ಹೀಗಾಗಿ ನಮ್ಮ ಪಾಲಿಗೆ ಈಗಲೂ ಕೇರಿಯಲ್ಲಿ ಅನ್ನ ಎಂದರೆ ಒಂದು ಜೀವನ ವಿಧಾನ, ಬದುಕಿನ ಒಂದು ಹೋರಾಟ, ನಾಳಿನ ಒಂದು ಕನಸು ಹಾಗೆಯೇ ಹಸಿದವರ, ನೊಂದವರ, ಅಪಮಾನಿತರ ಒಂದು ಆಲೋಚನೆಯ ಕ್ರಮ.

## ಅನ್ಯಾಯ

ಅನ್ಯಾಯ ಎಂಬ ಈ ಶಬ್ದ ಕಿವಿ ಮೇಲೆ ಬಿದ್ದ ಕೂಡಲೆ ನಮ್ಮೊಳಗೆ ಸಂಕಟ, ಕಿಚ್ಚು, ಸಿಟ್ಟು, ಆಕ್ರೋಶ, ಅಸಹಾಯಕತೆ, ಭಯ ಮತ್ತು ದುಃಖದ ಭಾವನೆಗಳು ಮೂಡುತ್ತವೆ. ಮೇಲಿನವರು ಹೊಡೆದು ಬಡಿದು ಹತ್ಯೆಗೈದು ಹಿಂಸಿಸಿದಾಗಲೆಲ್ಲ ನಮ್ಮ ಕೇರಿಯ ತುಂಬ ಕೇಳಿಸಲ್ಪಡುತ್ತಿದ್ದ ಶಬ್ದ ಈ 'ಅನ್ಯಾಯ'. ನೋವಿನ ಭಾಗವಾಗಿ ಸುತ್ತಿಕೊಳ್ಳುತ್ತಿದ್ದ ಈ ಪದಕ್ಕೆ ಸಂಬಂಧಿಸಿದಂತೆ ನಮ್ಮವರ ನುಡಿಗಟ್ಟುಗಳು ಹೀಗಿವೆ. ನಿಮ್ಮ ಅನ್ಯಾಯ ನಿಮ್ನ ತಿಂತದೆ', 'ನಾವೇನನ್ನಾಯ ಮಾಡಿದ್ದೋ ಅಂತಾ ಯೇ ಸಿಕ್ಸೆಯೊ ದೇವರೇ, 'ಅನ್ಯಾಯ ಮಾಡೋರ ಮನೆ ಯಕ್ಕುಟ್ಟೋಯ್ತದೆ', 'ಅನ್ಯಾಯ ಮಾಡಿ ಯಾರುದ್ದಾರ ಆಗಿದ್ದಾರು', 'ಅನ್ಯಾಯ ಅನ್ಯಾಯದಿಂದ್ಲೇ ಆಳಿತದೆ', 'ನಮುಗೊಬ್ಬರು ಅನ್ಯಾಯ ಮಾಡಿದ್ರೂ ನಾವು ಇನ್ನೊಬ್ಬುರಿಗೆ ಅನ್ಯಾಯ ಮಾಡಬಾರದು' ಹೀಗೆ ಅನ್ಯಾಯದ ಬಗ್ಗೆ ಕೇರಿಯಲ್ಲಿ ಹತ್ತಾರು ಬಗೆಯ ಮಾತುಗಳು ಒಂದು ಸಮಷ್ಟಿ ದನಿಯಂತೆ ಹೊರಡುತ್ತಿದ್ದವು, ದಬ್ಬಾಳಿಕೆ, ದೌರ್ಜನ್ಯ, ಶೋಷಣೆ, ಕ್ರೌರ್ಯ, ದಂಡನೆ, ಬಹಿಷ್ಕಾರ, ಮೋಸ, ವಂಚನೆ, ಕೊಲೆ, ಸುಲಿಗೆ, ಅತ್ಯಾಚಾರ ಮುಂತಾದ ಅಸಹನೀಯ ನೆನಪುಗಳೆಲ್ಲ ಅನ್ಯಾಯ ಪದದ ಜೊತೆ ಕೇರಿಯಲ್ಲಿ ವ್ಯಾಪಿಸಿ ಆ ಬಗ್ಗೆ ಜನ ಮಾತನಾಡಿಕೊಳ್ಳುತ್ತಿದ್ದರು.

ಹೊರಗಿನ ಅನ್ಯಾಯಕ್ಕಿಂತಲೂ ಕೇರಿಯ ಒಳಗಿನ ಅನ್ಯಾಯಕ್ಕೇ ಹೆಂಗಸರು ಬಹಳವಾಗಿ ನರಳಿ ಅನ್ಯಾಯಕ್ಕೆ ಹತ್ತಾರು ತರದಲ್ಲಿ ಪ್ರತಿಕ್ರಿಯಿಸುತ್ತಿದ್ದರು. ಗಂಡ ಕುಡಿದು ಬಂದು ದಂಡಿಸಿದಾಗಲೆಲ್ಲ ಎದೆ ಬಡಿದುಕೊಂಡು, ಬಾಯಿ ಬಡಿದುಕೊಂಡು; 'ಎಲ್ಲಿ ಮರೇಲಿ ಕುಂತಿದ್ದಿಯೊ ದೇವರೇ, ನಿನ್ ಕಣ್ಗೆ ಯೇನೂ ಕಾಣಿಸ್ತಿಲ್ವೇನೊ' ಎಂದು ಅಳಲನ್ನು ತೋಡಿಕೊಳ್ಳುತ್ತಿದ್ದರು. ಅಳಲು, ರೋಧನ, ದುಃಖ ಇವು ಅನ್ಯಾಯದ ಭಾಗವಾಗಿ ಬಂದು ಬಿಡುತ್ತಿದ್ದವು. ಅನ್ಯಾಯದ ಗಾಯವನ್ನು ವಾಸಿ ಮಾಡಿಕೊಳ್ಳಲು ಹೆಂಗಸರು ಮೌನವಾಗಿ ಒಳಗೇ ದುಃಖಿಸುವುದಿತ್ತು. ತನ್ನನ್ನು 'ಇಂತಾ ಪಾಪಿಗಳ ಕೈಗೆ ಕೊಟ್ಟು ನನ್ ಬಾಳ ಆಳು ಮಾಡುದ್ರಲ್ಲೊ' ಎಂದು ಸಂಕಟ ಪಡುವವರ ಬಾಯಲ್ಲಿ ಅನ್ಯಾಯದ ಅದೆಷ್ಟೋ ವ್ಯಥೆಗಳು ಹರಿದು ಬರುತ್ತಿದ್ದವು.

'ಅನ್ಯಾಯ್ಗಾರರು ನರುಕಕ್ಕೇ ವೋಗುದೂ', ಅನ್ಯಾಯ ಮಾಡಿ ಎದ್ದಾಡಿದವರ ಅದ್ದೂ ಕಾಗೆ ತಿಂದವಂತೇ', 'ಅನ್ಯಾಯನ್ನ ಅರುಗುದುಂಟೇ' ಎಂಬ ನುಡಿಗಳು ಅನ್ಯಾಯ ಮಾಡಿದವರ ವಿರುದ್ಧದ ತೀರ್ಪಾಗಿ ಈ ನುಡಿಗೆ ಯಾವ ಬರಹದ ಹಂಗಿಲ್ಲದಿರಬಹುದು. ಆದರೆ ಪ್ರತಿರೋಧದ ಕಿಚ್ಚಿದೆ. ಅನ್ನದ

ಭಾಷೆಯೇ ಬೇರೆಯಾಗಿತ್ತು. ದುಡಿಮೆಯು ಅನ್ನದ ಪೂರಕ ಶಬ್ಧವಾಗಿತ್ತು. ದುಡಿಮೆ, ಪರಿಶ್ರಮ, ಬಡತನ, ಹಸಿವು ಹಾಗೂ ವೃತ್ತಿ ಇವೆಲ್ಲವೂ ಅನ್ನದ ಭಾಷೆಯ ವೈವಿಧ್ಯ ನುಡಿಗಳು. ಕೂಲಿ ಮಾಡಿಯೇ ಅವತ್ತು ಅನ್ನ ಉಣ್ಣಬೇಕು ಎಂಬುದು ಅನ್ನದ ಮಾತಷ್ಟೇ ಆಗದೆ ಅನ್ಯಾಯದ ಆ ವಿರುದ್ಧದ ಮಾರ್ಮಿಕ ನುಡಿಗಿತ್ತು. ಅನ್ಯಾಯ, ಅನ್ನ ಇವೆರಡೂ ದಲಿತ ಕೇರಿಗಳಲ್ಲಿ ಯಾವತ್ತೂ ಮತ್ತೆ ಮತ್ತೆ ಕೇಳಿ ಬರುತ್ತಿದ್ದ ಅಸ್ತಿತ್ವದ ಪ್ರಶ್ನೆಯ ಶಬ್ದಗಳಾಗಿದ್ದವು. ಅನ್ಯಾಯ ಮಾಡಿದವರಿಗೆ ಅನ್ಯಾಯ ಶಬ್ದದ ಪರಿಚಯವಿರುವುದಿಲ್ಲ. ಅನ್ಯಾಯವು ನೋವಿನ ಒಂದು ಸಂಗತಿ.

ಇಂತಲ್ಲಿ ಅನ್ಯಾಯದ ಅರ್ಥಕ್ಕೆ ಯಾವ ಕೋಶಗಳಲ್ಲಿ ಯಾರ ಅರ್ಥವಿದೆ? ಅನ್ಯಾಯದ ಅರ್ಥ ಕೋಶಗಳಲ್ಲಿ ನ್ಯಾಯದ ದನಿ ಉಂಟೆ? ನೊಂದವರ ಪರಿ ಭಾಷೆಯಲ್ಲಿ ನೊಂದವರ ನೋವು ನೋಯದವರನ್ನು ತಳ್ಳಬಲ್ಲದೇ? ಅನ್ಯಾಯದ ಬಗ್ಗೆ ಶಾಪ ಪ್ರತಿಕ್ರಿಯೆಯೇ ನಮ್ಮ ಕೇರಿಯಲ್ಲಿ ಮೊಳಗುತ್ತಿದ್ದುದು. ವಿಷಾದ ಎಂದರೆ ಊರಾಚೆ ಇದ್ದ ನಮ್ಮ ಕೇರಿಯ ಶಾಪ ಭಾಷೆಯು ದೂರ ಇದ್ದ ಮೇಲು ಕೇರಿಗಳಿಗೆ ತಟ್ಟುತ್ತಲೇ ಇರಲಿಲ್ಲ.

ಮಧ್ಯಕಾಲೀನ ಸಮಾಜದಲ್ಲಿ ಇದ್ದ ಅನ್ಯಾಯದ ದನಿ ಇವತ್ತು ನಮ್ಮ ಕಿವಿಗಳಿಗೆ ಕೇಳಿಸದಿರಬಹುದು, ಚರಿತ್ರೆಯ ಅನ್ಯಾಯದ ಪದ ಬಳಕೆಗಳು ಬದಲಾಗಿರಬಹುದು. ಆದರೆ ನಮ್ಮ ಸುಪ್ತಪ್ರಜ್ಞೆಯು ಭಾಷೆಯ ಇಂತಹ ಯಾವುದೇ ನುಡಿಗಟ್ಟುಗಳ ಗತಕಾಲದ ಜೈವಿಕ ಸಂಬಂಧವನ್ನು ಮರೆತಿರಲಾರದು. ಸುಪ್ತಪ್ರಜ್ಞೆಯಲ್ಲಿ ದಾಖಲಾಗಿರುವ ಪದಗಳ ಅರ್ಥಕೋಶಗಳು ಬೇರೆ. ಅಂತಹ ಸುಪ್ತಕೋಶಗಳೇ ಕನ್ನಡದಲ್ಲಿ ಈ ವರೆಗೂ ಬಂದಿಲ್ಲ.

ಪ್ರಾಚೀನ ಕವಿ ಕಾವ್ಯಗಳು ಅನ್ಯಾಯದ ಬಗ್ಗೆ ಚಕಾರ ಎತ್ತಿಲ್ಲ ಎಂದಲ್ಲ. ಪಂಪ ಮಹಾ ಕವಿಯೂ 'ಅನಯ' ಎಂಬ ಶಬ್ದ ಬಳಸುವನು. 'ದೊಡ್ಡಗೌಡರ ಬಾಗಿಲಿಗೆ ನಮ್ಮ ಮೂಳೆಯ ತ್ವಾರಣ' ಎಂದು ಕವಿ ಸಿದ್ದಲಿಂಗಯ್ಯ ಅವರು ಹೇಳಿದ ಕೂಡಲೆ ಅನ್ಯಾಯದ ಅರ್ಥ ಕೋಶವೇ ಬದಲಾಗಿ ಬಿಡುತ್ತದೆ. ಬಲಿಯನ್ನು ಪ್ರಾಣಾರ್ಪಣೆ ಎಂದರೆ ಅನ್ಯಾಯದ ವಕಾಲತ್ತಿಗೆ ಅವಕಾಶವೆಲ್ಲಿದೆ? ಹೀಗೆಯೇ ಅನ್ಯಾಯದ ಎಲ್ಲ ಅರ್ಥಗಳೂ ಅಪಾರ್ಥಗಳಾಗಿ ಅರ್ಥಕೋಶಗಳಲ್ಲಿ ದಾಖಲಾಗಿರುವುದು. ಅನ್ಯಾಯವನ್ನು ಎಸಗಿದವರು ಹೆದರಬೇಕಾದದ್ದು ಸಾಮಾಜಿಕ ವ್ಯವಸ್ಥೆಯ ಮೂಲ ನಿಯಮ. ಆದರೆ ಭಾರತೀಯ ಸಮಾಜದ ಮೇಲು ಜಾತಿಗಳು ಅಪರಾಧ ಎಸಗಿದರೂ ಅದು ಅನ್ಯಾಯವಲ್ಲ. ರಾಮನು ಶಂಭೂಕನನ್ನು ವಧಿಸಿದ್ದು, ನ್ಯಾಯ ಎಂದು ಧರ್ಮವೇ ವಾದಿಸುತ್ತದೆ. ದಲಿತರನ್ನು ದಂಡಿಸುವುದು ಒಡೆಯರ ಹಕ್ಕಾಗಿತ್ತು. ಒಂದು ವೇಳೆ ಊಳಿಗದವರನ್ನು ಕೊಂದರೂ ಯಾರೂ ಪ್ರಶ್ನಿಸುವಂತಿರಲಿಲ್ಲ. ಅನ್ಯಾಯ ಹಲ್ಲೆ ಕಗ್ಗೊಲೆಗಳೆಲ್ಲವೂ ದುಷ್ಟ ಶಿಕ್ಷೆ, ಶಿಷ್ಟ ರಕ್ಷಣೆಯ ಮಂತ್ರದಲ್ಲೇ ನಡೆದು ಹೋಗಿವೆ. ನ್ಯಾಯ ಎಂಬ

ಮರೀಚಿಕೆಯೂ ಕಾಣದ ಅನ್ಯಾಯದ ಉರುಳಿಗೆ ಕತ್ತುಕೊಟ್ಟವರ ಅನ್ಯಾಯದ ಅರ್ಥ ತಟ್ಟುವುದು ಬಹಳ ಕಷ್ಟ,

ಅನ್ಯಾಯ ಕಂಡು ಬಂದಲ್ಲೆಲ್ಲ ಮನಸ್ಸು ತೊಳಲಾಡುತ್ತದೆ. ಅನ್ಯಾಯ ಕೇವಲ ಒಂದು ಶಬ್ದ ಮಾತ್ರವಲ್ಲ. ವಿರಾಟ್ ಶೋಷಣೆಯ ಜಾಲವೇ ಆ ಪದದಲ್ಲಿ ಬೆರಕೆಯಾಗಿದೆ. ಹಾಗಾಗಿಯೇ ಅನ್ಯಾಯ ಪದವು ಕಿವಿ ಮೇಲೆ ಬಿದ್ದ ಕೂಡಲೆ ಒಂದು ಬಗೆಯ ಕಸಿವಿಸಿ, ಸಿಟ್ಟು, ಆಕ್ರೋಶ, ಪ್ರತಿರೋಧ ಉಂಟಾಗುತ್ತದೆ. ಖಂಡಿಸುವ ಧೋರಣೆ ಎದುರಾಗುತ್ತದೆ. ಅನ್ಯಾಯ ಮಾಡಿದವರನ್ನು ಶಿಕ್ಷಿಸಿ ಎಂಬ ಒತ್ತಡ ವಾಗುತ್ತದೆ. ಇಷ್ಟಿದ್ದರೂ ಅನ್ಯಾಯ ಮಾಡಿದವರನ್ನು ಕ್ಷಮಿಸಿಬಿಡುವ ಅದೆಷ್ಟೋ ಪ್ರಸಂಗಳು ಈಗಲೂ ನಮ್ಮ ಊರು ಕೇರಿಗಳಲ್ಲಿ ಉಂಟು. ಕೋಲಾರದ ಕಂಬಾಲಪಲ್ಲಿಯಲ್ಲಿ ದಲಿತರನ್ನು ಸಾಮೂಹಿಕವಾಗಿ ಜೀವಂತವಾಗಿ ಸುಟ್ಟುಹಾಕಿದಾಗ, ಕೊನೆಗೆ ಈ ಬರ್ಬರ ಅನ್ಯಾಯದ ವಿರುದ್ಧ ಯಾವ ದಲಿತರು ಕಟ ಕಟ ಹತ್ತಿದ್ದರೊ ಅವರೇ ತಮ್ಮ ಸಾಕ್ಷಿಯನ್ನು ಬದಲಿಸಿಕೊಂಡು ಅನ್ಯಾಯದ ಬಗ್ಗೆ ತಮಗೆ ಗೊತ್ತಿಲ್ಲ ಎಂದು ಸತ್ಯವನ್ನು ನುಂಗಿಕೊಳ್ಳುವರು. ಅಂದರೆ; ನ್ಯಾಯ ನೀತಿ, ಧರ್ಮ ಸತ್ಯ ಇವುಗಳು ಎಷ್ಟು ಅರ್ಥಹೀನ ಎಂಬುದರ ದರ್ಶನ ಆಗಿರುವುದೇ ಇಂತಹ ಅನ್ಯಾಯಗಳಿಂದ. ಅನ್ಯಾಯ ನಮಗೆ ಬಳಸುವ ಒಂದು ಶಬ್ದವಲ್ಲ. ಅದು ಯಾವತ್ತೂ ನಮ್ಮೊಳಗೆ ಭಯವನ್ನು ತರುತ್ತಲೇ ಅನ್ಯಾಯದ ವಿರುದ್ಧದ ಅರಿವನ್ನು ರೂಪಿಸುವ ಪದವಾಗಿದೆ.

ಆಕರ: ದಲಿತ ಪದಕಥನ– ಡಾ. ಮೊಗಳ್ಳಿ ಗಣೇಶ್

* * * *

# 4.3 ಜನಪದ ಕರಕುಶಲ ಕಲೆಗಳು ಜಾಗತೀಕರಣ

**ಡಾ. ಬಿ. ಎಸ್. ತಲವಾಡಿ**

ಜನಪದ ಭೂಮಿಕೆಯ ಮೇಲೆ ರೂಪ ತಾಳಿದ ಕೌಶಲ್ಯ ಪೂರ್ಣ ಕರಗೆಲಸದ ಕಲೆಗಳನ್ನು ಕರಕುಶಲ ಕಲೆಗಳು ಎನ್ನಬಹುದು. ಕರಕುಶಲ ಕಲೆಗಳು ಮುಖ್ಯವಾಗಿ ಕೈಗೆಲಸದ ವಸ್ತುಗಳಾಗಿದ್ದು, ಅವು ಕಲಾಕಾರನ ನೈಪುಣ್ಯ, ಕೈಚಳಕಗಳಿಂದ ಸೌಂದರ್ಯವನ್ನು ಒಳಗೊಂಡಿರಬೇಕು. ಕಲೆ ಎನ್ನುವುದೇ ಸೌಂದರ್ಯಾನುಭವದ ಅಭಿವ್ಯಕ್ತಿ. ಹದಿನೈದನೇ ಶತಮಾನದ ಬಹುದೊಡ್ಡ ಕಲಾವಿದ ಲಯೋನಾರ್ಡೊದಂಚಿ ಕೂಡ ಈ ಮಾತನ್ನು ಅನಮೋದಿಸುತ್ತಾನೆ. ಕಲೆ ದೃಷ್ಟಿಯಲ್ಲಿ ಅರಳಿ ಸಮಷ್ಟಿಯದಾಗಬೇಕು. ಶಿಷ್ಟ ಕಲೆಗಳಲ್ಲಿ ವೃಷ್ಟಿ ಉಳಿದುಕೊಂಡರೆ, ಜನಪದ ಕಲೆಗಳಲ್ಲಿ ಸಮಷ್ಟಿ ಪ್ರಧಾನವಾಗುತ್ತದೆ. ಇಲ್ಲಿ ಸಮೂಹ ಬಹಳ ಮುಖ್ಯ. ಕಲೆ ಸಂಪರ್ಕ ಸಾಧನ ಹೇಗೋ ಸಮಾಜ ಸುಧಾರಕವೂ ಹೌದು. ಈ ಕಾರಣದಿಂದ ಕಲೆಯನ್ನು ಕೇವಲ ಸದುದ್ದೇಶಕ್ಕಾಗಿ ಬಳಸಬೇಕೆಂದು ಟಾಲ್‌ಸ್ಟಾಯ್' ಎಚ್ಚರಿಕೆ ನೀಡುತ್ತಾನೆ.

ಈ ಲೇಖನದ ಸ್ಪಷ್ಟ ಕಲ್ಪನೆಗೆ ಕಲೆಯ ಬಗ್ಗೆ ಇನ್ನೂ ಸ್ವಲ್ಪ ವಿವರಣೆ ಅನಿವಾರ್ಯ. 'ಕಲೆ' ಎಂದರೆ 'ಅಂಶ' ಎಂಬ ಅರ್ಥ ಋಗ್ವೇದದಲ್ಲಿದೆ. ಕಲೆ ಎಂಬುದು ಆ ದಿವ್ಯ ಶಕ್ತಿಯ ಒಂದು ಕಾಂತಿಯ ಕಿರಣ, ಕಲೆ ಎಂಬುದರ ಸಾಮಾನ್ಯ ಅರ್ಥ ಉಪಾಯ, ಕೌಶಲ ಎಂದು. ಆದ್ದರಿಂದ, "ಕಲೆ ಎಂದರೆ, ಉಪಾಯ ಅಥವಾ ಕೌಶಲದಿಂದ ಮನುಷ್ಯ ತನ್ನ ಭಾವನೆಗಳನ್ನು, ಆಲೋಚನೆಗಳನ್ನು ಮನ ಮುಟ್ಟುವ ಹಾಗೆ, ಅಭಿವ್ಯಕ್ತಿಸುವ ಒಂದು ವಿಧಾನ" ಎನ್ನಬಹುದು. ಈ ತಾತ್ಪರ್ಯವನ್ನು ಮತ್ತೂ ಸರಳಗೊಳಿಸಿದರೆ, "ಮಾನವನ ಕ್ರಿಯಾ ಶಕ್ತಿಯ ಕುಶಲ ಅಭಿವ್ಯಕ್ತಿ ಕಲೆ" ಎಂದಾಗುತ್ತದೆ. ಮೊದಲೇ ಹೇಳಿದ ಹಾಗೆ ಕಲೆ ಸೌಂದರ್ಯವನ್ನು ಅಂತರ್ಗತ ಮಾಡಿಕೊಂಡಿರುತ್ತದೆ. ಆ ಸೌಂದರ್ಯ ಸೌಂದರ್ಯಕ್ಕಾಗಿ ಇರದೇ, ಅದು ಸತ್ಯವಾಗಿರಬೇಕು, ಸತ್ಯವನ್ನು ಪ್ರತಿನಿಧಿಸಬೇಕು. ಸೌಂದರ್ಯ ಸತ್ಯವಾಗಿ, ಸತ್ಯ ಶಿವವಾಗಬೇಕು. ಈ ಮೂರೂ ಗುಣಗಳು ಸೇರಿದಾಗ ಮಾನವನ ಮನಸ್ಸಿಗೆ ಆನಂದವನ್ನುಂಟು ಮಾಡುತ್ತವೆ. ಅದಕ್ಕೇ ನಮ್ಮಲ್ಲಿ 'ಸತ್ಯಂ ಶಿವಂ ಸುಂದರಂ' ಎಂಬ ಮಾತಿರುವುದು. ಇಲ್ಲಿ ಆಂಗ್ಲ ಕವಿ ಕೀಟ್ ನ "ಸತ್ಯವಾದುದೆಲ್ಲ ಸುಂದರ, ಸುಂದರವಾದುದೆಲ್ಲ ಸತ್ಯ" ಎಂಬ ಮಾತು ( Beauty is truth and the truth is beauty) .ನೆನಪಾಗುತ್ತದೆ. ಸೌಂದರ್ಯ ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ಭಿನ್ನವಾಗುತ್ತದೆ. ಸತ್ಯವು ಈ ಮಾತಿಗೆ ಹೊರತಲ್ಲ (ಹಲವು ಬಗೆಯ ಕಲೆಗಳನ್ನು ನೋಡಿದಾಗ ಈ ಭಿನ್ನತೆ ತಿಳಿಯುತ್ತದೆ). ಇದು ಚರ್ಚಾಸ್ಪದ ವಿಚಾರ, ಇರಲಿ. ಒಟ್ಟಿನಲ್ಲಿ ಕಲೆ ಮಾನವ ಮನಸ್ಸಿಗೆ ರಸಾನಂದವನ್ನುಂಟು ಮಾಡಬೇಕು. ಈ ರಸಾನಂದ ಬ್ರಹ್ಮಾನಂದ ಸೋದರಃ" ಎಂದಿರುವುದು. ಈ ರಸಾನಂದ ಗುಣ ಎಲ್ಲಾ

ಕಲೆಗಳಿಗೂ ಏಕ ಪ್ರಕಾರವಾಗಿರುವುದಿಲ್ಲ. ಕೆಲವು ಕಲೆಗಳಿಗೆ ಹೆಚ್ಚಾಗಿರುತ್ತದೆ, ಮತ್ತೆ ಕೆಲವು ಕಲೆಗಳಿಗೆ ಕಡಿಮೆ ಪ್ರಮಾಣದಲ್ಲಿರುತ್ತದೆ. ಉದಾ : ಚಿತ್ರಕಲೆ, ನೃತ್ಯಕಲೆ, ಸಂಗೀತ ಕಲೆ, ಶಿಲ್ಪ ಕಲೆಗಳಿಗೆ ರಸಾನಂದ ಗುಣ ಅಧಿಕವಾಗಿರುತ್ತದೆ. ಈ ಕಾರಣದಿಂದ ಇವನ್ನು ಲಲಿತ ಕಲೆಗಳು (Fine Arts) ಎಂದು ಗುರುತಿಸಲಾಗಿದೆ. ಉಪಯುಕ್ತತೆ ಮೂಲವಾದ ಅಥವಾ ಕೃಷಿ ಸಹಾಯಕವಾದ ಕಲೆಗಳನ್ನು ಕರಕುಶಲ ಕಲೆಗಳು (Crafts) ಎಂದು ಕರೆಯುತ್ತೇವೆ. ಲಲಿತ ಕಲೆಗಳು ಭಾವ ಪೂರ್ವಕ ನಿರ್ಮಿತಿಯಾದರೆ, ಜನಪದ ಕರಕುಶಲ ಕಲೆಗಳು ಪ್ರಜ್ಞಾಪೂರ್ವಕ ನಿರ್ಮಿತಿ. ಲಲಿತ ಕಲೆಗಳದು ಹೆಚ್ಚಾಗಿ ಮಾನಸಿಕ ದುಡಿಮೆ. ಜನಪದ ಕರಕುಶಲ ಕಲೆಗಳದು ದೈಹಿಕ ದುಡಿಮೆ. ಇಷ್ಟಿದ್ದರೂ, ಲಲಿತ ಕಲೆ ಹಾಗೂ ಕರಕುಶಲ ಕಲೆಗಳ ಮಧ್ಯೆ ನಿರ್ಣಾಯಕ ಗೆರೆ (Demartration) ಎಳೆಯುವುದು ಸಾಧ್ಯವಾಗುವುದಿಲ್ಲ. ಅಧ್ಯಯನದ ಅನುಕೂಲ ದೃಷ್ಟಿಯಿಂದ ಹೀಗೆ ಬೇರ್ಪಡಿಸಬಹುದು ಅಷ್ಟೇ.

ಭಾರತೀಯ ಸಾಂಪ್ರದಾಯಿಕ 64 ಕಲೆಗಳಲ್ಲಿ ಕರಕುಶಲ ಕಲೆಗಳೂ ಸೇರಿವೆ. ಯಂತ್ರ ನಿರ್ಮಿತ ವಸ್ತುಗಳಲ್ಲದ ದೇಶೀಯ ರಚನೆಗಳನ್ನೊಳಗೊಂಡ ಉಪಯುಕ್ತ ಕಲೆಗಳನ್ನು ಮಾತ್ರ ಇಂದು ಜನಪದ ಕರಕುಶಲ ಕಲೆಗಳೆಂದು ಗುರುತಿಸಲಾಗುತ್ತಿದೆ. ಇವು ಮಾನವ ನಿರ್ಮಿತ ಕಲಾ ವಸ್ತುಗಳಾದರೂ ಇವುಗಳ ಉಗಮ ದೈವ ಮೂಲದ್ದು.

ಕರಕುಶಲ ಕಲೆಗಳು ಮೊದಲು ತ್ರಿಮೂರ್ತಿಗಳಿಂದ ಋಷಿಗಳಿಗೂ, ಋಷಿಗಳಿಂದ ದೇವ ಮಾನವ ಶಿಲ್ಪಿಗಳಿಗೂ ಬೋಧಿಸಲ್ಪಟ್ಟು ಅವು ಲೋಕದಾದ್ಯಂತ ವಿಕಸನ ಹೊಂದಿದವು ಎಂದು ವೇದಶಾಸ್ತ್ರ ಪುರಾಣಗಳು ಹೇಳುತ್ತವೆ. ಈ ಹಿನ್ನೆಲೆಯಲ್ಲಿ ಸೃಜನಶೀಲ ವ್ಯಕ್ತಿ ರೂಪವಾದ 'ವಿಶ್ವಕರ್ಮ' ವನ್ನು ಸೃಷ್ಟಿಸಿವೆ. ಪುರಾಣಗಳ ಪ್ರಕಾರ ವಿಶ್ವಕರ್ಮ ತೃಷ್ಣ ಹಾಗೂ ರಿಭು, ತೃಷ್ಣ ಹಾಗೂ ರಿಭು ಭಿನ್ನ ಭಿನ್ನ ವ್ಯಕ್ತಿಗಳು, ತೃಷ್ಣ ಎಂದರೆ ರೂಪಕಾರ (Shaper) ರಿಭು ಎಂದರೆ ಕುಶಲಿ (Skilfull) ಎಂಬ ಅರ್ಥ ಗಮನೀಯ. ಸ್ವರ್ಗ – ಮರ್ತ್ಯ, ದೇವ – ಮಾನವ, ಪ್ರಾಣಿ–ಸಸ್ಯ–ಜಡ ಇವೆಲ್ಲವುಗಳ ನಿರ್ಮಾತೃ ವಿಶ್ವಕರ್ಮ, ಹಾಗಾಗಿ ಆತ ವಿಧಾತ್ರ (Creater) ನಿರ್ಮಾತೃ ಅಥವಾ ರಚನಾಕಾರ (Workman) ಕರ್ತೃ ಅಥವಾ ತಕ್ಷಕ (Carver) ಕೆತ್ತನೆಗಾರ ಎಂಬ ಅವನ ಅನರ್ಥನಾಮಗಳು 'ಕುಶಲಿ' ಎಂಬುದನ್ನು ಸೂಚಿಸುತ್ತವೆ.

ವಿಶ್ವಕರ್ಮ ಜನಿತ – ಕುಶಲ ಕಲೆಗಳೆಲ್ಲವೂ ವಂಶಸ್ಥವಾಗಿ ವಿಕಸನಗೊಂಡವು ಎಂಬುದನ್ನು ಸೂತ್ರೀಕರಿಸಲು ವಿಶ್ವಕರ್ಮನಿಗೆ ಐದು ಮಕ್ಕಳಿದ್ದವು ಎಂದು ಆರೋಪಿಸಿದೆ. ಆ ಐದು ಮಕ್ಕಳು ಕ್ರಮವಾಗಿ ತೃಷ್ಣ, ಮನು, ಮಯ, ಶಿಲ್ಪಿ ಮತ್ತು ವಿಶ್ವಜ್ಞ ಇವರು ಅನುಕ್ರಮವಾಗಿ ಕಬ್ಬಿಣ, ಮರ (ಕಾಷ್ಠ), ತಾಮ್ರ, ಶಿಲೆ ಮತ್ತು ಚಿನ್ನ – ಹೀಗೆ ಪಂಚ ಸಾಮಗ್ರಿಗಳಲ್ಲಿ ಕುಶಲಿಗಳಾಗಿದ್ದರೆಂದು, ಸ್ಕಂದ, ಬ್ರಹ್ಮಾಂಡ, ವಶಿಷ್ಠ ಪುರಾಣಗಳಲ್ಲಿ ಹೇಳಿದೆ.

ಕರ ಎಂದರೆ ಕೈ ಅಥವಾ ಕೈಗಳು ಕಚ್ಚಾ ಸಾಮಗ್ರಿ (ಕಲ್ಲು, ಮಣ್ಣು, ಮರ, ಚರ್ಮ, ಕಾಗದ, ಪ್ಲಾಸ್ಟಿಕ್, ಹುಲ್ಲು, ಜೊಂಡು ಯಾವುದೇ ಆಗಿರಬಹುದು) ಯನ್ನು ಉಪಯೋಗಿಸಿ, ನಿರ್ದಿಷ್ಟ ಉದ್ದೇಶದ ಹಿನ್ನೆಲೆಯಲ್ಲಿ ಆಕರ್ಷಕವೂ, ಉಪಯುಕ್ತವೂ ಆದ ಒಂದು ವಸ್ತುವನ್ನು ರೂಪಿಸುವ ಕುಶಲತೆಯನ್ನೇ ಕರಕುಶಲ ಕಲೆ ಎನ್ನಲಾಗುವುದು.

ಕರಕುಶಲ ಕಲೆಗಳು ಪ್ರಮುಖವಾಗಿ : ಲೋಹ, ಶಿಲ್ಪ, ಆಭರಣ, ಮರದ ಕೆತ್ತನೆ, ಕಲ್ಲು ಕೆತ್ತನೆ, ಕುಂಭ ಕಲೆ, ಮಣ್ಣಿನ ಮೂರ್ತಿ, ಕೈ ಮಗ್ಗದ ಜವಳಿ, ಕಸೂತಿ, ಬಟ್ಟೆ ನೆಯ್ಗೆ, ಚಾಪೆ, ಬುಟ್ಟಿ ಹೆಣಿಕೆ, ಚರ್ಮದ ವಸ್ತುಗಳು ಇತ್ಯಾದಿ, ಇತ್ಯಾದಿ

ಮಾನವನ ಬೆಳವಣಿಗೆಯ ವಿಕಾಸದ ಜತೆ ಜತೆಗೆ ಜನಪದ ಕರಕುಶಲ ಕಲೆಗಳ ವಿಕಾಸವೂ ಆಯಿತು. ಮಾನವ ನಾಗರಿಕನಾದಂತೆ ಅವರ ಅಗತ್ಯಗಳು ಹೆಚ್ಚಾದವು. ಕರಕುಶಲ ವಸ್ತುಗಳು ಕೇವಲ ಉಪಯೋಗ ವಸ್ತುವಾಗದೇ ಅಲಂಕಾರಿಕ ವಸ್ತುಗಳೂ ಆಗಿರಬೇಕೆಂಬ ನಿರೀಕ್ಷೆ ಅತಿಯಾಯಿತು. ಮಾನವಾಪೇಕ್ಷೆಯ ಅನುಗುಣ ಕರಕುಶಲ ಕರ್ಮಿಗಳು ವಸ್ತು ನಿರ್ಮಾಣಕ್ಕೆ ತೊಡಗಿದರು. ಇವು ಭೋಗದ ವಸ್ತುಗಳೂ ಆಗಬೇಕೆಂಬ ಬಯಕೆಯಿಂದಾಗಿ ಈಚಲು ಚಾಪೆ, ಜೊಂಡಿನ ಮಂದಲಿಗೆಯಾಯಿತು, ಜೊಂಡಿನ ಮಂದಲಿಗೆ ಹತ್ತಿಯ ಮೆತ್ತೆಯ ಹಾಸಿಗೆಯಾಯಿತು. ಈಗ ಅದು ಜಾಗತೀಕರಣದ ಮಾಯಾ ಜಾಲಕ್ಕೆ ಸಿಲುಕಿ ಫೋಂ ಹಾಸಿಗೆಯಾಗಿ ಜನಪ್ರಿಯತೆ ಪಡೆದಿದೆ. ಈ ಮಾತನ್ನು ನಾವು ಎಲ್ಲಾ ಕರಕುಶಲ ವಸ್ತುಗಳಿಗೂ ಅನ್ವಯಿಸಬಹುದು (ಪಾಲಿತಿನ್ ಅಥವಾ ಪ್ಲಾಸ್ಟಿಕ್ ಚಾಪೆಗಳೂ ಆಗಿವೆ).

ಪ್ರಾಚೀನ ಹಾಗೂ ಪ್ರಮುಖ ಕುಶಲ ಕಲೆಗಾರರಾದ ಕುಂಬಾರ (ಮೃತ್ತಿಕಾ ಶಿಲ್ಪಿ), ಕಲ್ಕುಟಿಗ (ಶಿಲ್ಪಿ), ಬಡಿಗ(ಕಾಷ್ಠ ಶಿಲ್ಪಿ), ವಸನಕಾರ (ವಸ್ತ್ರ ಶಿಲ್ಪಿ) ಹಾಗೂ ಕಮ್ಮಾರ (ಲೋಹ ಶಿಲ್ಪಿ) ಮೊದಲಾದವರು ಇಂದು, ಪ್ರಮುಖವಾದ ಸಾಮಗ್ರಿಗಳ ಬಳಕೆ ಹಾಗೂ ಗ್ರಾಹಕರ ಬೇಡಿಕೆಗಳಿಗನ್ವಯ ಹೊಸ ಹೊಸ ಸಾಮಗ್ರಿಗಳ ಅನ್ವೇಷಣೆಯ ಜೊತೆಗೆ ವ್ಯಾಪಕ ವೈವಿಧ್ಯತೆಯನ್ನು ತರಬೇಕಾದ ಪರಿಸ್ಥಿತಿ ಜಾಗತೀಕರಣದಿಂದ ಉಂಟಾಗಿದೆ.

ಇಂದು ಎಂದಿಗಿಂತಲೂ ಹೆಚ್ಚಾಗಿ, ಪರಿಣಾಮಕಾರಿಯಾಗಿ, ತಂತ್ರವಾಗಿ ಏಡ್ಸ್ ರೋಗದ ರೀತಿ ಕರಕುಶಲ ಕಲೆಗಳ ಮೇಲೆ ದಾಳಿ ಇಟ್ಟಿರುವ ಜಾಗತೀಕರಣದ ಜೊತೆ ನಮ್ಮ ಕುಶಲ ಕರ್ಮಿಗಳು ಸದಾ ಸೆಣಸಬೇಕಾಗಿದೆ. ಏಕೆಂದರೆ, ಜಾಗತೀಕರಣಕ್ಕೆ ತನ್ನದೇ ಆದ ಉಪಯುಕ್ತತೆ ಇರುವಂತೆ ಹಿನ್ನೆಡೆಯೂ ಇದೆ. (It has its benefits and also serious setback).

**ಹಾಗಾದರೆ ಈ ಜಾಗತೀಕರಣ ಎಂದರೇನು ?**

ಇಂದು ಮಧ್ಯಮ ವರ್ಗದವರೂ ಮಾಧ್ಯಮದವರೂ ಒಪ್ಪಿಕೊಂಡ ಒಂದು ತತ್ವ ಜಾಗತೀಕರಣ. ಸ್ವತಂತ್ರ ಮಾರುಕಟ್ಟೆಯ ಹೆಸರಿನಲ್ಲಿ ಪ್ರಪಂಚದಾದ್ಯಂತ ಏಕರೂಪದ ಸಂಸ್ಕೃತಿ ಹಾಗೂ ಆರ್ಥಿಕ ನೀತಿಯನ್ನು ಹೇರುವುದು ಇದರ ಮೂಲ ಉದ್ದೇಶ.

"ಪ್ರಪಂಚದಾದ್ಯಂತ ಮಾನವನ ಜೀವನವನ್ನು ಸುಧಾರಿಸುವುದು" (Improve ment in the quality of human life all over the world) ಗುರಿ ಎಂದು ಇದರ ಪ್ರಚಾರಕರು, ಜಾಗತೀಕರಣಕ್ಕೆ ವಿಶೇಷ ಅರ್ಥವನ್ನು ಆರೋಪಿಸುವರು. ಇದು ಬಂಡವಾಳಶಾಹಿಗಳ ಆರ್ಥಿಕ ನೀತಿಯ ಪ್ರತಿರೂಪ. ಜಾಗತಿಕ ಮಟ್ಟದಲ್ಲಿ ಬಂಡವಾಳಶಾಹಿತ್ವಕ್ಕೆ ಪ್ರತಿಯಾಗಿ ಹುಟ್ಟಿಕೊಂಡ ಜಾಗತೀಕರಣ ಯಾವ ಬಗೆಯಲ್ಲೂ ಸಮಾಜದ ಸಾಂಸ್ಕೃತಿಕ ಮೌಲ್ಯಗಳನ್ನಾಗಲೀ, ನಾಗರಿಕ ತತ್ವಗಳನ್ನಾಗಲೀ ಪ್ರತಿನಿಧಿಸುವುದಿಲ್ಲ. ನೋವಿಗೆ ವಿಮುಖವಾದ ಸುಖಾಪೇಕ್ಷಿತ ಸೌಖ್ಯ ತತ್ವವನ್ನು ಇದು ಪ್ರಚಾರ ಮಾಡುತ್ತದೆ. (........it is bound to propagate headonism seeking pleasure and escape pain) ನೋವು ವಿಮುಖ ಸುಖಾಪೇಕ್ಷೆ (Painless pleasure) ಯನ್ನು ಇದು ಪ್ರಚೋದಿಸುವುದರಿಂದ ಕರಕುಶಲ ಕರ್ಮಿಗಳು ನಿರಾಪೇಕ್ಷಿತರಾಗಿ ಸುಲಭ ಹಣ ಸಂಪಾದನೆಗೆ ಅವರವರಲ್ಲೇ ಕತ್ತು ಕೊಯ್ಯುವ ಪೈಪೋಟಿ ನಡೆಸಲು ಅನುವು ಮಾಡಿಕೊಡುತ್ತದೆ. ಸೋಮಾರಿತನ ಪ್ರಾಪ್ತವಾಗುತ್ತದೆ. ಆರ್ಥಿಕ ಉತ್ಪತ್ತಿಯ ಹಂಚಿಕೆಯಿಂದ ಸಂಪಾದನೆ ಕಡಿಮೆಯಾಗುತ್ತದೆ. ಈ ಮಾತು ಎಲ್ಲಾ ಕ್ಷೇತ್ರಕ್ಕೆ ಅನ್ವಯಿಸುತ್ತದೆ. ಒಂದುಕೆ. ಜಿ. ತೆಂಗಿನೆಣ್ಣೆಗೆ ಎಪ್ಪತ್ತು ರೂ.ಗೆ ಸಿಗುತ್ತಿದ್ದುದು, ಜಾಗತೀಕರಣದಿಂದಾಗಿ ಕೇವಲ ಮೂವತ್ತು ರೂ. ಗೆ ಇಳಿದಿದೆ ಎಂದು ಕೇರಳದ ರೈತರು ಜಾಗತೀಕರಣದ ವಿರುದ್ಧ ಮೊನ್ನೆ ಮೊನ್ನೆ ಚಳುವಳಿ ನಡೆಸಿದೆ. ಪಾಶ್ಚಾತ್ಯದ (Western) ಈ ಹೊಸ ಘೋಷಣೆ ಜಾಗತಿಕಮಟ್ಟದಲ್ಲಿ ಕ್ಷಿಪ್ರವಾಗಿ ವ್ಯಾಪಿಸಿದೆಯಾದರೂ, ಅದು ಪಾಶ್ಚಾತ್ಯ ಸಮುದಾಯಕ್ಕೆ ಮಾತ್ರ ಲಾಭವಾಗುತ್ತದೆ. (..... the model of development that they prescribe for the rest of the world is one which has been found by them to have been very beneficially applied in their our societies – Srinivas Rao).

ಜೇಡಿ ಮಣ್ಣಿನಿಂದ ತಯಾರಿಸುತ್ತಿದ್ದ ಮಡಕೆ, ಪಾಸಾಲೆ, ಮುಚ್ಚಳ, ಗಡಿಗೆ, ಗುಂಬ, ಕುಡಿಕೆ ಮುಂತಾದ ಪಾತ್ರೆ ಪರಿಕರಗಳು ಇಂದು ಮಾಯವಾಗುತ್ತಿವೆ. ಹೂಜಿ, ಬಟ್ಟಲು, ತಟ್ಟೆ, ಹೆಂಚು, ಕಾಳು ಸಂಗ್ರಹ ವಾಡೆ (ಕೊಂಬೆ) ದೀಪಗಂಭಗಳು ಕಾಣ ಸಿಗುವುದಿಲ್ಲ. ಧಾರ್ಮಿಕ ವಸ್ತುಗಳಾದ ಧೂಪಾರತಿ, ಹಣತೆ, ಹರಕೆಯ ಗೊಂಬೆಗಳು ಸಜೀವ ಗಾತ್ರದ ಹಾಗೂ ಸಣ್ಣ ಗಾತ್ರದ ಸತ್ವ ಪೂರ್ಣ ಮೃತ್ತಿಕಾ

ರಚನೆಗಳೆಲ್ಲ ಕರ್ನಾಟಕದಲ್ಲಿ ವಿಶೇಷವಾಗಿ ಮರೆಯಾಗುತ್ತಿದೆ. ಅವುಗಳಿಗೆ ಪರ್ಯಾಯವಾಗಿ ಪಿಂಗಾಣಿ, ಗಾಜು, ಸುಡಾವೆ ಕಲಾ ವಸ್ತುಗಳು ಕಾಣಿಸಿಕೊಳ್ಳುತ್ತಿವೆ.

ಬಳಪದ ಕಲ್ಲಿನ ಅಡಿಗೆ ಸಾಮಗ್ರಿಗಳು, ದೀಪ, ಗೊಂಬೆಗಳು, ಬೆಣಚುಗಲ್ಲಿನ ಕೊಡಲಿ, ಚಾಕು, ಉಳಿ ಮುಂತಾದವು ಇರಲಿ ಮಣಿಗಳು ಆಭರಣ ಪರಿಕರಗಳು ಹೇಳ ಹೆಸರಿಲ್ಲದಂತಾಗಿವೆ. ಮೂರ್ತಿಗಳ ನಿರ್ಮಾಣವೂ ಕಡಿಮೆಯಾಗುತ್ತಿದೆ. ಕಾವ್ಯ ಶಿಲ್ಪಗಳಿಗೂ ಇದೇ ಗತಿ ಬಂದಿದೆ. ಲಖನೌ, ಕಾಶ್ಮೀರ, ಗುಜರಾತ್, ಸೌರಾಷ್ಟ್ರ ಹಾಗೂ ನಾಸಿಕ್‌ಗಳಲ್ಲಿ ಕಟ್ಟಿಗೆಯಿಂದ ತಯಾರಿಸಲಾದ ಬಾಲಿ, ಪಿಂಜರಾ (ಕಿಡಕಿ)ಗಳು, ತೊಲೆ, ಬೋಧಿಗೆ, ಕಿಟಕಿಗಳು ತುಂಬಾ ಪ್ರಖ್ಯಾತವಾದವು. ಹಾಗೆಯೇ ಪಂಜಾಬ, ಉತ್ತರ ಪ್ರದೇಶ, ಅಳಘರ, ಅಜಮಘರ, ಬರೇಲಿ, ಮಥುರಾ, ಬುಲಂದಶಹರ, ಗಾಜಿಪುರ ಮುಂತಾದೆಡೆಗಳಲ್ಲಿನ ಪೀಠೋಪಕರಣಗಳು, ಅಲಂಕಾರದ ಕೆತ್ತನೆಗಳು, ಕೊಡಗು, ಮೈಸೂರು, ಸಾಗರ, ಕುಮಟಾ, ಶಿವಮೊಗ್ಗ, ಉತ್ತರ ಕನ್ನಡ, ಟ್ರಾವಂಕೂರು, ತಿರುಚಿನಾಪಳ್ಳಿ ಮುಂತಾದೆಡೆಗಳ ಶ್ರೀಗಂಧದ ತಯಾರಿಕೆಗಳು ಅಂದು ಲೋಕ ವಿಖ್ಯಾತವಾಗಿದ್ದವು. ಚನ್ನಪಟ್ಟಣದ ಬಣ್ಣದ ಗೊಂಬೆಗಳು ಈಗ ಜಾಗತೀಕರಣದಿಂದಾಗಿ ನೆಲ ಕಚ್ಚಿವೆ. ನಿತ್ಯ ಬಳಕೆಯ ಕುರ್ಚಿ, ಮೇಜು, ಬೆಂಚು ಕಪಾಟುಗಳು ಕಬ್ಬಿಣ ಅಥವಾ ಸ್ಟೀಲಿನಿಂದ ನಿರ್ಮಾಣವಾಗುತ್ತವೆ. ಮನೆಯ ಬಾಗಿಲಿನಾದಿಯಾಗಿ ಎಲ್ಲವೂ ಕಬ್ಬಿಣಮಯವಾಗಿವೆ. ಕಬ್ಬಿಣದ ಕೆಲಸಗಾರರು ಹೆಚ್ಚಾಗುತ್ತಿದ್ದಾರೆ. ಒಂದು ಕಡೆ ಆದ ನಷ್ಟ ಮತ್ತೊಂದು ಕಡೆಗೆ ಆದ ಲಾಭ ಹೌದು, ಆದರೆ, ಕಬ್ಬಿಣದ ವಸ್ತುಗಳು ಹೆಚ್ಚು ಯಂತ್ರ ನಿರ್ಮಿತವಾದುವು. ಇದು ಮಾನವನ ಕೆಲಸವನ್ನು ಕಸಿಯುತ್ತದೆ. ಅದರಿಂದ ಉತ್ಪಾದನೆ ಹೆಚ್ಚಾಗಿ ಸಂಪಾದನೆ ಕಡಿಮೆಯಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಜಾಗತೀಕರಣ.

ಒಂದು ಕಾಲಕ್ಕೆ ಉಣ್ಣೆ, ರೇಷ್ಮೆ, ಗಿಡದ ತೊಗಟೆ, ಮರದ ನಾರುಗಳಿಂದ ತಯಾರಿಸುತ್ತಿದ್ದ ಬಟ್ಟೆಗಳು ಈಗ ಮಸ್ಲಿನ್, ನೈಲಾನ್ ಮುಂತಾದ ವಸ್ತುಗಳಿಂದ ತಯಾರಾಗುತ್ತಿವೆ. ಅರಳೆ, ಮಕಮಲ್ ಮತ್ತು ರೇಷ್ಮೆ ಬಟ್ಟೆಗಳು ಒಂದು ಕಾಲಕ್ಕೆ ವಿಪರೀತವಾಗಿ ರಫ್ತಾಗುತ್ತಿದ್ದವು. ಕರ್ನಾಟಕದ ರೇಷ್ಮೆಯಂತೆ ಢಾಕಾದ ಮಲ್‌ಮಲ್ ಲೋಕಪ್ರಸಿದ್ಧವಾಗಿದ್ದವು.

ಕಮ್ಮಾರಿಕೆ ಇಂದಿಗೂ ಹೊಸ ಹೊಸ ರೀತಿಯ ವಸ್ತು ವಿಶೇಷಗಳೊಂದಿಗೆ ತನ್ನತನ ಉಳಿಸಿಕೊಂಡಿದೆ. ಲೋಹದ ವಿಗ್ರಹಗಳು ಸರ್ವಶ್ರೇಷ್ಠ ಕಲಾ ಕೌಶಲ್ಯಗಳೆನಿಸಿವೆ. ವಿಶೇಷವಾಗಿ ಕಂಚಿನ ವಸ್ತುಗಳು ಒಂದು ಕಲಾ ಪ್ರಪಂಚವನ್ನೇ ನಿರ್ಮಿಸಿವೆ. ತಮಿಳುನಾಡು ಕುಶಲಕರ್ಮಿಗಳ, ಕರಕೌಶಲ್ಯದ ನೂರಾರು ವಿನ್ಯಾಸಗಳ ಮೇಲೆ ಈಗಲೂ ಬೆಂಗಳೂರಿನ 'ಜೂಂಮಹಾರ್' ನಲ್ಲಿ ನಡೆಯುತ್ತದೆ. ಕಂಚು, ತಾಮ್ರ, ಇನ್ ಲೇ ಮಾಡಿದ ಉತ್ಪನ್ನಗಳು, ನವಿರು ಕೆತ್ತನೆಯ ಕಾರ್ವಿಂಗ್ ನ ಕಾಷ್ಠ ಶಿಲ್ಪಗಳು, ಗೂಬೆ, ಆನೆ, ಕುದುರೆ, ಒಂಟೆಗಳು ಕೇವಲ ಕರ ಕೌಶಲದಿಂದಲೇ ಇವನ್ನು ಕೆತ್ತುತ್ತ ಜಾಲಾಂದ್ರಗಳಂತೆ ಅವುಗಳ ಹೊಟ್ಟೆ ಸೀಳಿ, ಹೊಟ್ಟೆಯೊಳಗೊಂದು ಮರಿಯನ್ನು ಮಾಡುವ ಚಾತುರ್ಯಕ್ಕೆ ಯಾರೂ ತಲೆಬಾಗಬೇಕು. ಟೆರಾಕೊಟ್ಟಾದ

ವಸ್ತು ವಿಶೇಷಗಳು ಇಂದು ರೂಢಿಯಿವೆ. ಸಮಕಾಲೀನ ಟ್ರೆಂಡ್ ಇದನ್ನೇ ಬಯಸುತ್ತದೆ. ಇಂದು ಜಾಗತೀಕರಣದ ಬೇಡಿಕೆಯನ್ವಯ ಕರಕುಶಲ ಕಲೆಗಳು ಉತ್ಪನ್ನವಾಗುತ್ತಿವೆ. ಜೂಟ್ ಉತ್ಪನ್ನಗಳು, ಟೆರಾಕೊಟ್ಟಾ ಆಭರಣಗಳು, ಬ್ಲೂ ಆರ್ಟ್ ಪಾಟರಿ, ಚಿಕನ್ ಕಸೂತಿಗಳ ವಸ್ತ್ರ ವಿನ್ಯಾಸಗಳು, ಪೀಠೋಪಕರಣಗಳು, ಕಟ್ಟಿಗೆಯ ಆಟಿಕೆಗಳು ಇವೆಲ್ಲಾ ಇಂದು ಜಂಬೋ ಆಫರ್ ಗಳಾಗಿ ದೊರೆಯುತ್ತಿವೆ. ಕಾಲ್ಪನಿಕ ಶಕ್ತಿಯನ್ನೂ ಸೃಜನಶೀಲ ಮನಸ್ಸನ್ನು ಉತ್ತೇಜಿಸುವ ನೂರಾರು ಬಗೆಯ ಕರಕುಶಲ ವಸ್ತುಗಳು ಇಂದು ಲಭ್ಯವಿವೆ. ಅವು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ಜಾಗತೀಕರಣ ನೆರವಾಗುವುದರ ಜೊತೆಗೆ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸಿ ಲಾಭಾಂಶವನ್ನು ಮೊಟಕುಗೊಳಿಸುತ್ತದೆ ಎಂಬುದು ಕುಶಲಕರ್ಮಿಗಳ ಅಭಿಪ್ರಾಯ.

ಜನಪದ ಕರಕುಶಲ ಕಲೆಗಳು ವಿಸ್ತರಣೆಗಳಾಗಿ ಇಂದು ಬೇರೆ ಬೇರೆ ಬಗೆಯ ಉತ್ಪನ್ನಗಳಿಂದ ತಯಾರಾಗುವ ನೂರಾರು ವಸ್ತು ವಿಶೇಷಗಳು ಜಾಗತೀಕರಣದಿಂದಾಗಿ ಪ್ರಚಾರಗೊಂಡು ಬಳಕೆಗೆ ಬಂದಿವೆ. ಬಣ್ಣದ ದಾರ, ಶುಭ ಕೋರಲು ಬಳಸುತ್ತಿದ್ದ ಅಕ್ಕಿ ಕಾಳಿನಾದಿಯಾಗಿ ಪ್ಲಾಸ್ಟಿಕ್ ಮಯವಾಗಿದೆ. ಇಂದಿಗೂ ಮೂಲ ಕಲೆಯನ್ನು ಉಳಿಸುವ ಕೆಲವು ಪ್ರಯತ್ನಗಳು ನಡೆಯುತ್ತಿವೆ. ಆದರೆ, ಅವಕ್ಕೆ ಜನಮನ್ನಣೆ ಇಲ್ಲದೆ ಸೊರಗುವ ಸ್ಥಿತಿ ಉಂಟಾಗಿದೆ. ಮದುವೆ ಮೊದಲಾದ ಮಂಗಳ ಕಾರ್ಯಗಳಲ್ಲಿ ಉಪಯೋಗಿಸುತ್ತಿದ್ದ ಭೂಭಪತ್ರಿ ಕೊಡೆಯ ಅಲಂಕರಣ, ಕಂಬಳಿ ಹಾಸಿ ಸೇಸಕ್ಕಿ ಹೊಯ್ಯುವುದು, ಅಕ್ಕಿ, ಬೇಳೆ, ಹೆಸರು ಕಾಳುಗಳ ಅಲಂಕಾರಿಕ ಆರತಿ ಹೋಲುವುದು, ಕೈಕಾಲು, ಅಂಗಾಲುಗಳಿಗೆ ಮದರಂಗಿ ಬರೆಯುವುದು, ದೇವರು ತರುವ ಕಾರ್ಯದಲ್ಲಿ ಗಂಗೆ ತರುವ ಗಡೆಗಗಳಿಗೆ ಸುಣ್ಣದಿಂದ ಚಿತ್ತಾರ ಬರೆಯುವುದು, ಮದುವೆ ಮನೆಯ ಗೋಡೆ ಮೇಲೆ ಹಸೆ ಬರೆಯುವುದು, ಗೋಡೆ ಗೂಡುಗಳಿಗೆ ಕೆಮ್ಮಣ್ಣಿನ ಹಾಗೂ ಮಡಕೆ ಮಸಿಯಿಂದ ಚಿತ್ರ ಬರೆಯುವುದು, ಮಾತಿನ ಗಿಣಿ, ಅರಗಿಣಿಗಳಿಗೆ ಹಸಿರು ಹಚ್ಚಿ ಗೋಡೆಗೇರಿಸುವುದು ಇದೆಲ್ಲಾ ಯಾಂತ್ರಿಕ ವಸ್ತುಗಳ ವಿಸ್ತರಣೆಯಾಗಿ ಶ್ರಮ ಸಂಸ್ಕೃತಿಯನ್ನು ಹತ್ತಿಕ್ಕುತ್ತಿವೆ. ಇದರಿಂದ ಸಾಮಾಜಿಕ ಕೊಡು–ಕೊಳುವ ಕ್ರಿಯೆ ಮೊಟಕಾಗಿ ಮಾನವ ಬಾಂಧವ್ಯ ಕಡಿಮೆಯಾಗಿ ದ್ವೇಷಾಸೂಯೆಗಳು ಗ್ರಾಮೀಣ ಜನರಲ್ಲಿ ಹೆಚ್ಚಾಗಲು ಕಾರಣವಾಗಿವೆ.

ಜನಪದ ಅಡಿಗೆಗಳದೂ ಅದೇ ಗತಿ. ಲವಂಗ ಕಡ್ಡಿ, ಸಕ್ಕರೆ ಕಡ್ಡಿ, ಗಾರಿಗೆ, ಹಪ್ಪಳ, ಕೋಡುಬಳೆ, ಖರ್ಜಿಕಾಯಿ, ಮಜ್ಜಿಗೆ, ಮೆಣಸಿನಕಾಯಿ, ಕುರುಡಗಿ, ರೊಟ್ಟಿ, ಶಾವಗೆ, ತಂಬಿಟ್ಟು, ಪಾಲಿಟ್ಟು, ವಿವಿಧ ಬಗೆಯ ಸಂಡಿಗೆ ಇವುಗಳನ್ನೆಲ್ಲ ಇಂದು ಮಾರುಕಟ್ಟೆಯಲ್ಲಿ ಕೊಂಡು ತರಬಹುದು. ಅವುಗಳ ಅಂದ ಚೆಂದವೂ ಮೋಹಕವಾಗಿರುತ್ತವೆ. ಇದರಿಂದ ಸಮಾಜದ ಹೆಣ್ಣುಮಕ್ಕಳು ಒಟ್ಟಾಗಿ ಕಲೆತು ಆನಂದಿಸುವ, ಅಭಿಮಾನದಿಂದ ಬೀಗಿ ಬಡಿಸುವ ಸುಯೋಗ ತಪ್ಪಿ ಹೋಗಿದೆ. ಸಂಕ್ರಾಂತಿಯಲ್ಲಿ ಹಂಚುವ ಬಣ್ಣ ಬಣ್ಣದ ಸಕ್ಕರೆ ಗೊಂಬೆಗಳನ್ನು ಹೆಂಗಳೆಯರು ಕಲೆತು ತಿಂಗಳಾನುಗಟ್ಟಲೇ ಮಾಡುತ್ತಿದ್ದರು. ಇದರಿಂದ ಸ್ನೇಹ,

ಸೌಹಾರ್ದತೆ ಹೆಚ್ಚಾಗಿ ಪ್ರೀತಿ ವಿಶ್ವಾಸ ಅಧಿಕವಾಗುತ್ತಿತ್ತು. ದುರಂತ ಎಂದರೆ, ಇದೆಲ್ಲವೂ ಇಂದು ಮಾರುಕಟ್ಟೆಯಲ್ಲಿ ಸುಲಭವಾಗಿ ದೊರೆಯುವ ವಸ್ತುಗಳಾಗಿವೆ. ಯಾವುದೋ ಯಂತ್ರ, ಎಲ್ಲೋ ಮೂಲೆಯಲ್ಲಿ ಇವನ್ನು ತಯಾರಿಸಿ ಪ್ಯಾಕ್ ಮಾಡಿ ತಳ್ಳಿ ಬಿಡುತ್ತವೆ. ಇದಾವುದರಲ್ಲೂ ಹ್ಯೂಮನ್ ಟಚ್ ಇರುವುದಿಲ್ಲ. ಇದು ಜಾಗತೀಕರಣದ ಫಲಿತಾಂಶ,

ಊರಿನ ಬಡಗಿ ಮಾಡುತ್ತಿದ್ದ ನೊಗ, ನೇಗಿಲು, ಕುಂಟೆ, ಕೂರಗೆ, ಮೇಳ, ಗಾಡಿ, ಬಂಡಿ ಇವೆಲ್ಲ ಇಂದು ಬೇರೆ ಬೇರೆ ರೂಪ ಪಡೆದಿವೆ. ಆಗೆಯುವ, ಕೆತ್ತುವ ಸಲಕರಣೆಗಳಾದ ಗುದ್ದಲಿ, ಹಾರೆ, ಸನಕೆ, ಪಿಕಾಸಿಗಳಾದ : ಕತ್ತರಿಸಲು ಉಪಯೋಗಿಸುತ್ತಿದ್ದ ಕೊಡ್ಲಿ, ಕತ್ತಿ, ಪಿಚ್ಚು ಕತ್ತಿ, ಇಬ್ಬಾಯಿ ಕತ್ತಿ, ಕುಡ್ಲು, ಪೀಚು ಕುಡ್ಲುಗಳಾಗಲೀ : ಬಿದರಿನಿಂದ ಹೆಣೆಯುತ್ತಿದ್ದ ಬುಟ್ಟಿ, ಕೊಂಗ, ಮೊರ, ಕೊಂಬೆ, ತಡಿಕೆ, ಮಂಕರಿ, ಮಂಜರ, ತೊಟ್ಟಿಲು, ಬಿದರು ಪಟ್ಟಿಗೆ, ಬೀಡಿ, ಕುಕ್ಕೆ, ಚಿಬ್ಬಲುಗಳಾಗಲೀ : ನೊಸೆ ಹುಲ್ಲಿನ ಬುಟ್ಟಿ, ಕೈ ಪೆಟಾರಿ, ಸೊಸೆ ಕುಕ್ಕೆ, ಕೈಕುಕ್ಕೆ – ಇವೆಲ್ಲ ಇಂದು ಪರ್ಯಾಯ ವಸ್ತುಗಳಿಂದ ಬೇರೆ ಬೇರ ರೂಪ ಪಡೆದು ರೂಢಿಗೆ ಬರುತ್ತಿರುವುದು ನಾಗರಿಕ ದೃಷ್ಟಿಯಿಂದ ಒಳ್ಳೆಯದೇ ಆದರೆ, ಜಾಗತಿಕ ಮಟ್ಟದಲ್ಲಿ ಅವು ಗುರುತಿಸಿಕೊಂಡಾಗ ಒಂದು ಸಂಸ್ಕೃತಿಯ ನಿಖರತೆಯನ್ನು ಹೇಳಲಾಗುವುದಿಲ್ಲ. ಜೊತೆಗೆ ಜಾಗತೀಕರಣದಿಂದಾಗಿ ಅವು ಕರಕುಶಲ ಕೌಶಲ್ಯ (Crafts manship) ವನ್ನು ಕಳೆದುಕೊಳ್ಳುವ ಸಂಭವ ಹೆಚ್ಚು.

ಇಂದು ಮರದಿಂದ ಮಾಡಿದ ಸೋಮ ಮರೆಯಾಗುವ ಪ್ರಮೇಯವಿದೆ. ಅದಕ್ಕೆ ಪರ್ಯಾಯವಾಗಿ ಕಾಗದದ, ರಟ್ಟಿನ ಹೊಟ್ಟಿನ ಸೋಮ ಹುಟ್ಟುಕೊಳ್ಳಲೂಬಹುದು. ಚರ್ಮದ ವಾದ್ಯಗಳಾದ ತಮಟೆ, ಡೊಳ್ಳು, ಡಮರುಗ, ಚೌಡಿಕೆ ದಮ್ಮಡಿ ಇವುಗಳಿಗೆ ಬೇಡಿಕೆ ಕಡಿಮೆಯಾಗಲೂಬಹುದು. ತೊಗಲು ಗೊಂಬೆಗಳಂತೂ ನಶಿಸುವ ಸ್ಥಿತಿಯಲ್ಲಿವೆ. ಜಾಗತೀಕರಣದಿಂದಾಗಿ ಸೌಂದರ್ಯಾನ್ವೇಷಣೆ (Aesthetic Sense) ರಚನಾತ್ಮಕ ಬುದ್ಧಿ (Creative Wisdom) ಮಾಯವಾಗಿ ಜನಪದ ಕರಕುಶಲ ಕಲೆಗಳು ಈ ರಾಷ್ಟ್ರದ ಸ್ವತ್ತಾಗುವ ಬದಲು ಅನ್ಯರಾಷ್ಟ್ರಗಳ ಸ್ವತ್ತಾಗಿಯೂ ಚರಿತ್ರೆಯಲ್ಲಿ ಎಲ್ಲಿಯೂ ನೆಲೆಯಿಲ್ಲದಂತಾಗುತ್ತವೆ. ಜಾಗತೀಕರಣದಿಂದಾಗಿ ಈ ಎಲ್ಲಾ ಜನಪದ ಕರಕುಶಲ ಕಲೆಗಳು ಬದುಕಿಗೆ ಮೆರಗನ್ನು ಕೊಡುವುದಿರಲಿ, ಆರ್ಥಿಕ ಭದ್ರತೆಯನ್ನು ಕೊಡಲಾರವು.

ಇಂದು ಅಪಾರದರ್ಶಕ, ಅರೆಪಾರದರ್ಶಕ, ಪಾರದರ್ಶಕ, ಹೊಳಪುಳ್ಳ ಹೊಳಪಿಲ್ಲದ ಅನೇಕ ಬಗೆಯ ನಿತ್ಯೋಪಯೋಗಿ ವಸ್ತುಗಳಾದ ತಟ್ಟೆ, ಬಟ್ಟಲು, ಕಪ್ಪು, ಸಾಸರು, ಆಟಿಕೆಗಳು, ಹೂದಾನಿ, ಕುಂಡಲಿ, ಹೂಜಿ, ಪ್ರಾಣಿ, ಪಕ್ಷಿ, ಮಾನವ ಆಕೃತಿಗಳು ಹಾಗೂ ಅಲಂಕಾರಿಕ ಕುರಕುಶಲ ವಸ್ತು ಉತ್ಪನ್ನಗಳು ಕುಂಬಾರಿಕೆಯ ವಿಸ್ತರಣೆಗಳಾಗಿ ಜಾಗತಿಕ ಬೇಡಿಕೆಗೆ, ಸ್ಪರ್ಧಾತ್ಮಕ ಮಾರುಕಟ್ಟೆಗೆ ಲಗ್ಗೆಯಿಡುತ್ತಿವೆ.

ಶಿಲಾ ಕೆತ್ತನೆ (Stone Carving), ಲೋಹ ಕೆತ್ತನೆ (Metal Carving). ಹಸ್ತಿದಂತ ಕೆತ್ತನೆ(Ivory Carving), ಕೊಂಬು – ಅಸ್ಥಿ ಕೆತ್ತನೆ (Horn and bone Carving), ಶಂಕಚಿಪ್ಪು ಕೆತ್ತನೆ (Conch and Shell), ಸ್ವರ್ಣಗಾರಿಕೆ (Gold smith), ಲೋಹ ಎರಕ ಕಲೆ (Metal Casting), ಕಂಚು ಮೂರ್ತಿ ಶಿಲ್ಪ ಕಲೆ (Bronze casting), ಲೋಹ ತಗಡು (Metal ..........) ಮುಂತಾದ ಕರಕುಶಲ ಕಲೆಗಳು ಕಮ್ಮಾರಿಕೆಯ ವಿಸ್ತರಣೆಗಳೇ ಆಗಿವೆ. ಮರದ ಕೆತ್ತನೆ(Wood Carving) ಮರಶಿಲ್ಪ (Wood salfuse), ಹುಡುಗು ಶಿಲ್ಪ (Inlay work), ಅರಗು ಲೇಪಿತ ಕುಶಲ ವಸ್ತು (Cae and handwork articles), ಗೊಂಬೆ ಮತ್ತು ಆಟಿಕೆ ಸಾಮಾನು (Doll & Toys), (Bamboo Mat works), ಹುಲ್ಲಿನ ಬುಟ್ಟಿ ಹಾಸಿಗೆ (Grass Basket Mat Works) ಇವು ಬಡಿಗಾರಿಕೆಯ ವಿಸ್ತರಣೆಗಳು,

ಕೈ ಮಗ್ಗದ ವಸ್ತುಗಳು ಕಸೂತಿ (Handloom Warm Fabricly) ವಸ್ತ್ರಕಲೆ, ಬಟ್ಟೆ, ಕನ್ನಡಿ, ಮುತ್ತು ಕಸೂತಿ ವಸ್ತ್ರ (Embroidery & Aplique) ಕಲೆ, ಹೊದಿಕೆ ವಸ್ತ್ರ (Show rugs) ಹಾಸು ಮತ್ತು ಪ್ರಾರ್ಥನಾ ಹಾಸು ಕಲೆ ಮುಂತಾದವುಗಳು ವಸ್ತ್ರಗಾರಿಕೆಯ ವಿಸ್ತರಣೆಗಳಾಗಿವೆ.

ಜನಪದ ಕರಕುಶಲ ವಸ್ತುಗಳು ಪ್ರಾಚೀನ ಕಾಲದಿಂದಲೂ ವಾಣಿಜ್ಯ ಹಾಗೂ ಆರ್ಥಿಕ ಮಹತ್ವವನ್ನು ಸಾಧಿಸಿವೆ. ದೇಶದ ಸಂಪದ್ಭರಿತ ಕರಕುಶಲ ಕಲಾ ಪರಂಪರೆಯನ್ನು ಉಳಿಸುವ, ಅಭಿವೃದ್ಧಿಪಡಿಸುವ ಕೆಲಸ ಸುಲಭ ಸಾಧ್ಯವಾಗಿಲ್ಲ. ಶತಮಾನಗಳಿಂದಲೂ ಭಾರತದಲ್ಲಿ ಕರಕುಶಲ ಕಲಾವೃತ್ತಿ ಸಂಘಗಳು ಹುಟ್ಟಿಕೊಂಡು ಅವುಗಳ ಅಸ್ತಿತ್ವಕ್ಕಾಗಿ ಆಂದೋಲನ ಚಳುವಳಿಗಳನ್ನು ನಡೆಸುತ್ತಾ ಬಂದಿವೆ.

ಕರಕುಶಲಿಗರ ಸಂಘಟನೆಗಳನ್ನು ವೃತ್ತಿ ಸಂಘ ಅಥವಾ ಶ್ರೇಣಿ ಎನ್ನುತ್ತಾರೆ, ಈ ಶ್ರೇಣಿಗಳು ವೃತ್ತಿ ನಿಯಮ ರೂಪಣೆ, ಅವುಗಳ ಜಾರಿ, ಸದಸ್ಯರಿಗೆ ನ್ಯಾಯ ಒದಗಿಸಿ ಕೊಡುವ ಶಾಸಕಾಂಗ, ಕಾರ್ಯಾಂಗ ನ್ಯಾಯಾಂಗಗಳ ಕಾರ್ಯವೆಸಗುತ್ತಾ ಬಂದಿವೆ. ಕ್ರಮೇಣ ಇವು ಸ್ವಾಯತ್ತ ಸಂಸ್ಥೆಗಳಾದರೆ, ಇವುಗಳ ಪ್ರಮುಖರು ರಾಜ್ಯದ ಕ್ರಿಯಾಶೀಲ ವ್ಯವಹಾರದಲ್ಲಿ ಭಾಗಿಗಳಾಗುವ, ಕೆಲ ಸಂದರ್ಭಗಳಲ್ಲಿ ಅರಸರ ಸಲಹೆಗಾರರಾಗುವಷ್ಟು ಪ್ರಭಾವಶಾಲಿಯಾದರು. ಒಂದು ಕಾಲಕ್ಕೆ ಕರಕುಶಲಿಗಳ ಶ್ರೇಣಿಗಳು ಇಂದಿನ ಬ್ಯಾಂಕುಗಳಂತೆ ಕೆಲಸ ಮಾಡಿದವು. ರಾಷ್ಟ್ರದ ಸಮಾಜೋ–ಆರ್ಥಿಕ ಜೀವನದಲ್ಲಿ ತುಂಬಾ ಮಹತ್ವದ ಪಾತ್ರವನ್ನು ವಹಿಸಿದವು.

ಪ್ರಾಚೀನ ಭಾರತದಲ್ಲಿ ಬಹಳ ಪ್ರಭಾವಶಾಲಿಯಾಗಿದ್ದ ಕರಕುಶಲಿಗಳ ಸಂಘ ಅಥವಾ ಶ್ರೇಣಿ 18ನೇಯ ಶತಮಾನದ ಉತ್ತರಾರ್ಧದ ಹೊತ್ತಿಗೆ ಶೋಚನೀಯ ಸ್ಥಿತಿಯನ್ನು ತಲುಪಿದವು. ಪ್ರಾಯಶಃ ಇದಕ್ಕೆ ಪ್ರಮುಖ ಕಾರಣ, ಕೈಗಾರಿಕಾ ಕ್ರಾಂತಿ ಇರಬೇಕು. ಇದು ಭಾರತಕ್ಕಷ್ಟೇ ಸೀಮಿತವಾಗಲಿಲ್ಲ, ಪ್ರಪಂಚದ ಕರಕುಶಲ ಕಲಾ ಪ್ರಪಂಚವನ್ನೇ ಆವರಿಸಿತು. 19ನೇಯ ಶತಮಾನದ ಹೊತ್ತಿಗೆ

ಪ್ರಪಂಚದಾದ್ಯಂತ ಜಾಗೃತಿ ಉಂಟಾಗಿ ಅಲ್ಲಲ್ಲಿ ಚಳುವಳಿಯ ಸ್ವರೂಪವನ್ನು ಪಡೆಯಿತು. ಇಂಗ್ಲೆಂಡಿನಲ್ಲಿ ಜಾನ್ ರಸ್ಕಿನ್, ವಿಲಿಯಂ ಮಾರಿಸ್, ಸ್ವೀಡನ್ ನಲ್ಲಿ ಅರ್ಥರ್ ಹ್ಯಾಜಾಲಿಯಕ್ ಮುಂತಾದವರು ಈ ಚಳುವಳಿಗೆ ಒಂದು ನಿರ್ದಿಷ್ಟ ರೂಪವನ್ನು ತಂದು ಕೊಟ್ಟರು. ಇದು 20ನೆಯ ಶತಮಾನದ ಆರಂಭದಲ್ಲಿ ವ್ಯಾಪಕ ಪ್ರಚಾರವನ್ನು ಪಡೆಯಿತು.

ಭಾರತದ ಕರಕುಶಲ ಕಲೆಗಳೂ ಕೂಡ ಬ್ರಿಟಿಷರ ಆಡಳಿತ ಧೋರಣೆ, ಯಂತ್ರೋಪಕರಣಗಳ ಬಳಕೆಯ ಹೆಚ್ಚಳಿಕೆ, ಯಂತ್ರ ನಿರ್ಮಿತ ವಸ್ತುಗಳ ಬಗೆಗೆ ಜನರಲ್ಲಿ ಬೆಳೆದ ಮೋಹಗಳಿಂದಾಗಿ ಕಷ್ಟವನ್ನನುಭವಿಸಬೇಕಾಯಿತು. ಪುನಶ್ಚೇತನದ ಪ್ರಯತ್ನ ಕಾರ್ಯಗಳು ವಿಫಲವಾದವು, ಪುಣ್ಯಕ್ಕೆ 1951ರ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಪ್ರಾಶಸ್ತ್ಯ ದೊರಕಿತು. ಇದರ ಅಭಿವೃದ್ಧಿ ಕಾರ್ಯವನ್ನು ಗ್ರಾಮೋದ್ಯೋಗ ಮಂಡಲಿಗೆ ವಹಿಸಲಾಯಿತು. ಗಾಂಧೀಜಿಯವರ ಸ್ವದೇಶಿ ಚಳುವಳಿ ಈ ಜನಪದ ಕಲಾ ಪರಂಪರೆಗೆ ಇಂಬುಗೊಟ್ಟಿತು. 1952 ರಲ್ಲಿ ಭಾರತ ಸರ್ಕಾರ, "ಅಖಿಲ ಭಾರತ ಕರಕುಶಲ ಮಂಡಲಿ"ಯನ್ನು ಸ್ಥಾಪನೆ ಮಾಡಿ, ಕಮಲಾದೇವಿ ಚಟ್ಟೋಪಾಧ್ಯಾಯ ಅವರನ್ನು ಮಂಡಲಿಯ ಅಧ್ಯಕ್ಷರನ್ನಾಗಿ ಮಾಡಿತು. ಇವರ ನೇತೃತ್ವದಲ್ಲಿ ಅರ್ಥಶಾಸ್ತ್ರಜ್ಞರು, ಸಮಾಜ ಕಾರ್ಯಕರ್ತರು ಮತ್ತು ಮಾರುಕಟ್ಟೆ ಪರಿಣತರನ್ನೊಳಗೊಂಡ ಒಂದು ಸಮಿತಿ ವ್ಯಾಪಕ ಸಮೀಕ್ಷೆ ನಡೆಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ವರದಿಯೊಪ್ಪಿಸಿತು. ತಕ್ಷಣ ಕಾರ್ಯ ಪ್ರವೃತ್ತವಾದ ಸರ್ಕಾರ ಕರಕುಶಲ ಮಂಡಳಿಗಳನ್ನು ಸ್ಥಾಪಿಸಿ ಅಳಿವಿನ ಸ್ಥಿತಿಯಿಂದ ಕರಕುಶಲ ಕಲೆ ಹಾಗೂ ಕುಶಲ ಕರ್ಮಿಗಳನ್ನು ಉಳಿವಿನತ್ತ ಕಡೆ ತಂದಿತು. ಜನತೆಯಲ್ಲಿ ಅರಿವು ಮೂಡಿಸುವ ಸಲುವಾಗಿ ದೇಶ ವಿದೇಶಗಳಲ್ಲಿ ಕರಕುಶಲ ವಸ್ತು ಪ್ರದರ್ಶನಗಳನ್ನು ಏರ್ಪಡಿಸುವ ಮೂಲಕ ಕಲಾ ವಸ್ತುಗಳಿಗೆ ಬೇಡಿಕೆ ಹಾಗೂ ಪ್ರೋತ್ಸಾಹವನ್ನು ತಂದು ಕೊಟ್ಟಿತು. ಇಂದು ಜನಪದ ಕುಶಲ ಕಲೆಗಳು ಅತ್ಯಧಿಕ ವಿದೇಶಿ ವಿನಿಮಯ ತರುವ ಮೂಲಕ ಭಾರತ ಅಭಿವೃದ್ಧಿಶೀಲ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವ ಪಾತ್ರ ವಹಿಸುತ್ತಿದೆ ಎನ್ನುವಾಗಲೇ ಜಾಗತೀಕರಣ ಮತ್ತೆ ಜನಪದ ಕರಕುಶಲ ಕಲೆಗಳಿಗೆ ಮಾರಕವಾಗುವ ಅಪಾಯವಿದೆ. ಇಂದು ಭಾರತದಾದ್ಯಂತ ಕರಕುಶಲ ಕಲೆಗಳು ಪುರ್ನರುಜೀವನಗೊಂಡು ಹತ್ತು ಹಲವು ಪ್ರಾದೇಶಿಕ ಭಿನ್ನತೆ ಹಾಗೂ ವಿಶೇಷತೆಗಳನ್ನು ಕಾಪಾಡಿಕೊಂಡು ಹೊಸತನ್ನು ಅಂಗೀಕರಿಸುತ್ತಾ ಈ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಯ ಫಲದಿಂದ ಜಾಗತೀಕರಣದ ಮಾಯಾ ಮುಷ್ಟಿಯ ಹಿಡಿತದಲ್ಲಿ ತನ್ನತನವನ್ನು ಉಳಿಸಿಕೊಳ್ಳಬೇಕಾಗಿದೆ.

ಇಂದು ಜನಪದ ಕರಕುಶಲ ಕಲೆಗಳು, ಕುಶಲ ಕಲೆಗಾರರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಜಾಗತೀಕರಣದಿಂದಾಗಿ ಈ ಸಮಸ್ಯೆಗಳು ಇನ್ನೂ ಜಟಿಲವಾಗುತ್ತಿವೆ. ಇಂದಿನ ಜನಸಾಮಾನ್ಯರ ಐಶಾರಾಮ ಪ್ರವೃತ್ತಿಗೆ ತಕ್ಕ ಸುಖಾಪೇಕ್ಷಿತ (Comfort oriented) ಕರಕುಶಲ ವಸ್ತುಗಳ ಹೊಸ ಹೊಸ ವಿನ್ಯಾಸಗಳನ್ನು ಜನಪದ ಕುಶಲ ಕರ್ಮಿ ಕಂಡುಕೊಳ್ಳಬೇಕಾಗಿದೆ. ಅದಕ್ಕೆ ತಕ್ಕ

ನಿರ್ಮಾಣ ಕೌಶಲ್ಯ (Inventive skill) ದ ಕೊರತೆಯನ್ನು ನೀಗಿಕೊಳ್ಳಬೇಕಾಗಿದೆ. ಕರ್ನಾಟಕದ ಕರಕುಶಲ ಕಲೆಗಳು ಪುನಶ್ಚೇತನ (Revive) ಮಾಡಿಕೊಳ್ಳಬೇಕಾಗಿದೆ. ಚನ್ನಪಟ್ಟಣದ ಬಣ್ಣದ ಗೊಂಬೆಗಳು, ಬೀದರಿನ ಬಿದರಿ ಕಲೆ, ನಂಜನಗೂಡಿನ ಕಡಕೊಳದ ಜೊಂಡಿನ ಚಾಪೆ (ಮಂದಲಿಗೆ)ಗಳು, ಕಿನ್ನಾಳದ ಗೊಂಬೆಗಳು, ಗೋಕಾಕದ ಜಿನಗಾರರು ಮಾಡುವ ಬಣ್ಣದ ಆಟಿಕೆಗಳು, ಕೌದಿ, ಹಸಗೊಂಡ, ಬುಟ್ಟಿ ಚಿತ್ತಾರಗಳು, ರೇಷ್ಮೆ ಗೂಡಿನ ಹಾರಗಳು, ಆದಿವಾಸಿಗಳು ತಯಾರಿಸುವ ತಾಳೆಗರಿ, ತೆಂಗಿನ ಸೋಗೆಗಳ 'ತತ್ತರ ಕೊಡೆ' ಗಳು ಹೊಸತನಕ್ಕೆ ಹೊಂದಿಕೊಂಡು ಬೇಡಿಕೆಯ ವಸ್ತುಗಳಾಗಬೇಕಾಗಿವೆ. ಅದಕ್ಕಾಗಿ ತಯಾರಿಕೆ, ಪ್ರಾತ್ಯಕ್ಷಿಕೆ ಮತ್ತು ಮಾರಾಟ ವ್ಯವಸ್ಥೆಯಾಗಬೇಕಾಗಿದೆ. 'ಕುಲಕಸುಬು' ಎಂಬ ಸಂವೇದನೆ ಕಡಿಮೆಯಾಗುತ್ತಿರುವುದರಿಂದ ಅನ್ಯರಿಗೆ ಇವುಗಳ ಬಗ್ಗೆ ತರಬೇತಿ ಕೊಡಬೇಕಾಗಿದೆ. ಅವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕಾಗಿದೆ. ಗ್ರಾಮೀಣ ಕರಕುಶಲಿಗರಿಗೆ ನಗರ ಕರಕುಶಲಿಗರಿಗೆ, ಆದಿವಾಸಿ, ಕರಕುಶಲಿಗರಿಗೆ ಬೇರೆ ಬೇರೆ ರೀತಿಯ ತರಬೇತಿ ಕೊಟ್ಟು – ಒಟ್ಟಾರೆ, ಜಾಗತೀಕರಣದ ಪರಿಣಾಮಗಳನ್ನು ಸಮರ್ಥವಾಗಿ ಎದುರಿಸುವಂತೆ ಅವರಲ್ಲಿ ಆತ್ಮಸ್ಥೈರ್ಯವನ್ನು ತಂದು ಕೊಡುವ ತುರ್ತು ಕೆಲಸವನ್ನು ಸರ್ಕಾರ, ಸಂಘ ಸಂಸ್ಥೆಗಳು ಎಂದಿಗಿಂತಲೂ ಇಂದು ಹೆಚ್ಚಾಗಿ ಮಾಡಬೇಕಾಗಿದೆ. ಜಾಗತೀಕರಣ ಏಕರೂಪಿ ಮತ್ತು ವಿಶ್ವವ್ಯಾಪಿ ಪರಿಕಲ್ಪನೆಯಲ್ಲವೆಂಬುದನ್ನು ತೋರಿಸಿಕೊಡಬೇಕಾಗಿದೆ. (Globalisation is not as uniformas universal a concept as well)

ಆಕರ: ಜನಪದ ಮತ್ತು ಜಾಗತೀಕರಣ ಸಂ: ಕೆರೆಮನೆ ಶಂಭು ಹೆಗ್ಗಡೆ

## 4.4 ಅನ್ನ ಹಳಸುವುದಿಲ್ಲ ಮಣ್ಣಿನ ಬುತ್ತಿಯಲ್ಲಿ (ಓದು ಪಠ್ಯ)

**ಸುಬ್ಬು ಹೊಲೆಯಾರ್**

ವರ್ತಕರು ಕಾದಿದ್ದಾರೆ
ಜಗತ್ತಿನ ಮಾರುಕಟ್ಟೆಯಲ್ಲಿ
ಆಕಾಶದ ನೀಲಿಯನ್ನು ಕರೆದು
ಆಕಾಶದ ಗೋಲಿಯೆಂದು ಮಾರಾಟ ಮಾಡಲು.

ಯಜ್ಞ ಕುಂಡದ ಬೆಂಕಿ
ನೆಲವ ಸುಟ್ಟು ಹವಿಸ್ಸನ್ನು ಬೇಡುತಿದೆ
ಬೂದಿ ಮಾಡಲು ಜಗತ್ತನ್ನು
ನೆರವಾಗಿ ಮಳೆರಾಯನ ಮಕ್ಕಳೆಲ್ಲಾ

ಅಗ್ನಿ ಶಿಖರದಲ್ಲಿ ಬೆಳ್ಳಿನೊರೆಯ ಹಾಲು
ಕುಡಿದು ಅಮೃತ ಶಿಲೆಯಾದಳು, ಗರ್ಭ
ಗುಡಿಯಲ್ಲಿ ನೀರು ನಿಂತು
ಅಳುವಿನ ಶ್ಲೋಕ ಹುಟ್ಟಿತು ಮೃಗದ ಕಣ್ಣಿಗೆ ಮನಸೋತು
ಕಾಡು ಮಕ್ಕಳು ಈಗ ಊರು ತುಂಬ ಏಕಲವ್ಯರ
ಸಂತತಿ ಅರ್ಜುನ ಗುರುವಿನ ಸಂಕಟ ಈಗ.

ಕೊಲ್ಲದಿರಿ ಜೀವಗಳನ್ನು
ಮಣ್ಣಿನ ಬುತ್ತಿಯಲ್ಲಿ ಎಲ್ಲರಿಗೂ ಅನ್ನವಿದೆ
ಸಹಜ ಸಾವಾಗಲು ಬಿಡಿ
ಎಲ್ಲರ ಕಣ್ಣುಗಳಲ್ಲೂ ನೀಲಿ ಬಣ್ಣವಿದೆ.

ಗಂಗೆ, ಜೀವ ಜಲದೇವಿ ತಾಯಿ ಭೂದೇವಿ
ಈಗ ತಕ್ಕಡಿಯಲ್ಲಿ ತೂಕದ ಕಲ್ಲಿನಲ್ಲಿ
ಅಳೆದು ಸುರಿದು
ಮಾರಲಾಗುತ್ತಿದೆ ನಿಜವೇ?
ಮರ್ಮಾಘಾತದ ಸುದ್ದಿ ಎಲ್ಲೆಡೆ ಮತ್ತು
ಕ್ಷುಲ್ಲಕ ಸತ್ಯಗಳು ನಗರಗಳಲ್ಲಿ.

ಸೇರಿಕೊಂಡಿದೆ ಕಂಪ್ಯೂಟರಿನೊಳಗೆ
ಮಣ್ಣಿನ ಮಗು
ಬಿಡಿಸಿಕೊಡಿ ನೀರ ಕುಡಿಸಬೇಕು ಅದಕೆ
ಒಬ್ಬೊಬ್ಬರೇ ಮಾತನಾಡಿಕೊಳ್ಳುತ್ತಿದ್ದಾರೆ ಗಾಳಿಯಲ್ಲಿ
ನಿಲ್ಲಿಸಿ ಕೇಳಿದರೆ ಗಾಳಿಯೇ ನಿಂತ ಹಾಗೆ ಆಡುತ್ತಾರೆ.

ಆದರೂ…
ಇಷ್ಟೊಂದು ಖಾಲಿ ಜಗತ್ತನ್ನು ಯಾರು ತುಂಬಲಿದ್ದಾರೆ…?

* * * *

ಆಕರ: ಎಲ್ಲರ ಬೆರಳಲ್ಲೂ ಅಂಟಿಕೊಂಡ ದುಃಖವೇ… – ಸುಬ್ಬು ಹೊಲೆಯಾರ್